ಓಂ

॥ ಜೈ ಶ್ರೀ ಗುರುದೇವ್ ॥



# ಆದಿಚುಂಚನಗಿರಿ

Adichunchanagiri

Volume : 37 Issue : 7 Bengaluru MARCH 2020 Pages-36 Rs.10/-

ಸಂಪುಟ : 37 ಸಂಚಿಕೆ : 7 ಬೆಂಗಳೂರು ಮಾರ್ಚ್ 2020 ಪುಟಗಳು–36 ಬೆಲೆ : 10 ರೂ.




## ಪರಮಪೂಜ್ಯ ಮಹಾಸ್ವಾಮಿಗಳವರ 7ನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವ





# ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

**ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.**

ಪರಮಪೂಜ್ಯ ಜಗದ್ಗುರು ಯುಗಯೋಗಿ ಶ್ರೀ ಶ್ರೀ ಶ್ರೀ ಪದ್ಮಭೂಷಣ
ಡಾ॥ಬಾಲಗಂಗಾಧರನಾಥ ಮಹಾಸ್ವಾಮಿಗಳವರ ದಿವ್ಯ ಆಶೀರ್ವಾದಗಳೊಡನೆ

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ
ಡಾ॥ನಿರ್ಮಲಾನಂದನಾಥ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ

## ಶ್ರೀಕಾಲಭೈರವೇಶ್ವರಸ್ವಾಮಿ ದೇವಾಲಯದ

# ಮಹಾ ಕುಂಭಾಭಿಷೇಕ ಮಹೋತ್ಸವ

**ದಿನಾಂಕ 2.3.2020 ರಿಂದ 4.3.2020ರವರೆಗೆ**

ದಿನಾಂಕ 02.03.2020 ಸೋಮವಾರ ಪ್ರಾತಃಕಾಲ 9.30 ಗಂಟೆಗೆ ಗಣಪತಿ ಹೋಮ, ತೀರ್ಥ ಸಂಗ್ರಹಣ, ಆಚಾರ್ಯಾದಿ ಋತ್ವಿಗ್ವರಣೆ, ಬೆಳಗ್ಗೆ 10.30 ಗಂಟೆಗೆ ಧರ್ಮಸಭೆ ಸಾಯಂಕಾಲ 5.00 ಗಂಟೆಗೆ ವಾಸ್ತು ಹೋಮ, ಮೃತ್ಸಂಗ್ರಹಣ ಅಂಕುರಾರ್ಪಣ, ರಕ್ಷಾಬಂಧನ ಕಲಾಕರ್ಷಣ ಯಾಗಶಾಲಾ ಪ್ರವೇಶ, ಬ್ರಹ್ಮ ಕಲಶಾದಿ ಸ್ಥಾಪನೆ, ಪೂಜಾ ಹೋಮಾದಿಗಳು ಮತ್ತು ಮಹಾ ಮಂಗಳಾರತಿ

ದಿನಾಂಕ 03.03.2020 ಮಂಗಳವಾರ ಪ್ರಾತಃಕಾಲ 06.00 ಗಂಟೆಗೆ ಪುಣ್ಯಾಹವಾಚನ, ವಿಶೇಷಸಂಧಿ ದ್ವಾರತೋರಣ ಪೂಜೆ, ವೇದ ಪಾರಾಯಣ ಮಂಟಪಾರ್ಚನೆ, ಹೋಮಾದಿಗಳು ಮತ್ತು ಮಹಾ ಮಂಗಳಾರತಿ ಬೆಳಗ್ಗೆ 10.30 ಗಂಟೆಗೆ ಧರ್ಮಸಭೆ ಸಾಯಂಕಾಲ 4.30 ಗಂಟೆಗೆ ವೇದಪಾರಾಯಣ, ವಿಶೇಷ ದ್ರವ್ಯ ಹೋಮಾದಿಗಳು, ರಾಜೋಪಚಾರ, ಪ್ರಾಯಶ್ಚಿತ್ತ ಹೋಮ, ಮಹಾ ಮಂಗಳಾರತಿ, ಅಷ್ಟಬಂಧ ಸಮರ್ಪಣೆ

ದಿನಾಂಕ 04.03.2020 ಬುಧವಾರ ಪ್ರಾತಃಕಾಲ 06.00 ಗಂಟೆಗೆ ಬಿಂಬಶುದ್ಧಿ ರಕ್ಷಾಬಂಧನ, ನಾಡಿ ಸಂಧಾನ ಪೂರ್ವಕವಾಗಿ ಕಲಾತತ್ತ್ವ ಹೋಮ ಪ್ರಾಯಶ್ಚಿತ್ತಾಹುತಿ ಮಹಾಪೂರ್ಣಾಹುತಿ ಕಲಶೋದ್ವಾಹನ. ಬೆಳಗ್ಗೆ 10.30 ರಿಂದ 11.30 ಗಂಟೆಗೆ ರಾಜಗೋಪುರ, ವಿಮಾನಗೋಪುರಕ್ಕೆ ಕುಂಭಾಭಿಷೇಕ, ಮೂಲಸ್ಥಾನದಲ್ಲಿ ಕುಂಭಾಭಿಷೇಕ, ಗಣಪತಿ, ಸುಬ್ರಹ್ಮಣ್ಯ, ಮಾಳಮ್ಮ ದೇವಿ, ಸ್ತಂಭಾಂಬಿಕಾದೇವಿ ಮೂಲಸ್ಥಾನ, ಧ್ವಜ ಸ್ತಂಭ, ಬಲಿಪೀಠ, ಶ್ವಾನಸ್ಥಾನಗಳಿಗೆ ಸಂಪ್ರೋಕ್ಷಣೆ ಮಹಾ ಮಂಗಳಾರತಿ ಹಾಗೂ ತೀರ್ಥಪ್ರಸಾದ ವಿನಿಯೋಗ. ನಂತರ ಧರ್ಮಸಭೆ



ಈ ಪವಿತ್ರ ಕಾರ್ಯಕ್ರಮದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀಕಾಲಭೈರವೇಶ್ವರಸ್ವಾಮಿ ಕೃಪೆಗೆ ಪಾತ್ರರಾಗಬೇಕಾಗಿ ಕೋರುತ್ತೇವೆ.

-ವ್ಯವಸ್ಥಾಪಕರು

॥ ಜೈ ಶ್ರೀ ಗುರುದೇವ್ ॥

# ಆಶೀರ್ವಾದ



**ಆಹಾರ ನಿದ್ರಾ ಭಯ ಮೈಥುನಂ ಚ**
**ಸಾಮಾನ್ಯಂ ಏತತ್ ಪಶುರ್ಭಿನರಾಣಾಂ।**
**ಬುದ್ಧಿಃ ತೇಷಾಂ ಅಧಿಕೊ ವಿಶೇಷೋ**
**ಬುದ್ಧಿರ್ವಿಹೀನಃ ಪಶುಸ್ಸಮಾನಃ॥**

ಆಹಾರ, ನಿದ್ರೆ, ಭಯ ಮತ್ತು ಮೈಥುನ– ಈ ನಾಲ್ಕೂ ಕ್ರಿಯೆಗಳು ಮನುಷ್ಯ ಮತ್ತು ಪ್ರಾಣಿಗಳಿಗೆ ಸಾಮಾನ್ಯವಾಗಿರುವಂತಹವು. ಆದರೆ ಬುದ್ಧಿವಂತಿಕೆ ವಿಷಯದಲ್ಲಿ ಮಾತ್ರ ಮನುಷ್ಯ ಮುಂದಿರುತ್ತಾನೆ. ಮನುಷ್ಯನಾಗಿದ್ದೂ ಬುದ್ಧಿವಂತನಾಗಿ ಬದುಕದೇ ಹೋದರೆ ಆತ ಪಶುವಿಗೆ ಅಂದರೆ ಮೃಗದ ರೀತಿಯೇ ಜೀವನ ಸಾಗಿಸುವವನಾಗುತ್ತಾನೆ. ಮನುಷ್ಯನನ್ನು ಪ್ರಾಣಿಗೆ ಹೋಲಿಸುವುದು ಅವನ ಬುದ್ಧಿ ಅರಳಲಿಲ್ಲ ಎಂಬ ಕಾರಣಕ್ಕಾಗಿ. ಇಂದು ಮನುಷ್ಯ ಬದುಕಿನಲ್ಲಿ ಏನು ಬೇಕಾದರೂ ಆಗುವುದಕ್ಕೆ ಸಾಧ್ಯವಿದೆ. ನಮ್ಮಲ್ಲಿ ಎಂತೆಂಥ ಸಾಧಕರು ಆಗಿ ಹೋಗಿದ್ದಾರೆ. ತಾವು ಮಾಡಿದ ಪುಣ್ಯದ ಫಲದಿಂದ ದೇವತಾ ಸ್ಥಾನವನ್ನು ಪಡೆದವರು ಬಹಳಷ್ಟು ಮಂದಿ ಇದ್ದಾರೆ. ಅದಕ್ಕೆ ಮುಖ್ಯವಾಗಿ ಮನುಷ್ಯನಲ್ಲಿ ತಾಳ್ಮೆ ಇರಬೇಕು. ಸಹನೆ ಇರಬೇಕು. ಎಂತಹ ಕಷ್ಟಕಾಲದಲ್ಲೂ ವಿಚಲಿತನಾಗದೆ ತನ್ನ ಬಗ್ಗೆ ತಾನು ವಿಶ್ವಾಸ ಹೊಂದಿರಬೇಕು.

ಮನುಷ್ಯ ಮೊದಲಿಗೆ ತನ್ನ ಎಲ್ಲ ಅಹಂಕಾರವನ್ನು ಭಗವಂತನ ಪದತಲದಲ್ಲಿ ಅರ್ಪಿಸಬೇಕು, ನನಗಿಂತ ಎತ್ತರದಲ್ಲಿರುವವನು ನೀನು, ನಿನ್ನಿಂದ ನಾನು ಎಂಬ ಭಾವವನ್ನು ಹೊಂದಬೇಕು. ತನ್ನ ಬಗ್ಗೆ, ತನ್ನಲ್ಲಿರುವ ಶಕ್ತಿಯ ಬಗ್ಗೆ ವಿಶ್ವಾಸವನ್ನೊಂದಿರಬೇಕು. ಆ ರೀತಿ ಬದುಕಿದ್ದೇ ಆದರೆ ಎಲ್ಲರ ಬದುಕೂ ಚೆನ್ನಾಗಿರುತ್ತದೆ. ಕುವೆಂಪುರವರು ಹೇಳುತ್ತಾರೆ–ಎಷ್ಟು ದೇವರ ನಂಬಿದರೇನು ಒಂದಿಷ್ಟು ನಂಬದಿರೆ ನಿನ್ನ ನೀನು.... ಎಲ್ಲ ದೇವರನ್ನು ನಂಬಿ ನಿನ್ನ ಬಗ್ಗೆ, ನಿನ್ನಲ್ಲಿರುವ ಶಕ್ತಿಯ ಬಗ್ಗೆ ನಿನಗೇ ನಂಬಿಕೆ ಇಲ್ಲ ಎಂದರೆ ಯಾರೂ ಏನನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮನ್ನು ನಾವು ನಂಬುವಂತಹ, ನಮ್ಮಲ್ಲಿರುವ ಶಕ್ತಿ ಏನು ಎಂಬುದನ್ನು ಅರಿತುಕೊಳ್ಳಬೇಕು. ಮನುಷ್ಯ ತನ್ನ ವ್ಯಕ್ತಿತ್ವದ ಆಳಕ್ಕೆ ಇಳಿದಾಗ ಮಾತ್ರ ಅವನಿಗೆ ಆತನಲ್ಲಿರುವ ಶಕ್ತಿಯ ಅರಿವಾಗುತ್ತದೆ, ದೈವತ್ವದ ಅರಿವಾಗುತ್ತದೆ. ಆದ್ದರಿಂದ ಮನುಷ್ಯ ಕಷ್ಟಗಳು ಬಂದ ಸಂದರ್ಭದಲ್ಲಿ ಅವುಗಳನ್ನೆಲ್ಲ ಸಹಿಸಿಕೊಂಡು ಇದ್ದದ್ದೇ ಆದರೆ ಬದುಕಿನಲ್ಲಿ ದೊರೆಯುವ ಆನಂದಕ್ಕೆ ಯಾವುದೂ ಸಾಟಿಯಾಗುವುದಿಲ್ಲ. ಸತಿ ಸಾವಿತ್ರಿ ಅಥವಾ ಸತ್ಯವಾನ್ ಸಾವಿತ್ರಿಯ ಕಥೆ ಎಲ್ಲರಿಗೂ ತಿಳಿದಿರುವ ಸಂಗತಿಯೇ. ತನ್ನ ಪತಿ ಮರಣ ಹೊಂದಿದ ಮೇಲೆ ಯಮನೊಡನೆ ಯಮಪುರಿಯ ಬಾಗಿಲಿನವರೆಗೂ ಹೋಗಿ ತನ್ನ ಪತಿಯ ಪ್ರಾಣವನ್ನು ಯಮನಿಂದ ಹಿಂದಕ್ಕೆ ಪಡೆದು ಸತಿ ಸಾವಿತ್ರಿ ಎಂದು ಪ್ರಸಿದ್ಧಿಯಾಗಿರುವ ಕಥೆ ಎಲ್ಲರಿಗೂ ತಿಳಿದಿದೆ.

ಮದ್ರ ದೇಶದ ರಾಜನಾದ ಅಶ್ವಪತಿ ದಂಪತಿಗಳಿಗೆ ಮಕ್ಕಳಿಲ್ಲದ ಕಾರಣ ಸಾವಿತ್ರಿ ದೇವಿಯ ಉಪಾಸನೆ ಮಾಡುತ್ತಾರೆ. ಸುದೀರ್ಘ ಉಪಾಸನೆಯ ಫಲವಾಗಿ ಅವರಿಗೆ ಹೆಣ್ಣು ಮಗು ಜನಿಸುತ್ತದೆ. ಆ ಮಗುವಿಗೆ ಸಾವಿತ್ರಿ ಎಂದು ನಾಮಕರಣ ಮಾಡಿ ಅತ್ಯಂತ ಪ್ರೀತಿಯಿಂದ ಸಲಹುತ್ತಾರೆ. ಪ್ರಾಪ್ತವಯಸ್ಕಳಾದ ಸಾವಿತ್ರಿಗೆ ಮದುವೆ ಮಾಡಲು ರಾಜಾ ಅಶ್ವಪತಿ ನಿಶ್ಚಯಿಸುತ್ತಾನೆ. ಆದರೆ ಸಾವಿತ್ರಿ ತಾನು ಶಾದ್ವಲ ದೇಶದ ರಾಜ ದ್ಯುಮತ್ಸೇನನ ಮಗ ಸ್ಫುರದ್ರೂಪಿಯಾಗಿರುವ ಸತ್ಯವಾನನನ್ನು ಮೆಚ್ಚಿಕೊಂಡಿರುವುದಾಗಿಯೂ, ಆತನನ್ನೇ ವರಿಸುವುದಾಗಿ ತಿಳಿಸಿ ಹೆತ್ತವರ ಒಪ್ಪಿಗೆಯನ್ನೂ ಪಡೆಯುತ್ತಾಳೆ. ಆದರೆ ಅಷ್ಟರಲ್ಲಿ ಅಲ್ಲಿಗೆ ಬಂದ ನಾರದರು ಸತ್ಯವಾನನು ಅಲ್ಪಾಯು ಆಗಿರುವುದಾಗಿಯೂ, ಆತ ಮದುವೆಯಾಗಿ ಒಂದು ವರ್ಷ ಪೂರೈಸುವ ದಿನವೇ ಅಸುನೀಗುವುದಾಗಿಯೂ ರಾಜಾ ಅಶ್ವಪತಿಗೆ ತಿಳಿಸುತ್ತಾರೆ. ಆದರೂ ಸಾವಿತ್ರಿಯು ಮಾನಸಿಕವಾಗಿ ತಾನು ಸತ್ಯವಾನನನ್ನೇ ತನ್ನ ಪತಿಯೆಂದು ನಂಬಿರುವುದಾಗಿ ತನ್ನ ನಿರ್ಧಾರವನ್ನು ಬದಲಾಯಿಸಲಾರೆನೆಂದು ತಂದೆಯೊಡನೆ ಹೇಳುತ್ತಾಳೆ. ಆಗ ಅಶ್ವಪತಿ ಪ್ರೀತಿಯ ಮಗಳ ಇಚ್ಛೆಯಂತೆಯೇ ಆಕೆಯ ವಿವಾಹವನ್ನು ಸತ್ಯವಾನನೊಡನೆ ನೆರವೇರಿಸುತ್ತಾನೆ.

ತನ್ನ ಪತಿ ಅಲ್ಪಾಯು ಎಂದು ಗೊತ್ತಾದ ಮೇಲೆ ಸಾವಿತ್ರಿ ಎಂದೂ ತನ್ನ ತಾಳ್ಮೆಯನ್ನು ಕಳೆದುಕೊಳ್ಳುವುದಿಲ್ಲ. ಮದುವೆಯಾದ ಕೇವಲ ಒಂದು ವರ್ಷದಲ್ಲಿ ತನ್ನ ಗಂಡ ಸಾಯಲಿದ್ದಾನೆ ಎಂಬ ಕಠೋರಸತ್ಯ ತಿಳಿದ ಮೇಲೂ ತಾಳ್ಮೆ ಕಳೆದುಕೊಳ್ಳುವುದಿಲ್ಲ. ಸಂತೃಪ್ತಭಾವದಿಂದಲೇ ದಿನ ಕಳೆಯುತ್ತಾಳೆ. ದುಃಖವನ್ನಾಗಲೀ, ಪಶ್ಚಾತ್ತಾಪವನ್ನಾಗಲೀ ಮಾಡಿಕೊಳ್ಳದೆ ಧೈರ್ಯವಾಗಿರುತ್ತಾಳೆ. ತನ್ನ ಪತಿಯೊಡನೆ ಎಂದೂ ಅಸಹನೆ ತೋರುವುದಿಲ್ಲ. ತನ್ನ ಗಂಡನ ಒಳಿತಿಗಾಗಿ, ಆತನ ಆಯಸ್ಸಿನ ವೃದ್ಧಿಗಾಗಿ ಹಲವಾರು ವ್ರತಗಳನ್ನು ಆಚರಿಸುತ್ತಾಳೆ. ಆದರೆ ತಮ್ಮ ಮದುವೆಯಾದ




ಸಂಸ್ಥಾಪಕರು
ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ
ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ
ಡಾ॥ ಬಾಲಗಂಗಾಧರನಾಥ ಮಹಾಸ್ವಾಮಿಗಳವರು

ಆದಿಚುಂಚನಗಿರಿ

ಸಂಪುಟ : 37 ಸಂಚಿಕೆ : 7 ಮಾರ್ಚ್ 2020

ಪ್ರಕಾಶಕರು ಮತ್ತು ಸಂಪಾದಕರು
ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ
ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರು

ಸಹ ಸಂಪಾದಕರು
ಮೇಲುಕೋಟೆ ವಿ.ಎನ್.ಗೌಡ

ಚಂದಾ ವಿವರ

| | | |
|---|---|---|
| ಹತ್ತು ವರ್ಷಕ್ಕೆ | ರೂ.೧೦೦೦/– | $200 |
| ಐದು ವರ್ಷಕ್ಕೆ | ರೂ. ೫೦೦/– | $100 |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.
ಸಂಪಾದಕರು
ಆದಿಚುಂಚನಗಿರಿ ಪತ್ರಿಕೆ
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ
ವಿಜಯನಗರ, ಬೆಂಗಳೂರು–560 040
ದೂರವಾಣಿ : 23101803

ಮುದ್ರಕರು
ಅಭಿಮಾನಿ ಪ್ರಕಾಶನ
2/4, ಡಾ॥ ರಾಜ್ ಕುಮಾರ್ ರಸ್ತೆ,
ರಾಜಾಜಿನಗರ, ಬೆಂಗಳೂರು– 560 010
ದೂರವಾಣಿ : 080–23123141

ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ನುಡಿ ತಂತ್ರಾಂಶದಲ್ಲಿ ಕೆಳಗಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಬಹುದು.
adichunchanagirimasika@gmail.com

ವರ್ಷಕ್ಕೆ ಸರಿಯಾಗಿ ತನ್ನ ಮರಣ ನಿಶ್ಚಿತ ಎಂದು ತಿಳಿದಿದ್ದ ಸತ್ಯವಾನ ಮಾತ್ರ ಅದೇ ಚಿಂತೆಯಲ್ಲಿರುತ್ತಾನೆ. ದಿನಗಳು ಉರುಳಿ ತಿಂಗಳುಗಳು ಕಳೆದು ಇನ್ನೇನು ನಾರದರು ಹೇಳಿದ್ದ ಗಡುವಿಗೆ ಮೂರೇ ದಿನ ಬಾಕಿ ಉಳಿದಿರುವಾಗಲೂ ಸಾವಿತ್ರಿ ಧೃತಿಗೆಡುವುದಿಲ್ಲ. ಮೂರು ದಿನವೂ ಅನ್ನಾಹಾರಾದಿ ನಿದ್ರೆಯಿಲ್ಲದೆ ಭಗವಂತನನ್ನು ಕುರಿತು ಪ್ರಾರ್ಥಿಸುತ್ತಾಳೆ.



## ಒಳ್ಳೆಯ ಮಾತು

**ಎಲ್ಲರೊಂದಿಗೆ ಕೂಡಿ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರೆ ನಮ್ಮಲ್ಲಿ ಅಹಂಕಾರದ ಛಾಯೆ ಮೂಡುವುದಿಲ್ಲ.**

ತಮ್ಮ ಮದುವೆಯಾದ ವರ್ಷದ ದಿನದಂದು ಸತ್ಯವಾನನು ತನ್ನ ಪತ್ನಿಯ ತೊಡೆಯ ಮೇಲೆ ತಲೆಯನ್ನಿಟ್ಟು ಮಲಗಿರುತ್ತಾನೆ. ಆ ಸಂದರ್ಭದಲ್ಲಿ ಆತನ ಪ್ರಾಣವನ್ನು ಕೊಂಡೊಯ್ಯಲು ಯಮಧರ್ಮ ಬರುತ್ತಾನೆ. ತೊಡೆಯ ಮೇಲೆ ಮಲಗಿದ್ದ ಪತಿಯ ದೇಹ ಇದ್ದಕ್ಕಿದ್ದಂತೆ ನಿಶ್ಚಲವಾಗುತ್ತದೆ. ಈ ಘಟನೆ ಸಾವಿತ್ರಿಯ ಅರಿವಿಗೆ ಬರುತ್ತದೆ. ಕಣ್ಮುಚ್ಚಿ ತೆರೆಯುವುದರೊಳಗೆ ಈ ಅನುಭವ ಘಟಿಸಿದಾಗಲೂ ಸಾವಿತ್ರಿ ತನ್ನ ತಾಳ್ಮೆಯನ್ನು ಕಳೆದುಕೊಳ್ಳುವುದಿಲ್ಲ. ಯಮಧರ್ಮ ತನ್ನ ಪತಿಯ ಪ್ರಾಣವನ್ನು ಕೊಂಡೊಯ್ಯುತ್ತಿರುವುದು ಅರಿವಿಗೆ ಬಂದ ತಕ್ಷಣ ಸಾವಿತ್ರಿ ಯಮನಲ್ಲಿ ಬೇಡಿಕೊಳ್ಳುತ್ತಾಳೆ. ತಾನು ಮಾಡಿಕೊಂಡು ಬಂದಿದ್ದ ವ್ರತಗಳ ಫಲದ ಶಕ್ತಿಯ ಬಲದಿಂದ, ಹಾಗೂ ಭಕ್ತಿಯಿಂದ ಯಮಧರ್ಮನನ್ನು ಪ್ರಾರ್ಥಿಸುತ್ತಾಳೆ. ತನ್ನ ಪತಿಯ ಪ್ರಾಣವನ್ನು ತೆಗೆದುಕೊಂಡು ಹೋಗಬೇಡ ಎಂದು ಬೇಡಿಕೊಳ್ಳುತ್ತಾಳೆ. ಅದು ವಿಧಿ ಲಿಖಿತ, ಆಯಸ್ಸು ಮುಗಿದಿರುವ ನಿನ್ನ ಗಂಡನ ಪ್ರಾಣವನ್ನು ಹಿಂದಿರುಗಿಸಲಾಗುವುದಿಲ್ಲ ಎಂದು ತಿಳಿಸಿದ ಯಮಧರ್ಮ ಯಮಪುರಿಯತ್ತ ನಡೆಯುತ್ತಾನೆ. ಸಾವಿತ್ರಿ ಯಮನನ್ನೇ ಹಿಂಬಾಲಿಸುತ್ತಾಳೆ, ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ.

**ಯಾರ ಅಂತಃಕರಣ ಶುದ್ಧತೆಯಿಂದ ಕೂಡಿರುವುದೋ ಅಂತಹವರ ಭಕ್ತಿಯನ್ನು ನೋಡಿ ಭಗವಂತ ವರವನ್ನು ಕೊಡುತ್ತಾನೆ. ಅಂತಹ ಸ್ಥಿತಿಗೆ ನಾವೆಲ್ಲರೂ ಕಾಯುತ್ತಿರಬೇಕು. ಭಗವಂತನ ಸಾಕ್ಷಾತ್ಕಾರಕ್ಕಾಗಿ ನಮ್ಮ ಮನೋಭೂಮಿಕೆಯನ್ನು ಸಿದ್ಧಗೊಳಿಸಿಕೊಂಡಿರಬೇಕು.**

ತನ್ನ ಕೈಯಲ್ಲಿರುವ ಪಾಶದಿಂದ ಸತ್ಯವಾನನ ಆತ್ಮವನ್ನು ಸೆಳೆದುಕೊಂಡು ಯಮ ಮುಂದೆ ಮುಂದೆ ಹೋಗುತ್ತಿದ್ದರೆ, ಸಾವಿತ್ರಿ ಯಮನನ್ನೇ ಬೇಡುತ್ತಾ ಹಿಂಬಾಲಿಸುತ್ತಾಳೆ. ಎಷ್ಟು ಹೇಳಿದರೂ ತನ್ನ ಹಿಂದೆಯೇ ಬರುತ್ತಿರುವ ಆಕೆಯನ್ನು ಕಂಡು ಯಮನಿಗೆ ಆಶ್ಚರ್ಯ! ಆಕೆಗೆ ಯಮ ಹೇಳುತ್ತಾನೆ–'ನಾನು ನಿನ್ನ ಪತಿಯ ಪ್ರಾಣವನ್ನಷ್ಟೆ ತೆಗೆದುಕೊಂಡು ಹೋಗಲು ಬಂದವನು, ನೀನು ಬರುವಂತಿಲ್ಲ, ಹಿಂದಿರುಗು' ಎನ್ನುತ್ತಾನೆ. ಆದರೆ ಸಾವಿತ್ರಿ ಯಮನ ಯಾವುದೇ ಮಾತುಗಳಿಗೂ ಕಿವಿಗೊಡದೆ ಆತನನ್ನು ಪ್ರಾರ್ಥಿಸುತ್ತಾಳೆ. ಒಂದೋ ನನ್ನ ಪತಿಯ ಪ್ರಾಣವನ್ನು ಹಿಂದಿರುಗಿಸು. ಇಲ್ಲವಾದರೆ ಪತಿಯ ಆತ್ಮದೊಂದಿಗೆ ನನ್ನನ್ನೂ ಕರೆದುಕೊಂಡು ಹೋಗು ಎನ್ನುತ್ತಾಳೆ. ಯಮ ಹೇಳುತ್ತಾನೆ – ನಾನು ಬರುತ್ತಿದ್ದೇನೆ ಎಂಬ ವಿಷಯವನ್ನು ಕೇಳಿದರೇ ಪ್ರಾಣವನ್ನು ಕಳೆದುಕೊಳ್ಳುವವರಿದ್ದಾರೆ. ಆದರೆ ನೀನು ಸಾಕ್ಷಾತ್ ನಾನೇ ಬಂದು ಎದುರುಗಡೆ ನಿಂತಿದ್ದರೂ ಧೈರ್ಯವಾಗಿರುವೆಯಲ್ಲ, ಜೊತೆಗೆ ಗಂಡನ ಪ್ರಾಣವನ್ನು ಉಳಿಸಿಕೊಳ್ಳಲು ಯಮಪುರಿಯ ಬಾಗಿಲಿನವರೆಗೂ ಬಂದಿರುವೆಯಲ್ಲ, ಆ ಶಕ್ತಿ ನಿನಗೆ ಎಲ್ಲಿಂದ ಬಂದಿತು ಎನ್ನುತ್ತಾನೆ. ಆಗ ಸಾವಿತ್ರಿ ಹೇಳುತ್ತಾಳೆ–ಯಮಪುರಿಯ ಬಾಗಿಲಿನವರೆಗೂ ಯಮನ ಜೊತೆಯಲ್ಲಿಯೆ ಬರುವ ಶಕ್ತಿ ನನಗೆ ಎಲ್ಲಿಂದ ಬಂದಿತು ಎಂದರೆ, ನಾನು ಕಷ್ಟ ಬಂದಿತೆಂದು ಎದೆಗುಂದಲಿಲ್ಲ. ಅಲ್ಪಾಯು ಆಗಿರುವ ಗಂಡನನ್ನು ವರಿಸಿದೆನೆಂದು ಯಾವೊತ್ತೂ ಪಶ್ಚಾತ್ತಾಪ ಪಡಲಿಲ್ಲ. ಈಗ ನನ್ನ ಗಂಡ ಸತ್ತರೂ ನಾನು ಕಣ್ಣೀರು ಸುರಿಸುತ್ತಿಲ್ಲ. ಅದೆಷ್ಟೇ ದುಃಖವಿದ್ದರೂ ಅಳದಿರುವ ನನ್ನ ಕಣ್ಣೀರ ಹನಿಗಳು ಇವೆಯಲ್ಲ ಅವು ನನ್ನೊಳಗೆ ಶಕ್ತಿಯ ಮುತ್ತುಗಳಾಗಿ ಬದಲಾಗಿವೆ ಎನ್ನುತ್ತಾಳೆ. ಅದರ ಫಲ ನಿನ್ನೆದುರು ನಿಂತಿದ್ದೇನೆ. ನನ್ನ ಪತಿಯ ಪ್ರಾಣವನ್ನು ಹಿಂದಿರುಗಿಸಿ ನನ್ನ ಸೌಭಾಗ್ಯವನ್ನು ಉಳಿಸು ದೇವಾ ಎನ್ನುತ್ತಾಳೆ.

ತನ್ನ ಹೆಸರು ಕೇಳಿದರೇ ಸಾಕು ಹೆದರಿ ಮರೆಯಾಗುವವರನ್ನು ಕಂಡಿದ್ದ ಯಮ ಸಾವಿತ್ರಿಯ ಸಹನೆಯನ್ನು, ಆಕೆಯ ಭಕ್ತಿಯ ಕೋರಿಕೆಯನ್ನು ಕಂಡು ಮೆಚ್ಚಿಕೊಳ್ಳುತ್ತಾನೆ. ಆದರೆ ಅವಳ ಗಂಡನ ಪ್ರಾಣವನ್ನು ಮಾತ್ರ ಹಿಂದಿರುಗಿಸಲು ಒಪ್ಪುವುದಿಲ್ಲ. ಯಮ ಹೇಳುತ್ತಾನೆ– ನೀನು ಏನನ್ನಾದರೂ ಕೇಳು ಕೊಡುತ್ತೇನೆ. ಆದರೆ ಆಯಸ್ಸು ಮುಗಿದಿರುವ ನಿನ್ನ ಗಂಡನ ಪ್ರಾಣವನ್ನು ಮಾತ್ರ ಹಿಂದಿರುಗಿಸಲಾಗುವುದಿಲ್ಲ. ನಾನು ನಿನ್ನ ಭಕ್ತಿಗೆ ಮೆಚ್ಚಿರುವುದರಿಂದ ನಿನ್ನ ಗಂಡನ ಪ್ರಾಣವನ್ನು ಬಿಟ್ಟು ಬೇರೆ ಮೂರು ವರಗಳನ್ನು ನೀಡುತ್ತೇನೆ ಕೇಳಿಕೋ ಎನ್ನುತ್ತಾನೆ. ಆದರೆ ಸಾವಿತ್ರಿ ಕೇಳುತ್ತಿದ್ದದ್ದು ಒಂದೇ – ತನ್ನ ಗಂಡನಾದ ಸತ್ಯವಾನ ಮತ್ತೆ ಬದುಕಬೇಕು, ಇಲ್ಲವಾದಲ್ಲಿ ನಾನೂ ಸತ್ತು ಅವನ ಸಹಭಾಗಿಯಾಗಿ ಸ್ವರ್ಗ ಸೇರಬೇಕು ಎನ್ನುತ್ತಾಳೆ. ಅದು ಸಾಧ್ಯವೇ ಇಲ್ಲ. ನೀನು ನನಗೆ ಕೋಪವನ್ನುಂಟು ಮಾಡಬೇಡ. ಕೊಡುತ್ತೇನೆಂದು ಹೇಳಿರುವ ಮೂರು ವರಗಳನ್ನು ತೆಗೆದುಕೊಂಡು ಹೊರಟುಹೋಗು ಎನ್ನುತ್ತಾನೆ ಯಮ.

ಸಾವಿತ್ರಿ ಸಹನೆಯಿಂದ ಚಿಂತಿಸುತ್ತಾಳೆ. ಕೊನೆಗೆ ಯಮನಿಂದ ಮೂರೂ ವರಗಳನ್ನು ಕೇಳಲು ನಿರ್ಧರಿಸುತ್ತಾಳೆ. ಮೊದಲನೆಯ ವರದಿಂದ ಕುರುಡನಾಗಿರುವ ನನ್ನ ಮಾವನಿಗೆ ಕಣ್ಣು ಬರುವಂತಾಗಲಿ ಎನ್ನುತ್ತಾಳೆ. ಯಮಧರ್ಮ ತಥಾಸ್ತು ಎನ್ನುತ್ತಾನೆ. ಎರಡನೆಯ ವರವಾಗಿ ನನ್ನ ಮಾವ ಕಳೆದುಕೊಂಡಿರುವ ರಾಜ್ಯ, ಅರಮನೆ ಎಲ್ಲವೂ ಮತ್ತೆ ಅವರಿಗೆ ದೊರೆಯುವಂತಾಗಲಿ ಎನ್ನುತ್ತಾಳೆ. ಅದಕ್ಕೂ ತಥಾಸ್ತು ಎನ್ನುತ್ತಾನೆ ಯಮ. ಮೂರನೆಯ ವರವಾಗಿ, ನಿನ್ನ ಕೃಪೆಯಿಂದ ದೊರಕಿರುವ ರಾಜ್ಯದ ಅರಮನೆಯ ಸಿಂಹಾಸನದಲ್ಲಿ ನನ್ನ ಮಾವ ಕುಳಿತು ನೀನು ಕರುಣಿಸಿರುವ ಕಣ್ಣುಗಳಿಂದ ತನ್ನ ಮೊಮ್ಮಗನನ್ನು ಕಾಣುವಂತಾಗಲಿ ಎಂದು ಕೇಳಿಕೊಳ್ಳುತ್ತಾಳೆ. ಅದಕ್ಕೂ ಯಮ ತಥಾಸ್ತು ಎಂದು ಹೇಳಿ ಮುಂದಕ್ಕೆ ಹೊರಡುತ್ತಾನೆ.

ಆದರೆ ಸಾವಿತ್ರಿ ಮತ್ತೆ ಯಮನನ್ನು ಹಿಂಬಾಲಿಸುತ್ತಾಳೆ. ತನ್ನನ್ನು ಮತ್ತೆ ಹಿಂಬಾಲಿಸುತ್ತಿರುವ ಸಾವಿತ್ರಿಯನ್ನು ಕಂಡ ಯಮನಿಗೆ ಕೋಪ ಬರುತ್ತದೆ. ನೀನು ಕೇಳಿದ ವರವನ್ನು ಕೊಟ್ಟಾಯಿತಲ್ಲ, ನಿನ್ನ ಗಂಡನ ಪ್ರಾಣವನ್ನು ಹಿಂದಿರುಗಿಸಲಾಗುವುದಿಲ್ಲ ಎಂದು ಹೇಳಿದ ಮೇಲೂ



# ಒಳ್ಳೆಯ ಮಾತು

**ನಾಳೆಯ ಸಂತೋಷಕ್ಕಾಗಿ ಇಂದಿನ ಕೆಲ ಸಮಯವನ್ನು ಮೀಸಲಿಡುವುದು ತಪ್ಪಲ್ಲ. ಆದರೆ ನಾಳೆಯ ಚಿಂತೆಯಲ್ಲೇ ಇಂದಿನ ಸಂತೋಷವನ್ನು ಕಳೆದುಕೊಳ್ಳಬಾರದು.**

ನೀನು ಮತ್ತೇಕೆ ನನ್ನನ್ನು ಹಿಂಬಾಲಿಸುತ್ತಿರುವೆ ಎಂದು ಯಮ ಕೇಳುತ್ತಾನೆ. ಆಗ ಸಾವಿತ್ರಿ ಹೇಳುತ್ತಾಳೆ–ಯಮಧರ್ಮ, ನಾನು ನನ್ನ ಗಂಡನ ಪ್ರಾಣವನ್ನು ಹಿಂದಿರುಗಿಸು ಎಂದು ಕೇಳುವುದಕ್ಕೆ ಬರುತ್ತಿಲ್ಲ. ನೀನು ಸತ್ಯವಂತ. ಧರ್ಮವನ್ನು ಕಾಪಾಡುವಂತಹವನು. ನೀನು ಕೊಟ್ಟಿರುವ ವರಗಳು ಫಲಿಸುವಂತಾಗಿ ಅದರಿಂದ ನೀನು ನಿನ್ನ ಧರ್ಮವನ್ನು ಉಳಿಸಿಕೊಳ್ಳುವಂತಾಗಲೆಂದು ಬರುತ್ತಿದ್ದೇನೆ ಎನ್ನುತ್ತಾಳೆ. ಯಮನಿಗೆ ಆಶ್ಚರ್ಯ, ಈಕೆಯೇನು ನನ್ನ ಮಾತುಗಳನ್ನು ಉಳಿಸುವುದು, ನನ್ನ ಧರ್ಮವನ್ನು ಉಳಿಸುವುದು!!! ಎಂದು. ಸಾವಿತ್ರಿ ಹೇಳುತ್ತಾಳೆ–ಹೌದು ಯಮಧರ್ಮ, ನಾನು ಕೇಳಿದ ವರಗಳಿಗೆ ನೀನು ತಥಾಸ್ತು ಎಂದೆ. ನಿನ್ನ ವರಗಳ ಫಲದಿಂದ ನನ್ನ ಮಾವನಿಗೆ ಕಣ್ಣುಗಳು ಬರುತ್ತವೆ, ಅವರು ಕಳೆದುಕೊಂಡಿರುವ ರಾಜ್ಯ, ಅರಮನೆಗಳೂ ದೊರೆಯುತ್ತವೆ ಎಂಬುದೇನೋ ಸರಿ. ಸೊಸೆಯಾಗಿ ನಾನೂ ಇದ್ದೇನೆ. ಆದರೆ ಅವರಿಗೆ ಇದ್ದ ಒಬ್ಬನೇ ಮಗ ಸತ್ಯವಾನ ಸತ್ತು ಮಲಗಿದ್ದಾನೆ, ಅವನ ಪ್ರಾಣ ನಿನ್ನ ಕೈಲಿದೆ. ಹಾಗಾದ ಮೇಲೆ ನನ್ನ ಮಾವ ತನ್ನ ಮಗನೇ ಇಲ್ಲದ ಮೇಲೆ ಮೊಮ್ಮಗನನ್ನು ಕಾಣುವುದಾದರೂ ಹೇಗೆ? ಕಣ್ಣುಗಳು ಬಂದಿರುವ ನನ್ನ ಮಾವ ಸಿಂಹಾಸನದ ಮೇಲೆ ಕುಳಿತು ಮೊಮ್ಮಗನನ್ನು ನೋಡುವ ಬಗೆಯಾದರೂ ಹೇಗೆ? ಮೊಮ್ಮಗ ಬೇಕೆಂದರೆ ಅವನ ಮಗ ಬದುಕ ಬೇಕಲ್ಲವೇ ಎನ್ನುತ್ತಾಳೆ.

ಸಾವಿತ್ರಿಯ ನಿರ್ಮಲ, ನಿಸ್ಪೃಹ, ನಿರ್ವ್ಯಾಜ ಪತಿಭಕ್ತಿಯೆದುರು ಯಮ ಬೆರಗಾಗುತ್ತಾನೆ. ಅಂದರೆ ಆಕೆ ತನ್ನ ಪತಿಯ ಬಗ್ಗೆ ತಳೆದಿದ್ದ ಅಚಲ ಪ್ರೇಮವನ್ನು ಕಂಡು ಆಕೆಯ ಭಕ್ತಿಗೆ ಸೋಲುತ್ತಾನೆ. ಯಾವ ಸ್ಥಳದಿಂದ ಸತ್ಯವಾನನ ಪ್ರಾಣವನ್ನು ತನ್ನ ಪಾಶದಿಂದ ಸೆಳೆದುಕೊಂಡು ಹೋಗಿದ್ದನೋ ಅಲ್ಲಿಗೇ ಮರಳಿ ಅವನ ಮೃತಶರೀರದಲ್ಲಿ ಮತ್ತೆ ಪ್ರಾಣವಾಯು ಸಂಚರಿಸುವಂತೆ ಮಾಡುತ್ತಾನೆ. ಪತಿಯೇ ಪರದೈವವೆಂದು ನಂಬಿದ ಸಾವಿತ್ರಿಯನ್ನು ಮನಸಾರೆ ಹರಸಿ, ನೂರ್ಕಾಲ ಬಾಳುವಂತೆ ಇಬ್ಬರನ್ನು ಅನುಗ್ರಹಿಸಿ ಯಮ ಅಲ್ಲಿಂದ ತೆರಳುತ್ತಾನೆ.

ಈ ಕಥೆಯಿಂದ ನಮಗೆ ತಿಳಿಯುವುದಾದರೂ ಏನು? ಕಷ್ಟಕ್ಕೆ ಸಿಲುಕಿಕೊಂಡಾಗ ನಮ್ಮಲ್ಲಿ ಸಹನೆ ಇದ್ದದ್ದೇ ಆದರೆ, ನಮ್ಮನ್ನು ನಾವು ಚಿಂತನೆಗೆ ಒಳಗು ಮಾಡಿಕೊಂಡದ್ದೇ ಆದರೆ ಆ ಚಿಂತನೆ ಮಾಡುವ ಸಂದರ್ಭದಲ್ಲಿ ಒಂದು ಹೊಸ ವಿಚಾರ ಹೊಳೆಯುತ್ತದೆ. ಅದು ನಮ್ಮ ಬದುಕನ್ನು ಸರಿಯಾದ ನಿಟ್ಟಿನಲ್ಲಿ ತೆಗೆದುಕೊಂಡು ಹೋಗುವುದಕ್ಕೆ ದಾರಿಯಾಗುತ್ತದೆ. ಎಲ್ಲಿ ತಾಳ್ಮೆ ಇರುತ್ತದೆಯೋ, ಸಹಜ ಪ್ರೀತಿ ಇರುತ್ತದೆಯೋ, ಸ್ವಾರ್ಥರಹಿತ ಭಕ್ತಿ ಇರುತ್ತದೆಯೋ ಅಲ್ಲಿ ಭಕ್ತಿಯನ್ನು ಹೊರತು ಪಡಿಸಿ ಬೇರೆ ಯಾವ ದೋಷವೂ ಇರುವುದಿಲ್ಲ, ದ್ವೇಷವೂ ಇರುವುದಿಲ್ಲ. ಅನುಮಾನವೂ ಇರುವುದಿಲ್ಲ.

**ಮನುಷ್ಯ ತನ್ನ ವ್ಯಕ್ತಿತ್ವದ ಆಳಕ್ಕೆ ಇಳಿದಾಗ ಮಾತ್ರ ಅವನಿಗೆ ಆತನಲ್ಲಿರುವ ಶಕ್ತಿಯ ಅರಿವಾಗುತ್ತದೆ, ದೈವತ್ವದ ಅರಿವಾಗುತ್ತದೆ. ಆದ್ದರಿಂದ ಮನುಷ್ಯ ಕಷ್ಟಗಳು ಬಂದ ಸಂದರ್ಭದಲ್ಲಿ ಅವುಗಳನ್ನೆಲ್ಲ ಸಹಿಸಿಕೊಂಡು ಇದ್ದದ್ದೇ ಆದರೆ ಬದುಕಿನಲ್ಲಿ ದೊರೆಯುವ ಆನಂದಕ್ಕೆ ಯಾವುದೂ ಸಾಟಿಯಾಗುವುದಿಲ್ಲ.**

ಸ್ವಾರ್ಥ ಇರುವ ಕಡೆ ತೋರುವ ಪ್ರೀತಿ ಕಳಂಕದಿಂದ ಕೂಡಿರುತ್ತದೆ. ಪ್ರಸ್ತುತ ದಿನಮಾನದಲ್ಲಿ ಮನುಷ್ಯನ ಬದುಕನ್ನು ನೋಡುತ್ತಿದ್ದೇವೆ. ಪ್ರತಿಯೊಬ್ಬರಲ್ಲೂ, ಪ್ರತಿಯೊಂದು ವಿಷಯದಲ್ಲಿಯೂ ಅಸಹನೆ, ಪ್ರತಿಯೊಬ್ಬರದೂ ತಾಳ್ಮೆಯಿಲ್ಲದ ಬದುಕು. ಅಸಹನೆಯ ಮಧ್ಯೆ ಬದುಕುತ್ತಿರುವ ಮನುಷ್ಯ ಪ್ರತಿಯೊಂದಕ್ಕೂ ತಾಳ್ಮೆಯನ್ನು ಕಳೆದುಕೊಂಡು ಅಸಹನೆಯನ್ನು ವ್ಯಕ್ತಪಡಿಸುತ್ತಾನೆ. ಹೀಗೇ ಆದರೆ ಎಂದೋ ಒಡೆದು ಹೋಗುವ ಬದುಕು ಇಂದೇ ಒಡೆದು ಹೋಗುವ ಸ್ಥಿತಿಯನ್ನು ತಲುಪಬೇಕಾಗುತ್ತದೆ.

**ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ**
**ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ**
**ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ**
**ಮಯ್ಯರ್ಪಿತಮನೋಬುದ್ಧಿರ್ಯೋಮದ್ಭಕ್ತಃ ಸ ಮೇ ಪ್ರಿಯಃ**

ನನಗೆ ಅತ್ಯಂತ ಪ್ರಿಯವಾಗುವ ಭಕ್ತ ಯಾರೆಂದರೆ ಯಾವಾತ ಸರ್ವ ಪ್ರಾಣಿಗಳನ್ನೂ ದ್ವೇಷಿಸುವುದಿಲ್ಲವೋ, ಯಾವಾತ ಎಲ್ಲರಲ್ಲಿಯೂ ಮಿತ್ರತ್ವದಿಂದ ಕೂಡಿರುವನೋ, ಎಲ್ಲರಲ್ಲಿಯೂ ಕರುಣೆಯನ್ನು ಹೊಂದಿ ಅಹಂಕಾರ ಮಮಕಾರಗಳಿಂದ ಮುಕ್ತನಾಗಿರುವನೋ, ಸುಖ ದುಃಖಗಳಲ್ಲಿ ಸಮನಾಗಿರುವನೋ, ಸಮಕಾಲೀನ ಜಗತ್ತಿನಲ್ಲಿ ಸಮಕಾಲೀನ ವ್ಯಕ್ತಿಗಳೆಲ್ಲರನ್ನೂ ಕ್ಷಮಾಗುಣದಿಂದ ಕಾಣುವನೋ, ಯಾರು ಸಂತುಷ್ಟನೋ, ದೃಢನಿಶ್ಚಯನೋ, ನನ್ನಲ್ಲಿ ಎಲ್ಲವನ್ನೂ ಅರ್ಪಿಸುವ ಮನೋಬುದ್ಧಿಯನ್ನುಳ್ಳವನಾಗಿದ್ದು ನನಗೆ ಶರಣಾಗತನಾಗಿ ಭಕ್ತನಾಗಿರುವನೋ ಅವನನ್ನು ನಾನು ಅಧಿಕವಾಗಿ ಪ್ರೀತಿಸುತ್ತೇನೆ ಎನ್ನುತ್ತಾನೆ ಭಗವಂತ.

ನಾವು ನಿಜಕ್ಕೂ ಹೀಗೆ ಬದುಕಿದರೆ ಭಗವಂತ ನಮಗೆ ಮುಕ್ತಿಸಂಪದವನ್ನು ಖಂಡಿತವಾಗಿಯೂ ನೀಡುತ್ತಾನೆ. ಆದರೆ ಒಂದೊಂದು ಸಲ ಮುಕ್ತಿಯನ್ನು ಎಲ್ಲರೂ ಪಡೆಯಲು ಸಾಧ್ಯವಾಗುವುದಿಲ್ಲ. ಯಾರ ಅಂತಃಕರಣ ಶುದ್ಧತೆಯಿಂದ ಕೂಡಿರುವುದೋ ಅಂತಹವರ ಭಕ್ತಿಯನ್ನು ನೋಡಿ ಭಗವಂತ ವರವನ್ನು ಕೊಡುತ್ತಾನೆ. ಅಂತಹ ಸ್ಥಿತಿಗೆ ನಾವೆಲ್ಲರೂ ಕಾಯುತ್ತಿರಬೇಕು. ಭಗವಂತನ ಸಾಕ್ಷಾತ್ಕಾರಕ್ಕಾಗಿ ನಮ್ಮ ಮನೋಭೂಮಿಕೆಯನ್ನು ಸಿದ್ಧಗೊಳಿಸಿಕೊಂಡಿರಬೇಕು. ಅಂತಹ ಮನೋಭೂಮಿಕೆಯನ್ನು ಮಾಡಿಕೊಳ್ಳುವ ಸಲುವಾಗಿಯೇ ನಮ್ಮ ಹಿರಿಯರು ದೇವತಾ ಉಪಾಸನೆಗಳು, ಸತ್ಕರ್ಮಗಳು, ಸಚ್ಚಿಂತನೆಗಳು, ಸತ್ಕಾರ್ಯಗಳನ್ನು ಮಾಡುವುದನ್ನು ರೂಢಿಗೆ ತಂದಿದ್ದಾರೆ. ಹಿರಿಯರು ಕೊಟ್ಟು ಹೋಗಿರುವ ಇಂತಹ ಒಂದು ಪರಂಪರೆಯನ್ನು ಉಳಿಸಿ ಬೆಳೆಸಿ ನಮ್ಮ ಅರಿವಿನ ಪ್ರಜ್ಞೆಯನ್ನು ಅರಳಿಸಿಕೊಳ್ಳುವಂತಹ ಕಾರ್ಯವನ್ನು ಪ್ರತಿಯೊಬ್ಬರೂ ಮಾಡಬೇಕಿದೆ. **ಜೈ ಶ್ರೀ ಗುರುದೇವ್**

ॐ

'ಹೋಳಿ ಹುಣ್ಣಿಮೆ' ಪಾಲ್ಗುಣ ಮಾಸದ ಹುಣ್ಣಿಮೆಗೆ ಪರಿಪೂರ್ಣವಾಗಿ ಅರ್ಪಿತವಾಗಿರುವ ಆಚರಣೆ. ಈ ಹಬ್ಬಕ್ಕೆ ಸಂಬಂಧಿಸಿದಂತೆ ಹಲವು ಪೌರಾಣಿಕ ಕಥನಗಳಿವೆ. ಅವುಗಳಲ್ಲಿ ಕೆಲವು ನಮ್ಮ ಓದುಗರಿಗಾಗಿ....

# ಪುರಾಣಗಳಲ್ಲಿ ಹೋಳಿ...

❖ ವಿ.ಎನ್.ಯಾದವಾಡ್ರಿ



ಹೋಳಿ ಹಬ್ಬ ನಮ್ಮ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಮಹತ್ವವನ್ನು ಸಾರುವ ಹಬ್ಬ. ಪೌರಾಣಿಕ, ಐತಿಹಾಸಿಕ, ಸಾಂಸ್ಕೃತಿಕ ಮಹತ್ವವನ್ನು ತನ್ನಲ್ಲಿ ಹುದುಗಿಸಿಕೊಂಡಿರುವ 'ಹೋಳಿ' ಹಬ್ಬದ ಅಪೂರ್ವ ಸಂದೇಶವೆಂದರೆ 'ಲೋಕಕಲ್ಯಾಣಕ್ಕಾಗಿ ನಿನ್ನನ್ನು ನೀನು ಬಲಿಕೊಡುವುದೇ ಬದುಕಿನ ಸಾರ್ಥಕತೆ' ಎಂದು. ಕಾಮ-ಮನ್ಮಥ-ದಹಿಸಿ ಹೋದದ್ದೇ ಲೋಕಕಲ್ಯಾಣಕ್ಕಾಗಿ. ಹಾಗೂ ಅವನು ಮತ್ತೆ ಹುಟ್ಟಿ ಬಂದದ್ದೂ ಲೋಕ ಕಲ್ಯಾಣಕ್ಕಾಗಿ. ಅವನಿಲ್ಲದೆ ಸೃಷ್ಟಿಯೇ ಇಲ್ಲ. ಇಂತಹ ಮಹಿಮನಾದ ಮನ್ಮಥನ ಮಹಾತ್ಯಾಗದ ಸ್ಮರಣೆಯೇ ಹೋಳಿ ಹುಣ್ಣಿಮೆ.

**ಕಾಮದಹನ :** ಪೌರಾಣಿಕವಾಗಿ ಹೆಚ್ಚು ಜನಪ್ರಿಯ ಹಾಗೂ ಅನುಕರಣೀಯ ಕಥನವೆಂದರೆ ಅದು ಕಾಮದಹನದ ಕಥೆ. ಮಗಳು ದಾಕ್ಷಾಯಿಣಿ ಶಿವನನ್ನು ಪತಿಯನ್ನಾಗಿ ಆರಿಸಿಕೊಂಡಿದ್ದು, ತಂದೆಯಾದ ದಕ್ಷಬ್ರಹ್ಮನಿಗೆ ಹಿಡಿಸಲಿಲ್ಲ. ಒಂದು ಸಾರಿ ದಕ್ಷಬ್ರಹ್ಮ ಯಜ್ಞವನ್ನು ಮಾಡುತ್ತಿದ್ದಾಗ ಎಲ್ಲರನ್ನು ಕರೆದರೂ ಶಿವ ಹಾಗೂ ದಾಕ್ಷಾಯಿಣಿಯನ್ನು ಕರೆಯಲಿಲ್ಲ. ಅದು ಮಗಳಿಗೆ ಕೋಪ ತರಿಸಿತು. ಶಿವನು ಬೇಡವೆಂದರೂ ಕೇಳದೆ ಯಜ್ಞ ನಡೆಯುವ ಸ್ಥಳಕ್ಕೆ ಹೋಗುತ್ತಾಳೆ. ಅಲ್ಲಿ ಅವಳಿಗೆ ತಂದೆಯಿಂದ ಅಪಮಾನವಾದಾಗ ಅವಳು ರೋಷಾವೇಷದಿಂದ ಯಜ್ಞಕುಂಡದಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾಳೆ. ಅದನ್ನು ಅರಿತ ಶಿವನು ಯಜ್ಞದ ಸ್ಥಳಕ್ಕೆ ಬಂದು ಎಲ್ಲವನ್ನೂ ಧ್ವಂಸ ಮಾಡಿ ಹಿಮಾಲಯಕ್ಕೆ ಹೋಗಿ ಘೋರ ತಪಸ್ಸಿಗೆ ಕುಳಿತುಕೊಳ್ಳುತ್ತಾನೆ. ನಂತರ ದಾಕ್ಷಾಯಿಣಿ ಪರ್ವತರಾಜನ ಮಗಳಾಗಿ ಜನಿಸುತ್ತಾಳೆ. ತೇಜೋವತಿ ಆದ ಮಗಳಿಗೆ ಪರ್ವತರಾಜನು ಸಂತಸದಿಂದ ಉಮಾ ಎಂದು ಹೆಸರಿಟ್ಟು ಅಕ್ಕರೆಯಿಂದ ಬೆಳೆಸುತ್ತಾನೆ. ಒಂದು ದಿನ ಅಲ್ಲಿಗೆ ಬಂದ ನಾರದರು ಉಮಾಳನ್ನು ನೋಡಿ, ಅವಳು ಶಿವನ ಹೆಂಡತಿ ಎಂಬುದನ್ನು ಅರಿತು, ಅವಳನ್ನು ಹಿಮಾಲಯದಲ್ಲಿದ್ದ ಶಿವನ ಪೂಜೆಗೆ ಕಳಿಸಲು ಹೇಳುತ್ತಾರೆ. ಅದರಂತೆ ಪರ್ವತರಾಜ ಮಗಳನ್ನು ಶಿವನ ಸೇವೆಗೆ ಕಳಿಸಿಕೊಡುತ್ತಾನೆ.

ಈ ಮಧ್ಯ ರಾಕ್ಷಸ ರಾಜ ತಾರಕಾಸುರ ಬಲಾಢ್ಯನಾಗಿ ದೇವಲೋಕದ ಮೇಲೆ ದಾಳಿ ಇಡುತ್ತಾನೆ. ಇಂದ್ರಾದಿದೇವತೆಗಳೆಲ್ಲ ದೇವಲೋಕ ಬಿಟ್ಟು ಹೆದರಿ ಓಡಿ ಹೋಗುತ್ತಾರೆ. ತಾರಕಾಸುರನ ಸಂಹಾರ 'ಶಿವನ ಮಗನಿಂದ ಮಾತ್ರ ಸಾಧ್ಯ' ಎಂದು ಬ್ರಹ್ಮ ಹೇಳುತ್ತಾನೆ. ಆದರೆ ಶಿವನು ತಪಸ್ಸಿಗೆ ಕುಳಿತಿದ್ದಾನೆ. ಮೇಲಾಗಿ ಇನ್ನೂ ಮದುವೆಯೇ ಆಗಿಲ್ಲ. ಅಂದಾಗ ಶಿವನಿಗೆ ಮಗನು ಹುಟ್ಟುವುದು ಹೇಗೆ? ಮೇಲಾಗಿ ಘೋರ ತಪಸ್ಸಿಗೆ ಕುಳಿತಿರುವ

## ಒಳ್ಳೆಯ ಮಾತು



**ಬೀಜವನ್ನು ಬಿತ್ತದೇ ಫಲವನ್ನು, ಪರಿಶ್ರಮವಿಲ್ಲದೆ ಯಶಸ್ಸನ್ನು ನಿರೀಕ್ಷಿಸಬಾರದು.**

ಮಹಾದೇವನನ್ನು ಎಬ್ಬಿಸುವುದಾದರೂ ಹೇಗೆ? ತಪಸ್ಸಿಗೆ ಅಡ್ಡಿಯುಂಟು ಮಾಡಿ, ಆ ರುದ್ರಪ್ರತಾಪಿಯನ್ನು ಎಬ್ಬಿಸುವ ಧೈರ್ಯ ಯಾರಿಗಿದೆ? ಮುಕ್ಕಣ್ಣನು ಕೋಪದ ಭರದಲ್ಲಿ ಹಣೆಗಣ್ಣು ತೆರೆದರೆ ಮುಂದಿರುವುದೆಲ್ಲವೂ ಸುಟ್ಟು ಭಸ್ಮವಾಗುತ್ತದೆ. ಆದರೂ ದೇವತೆಗಳಿಗೆ ಬಂದಿರುವ ಸಂಕಟ ನಿವಾರಣೆಗಾಗಿ ಕಾಮದೇವ ಶಿವನನ್ನು ತಪಸ್ಸಿನಿಂದ ಎಬ್ಬಿಸುವ ಕಾರ್ಯಕ್ಕೆ ಮುಂದಾದ. ಸರ್ವ ಜೀವಿಗಳನ್ನು ಕಂಗೆಡಿಸಿ ಬಿಡುವ ಕಾಮದೇವ ಮನ್ಮಥರಾಜ. ಮನಸ್ಸನ್ನು ಚಂಚಲಗೊಳಿಸುವುದು ಮನ್ಮಥರಾಜನಿಗೆ ತುಂಬ ಸರಳ. ವಿಭಿನ್ನ ಬಗೆಯ ಹೂವುಗಳ ಬಾಣ ಹೂಡಿ ನೇರವಾಗಿ ಶಿವನಿಗೆ ಗುರಿಯಿಟ್ಟು ಹೊಡೆಯಲಾರಂಭಿಸುತ್ತಾನೆ. ಕಾಮದೇವನ ಹೂಬಾಣಗಳು ಶಿವನ ಚಿತ್ತವನ್ನು ಘಾಸಿಗೊಳಿಸಿದವು. ಪರಶಿವನ ಕೋಪ ನೆತ್ತಿಗೇರಿತು. ತನ್ನ ಹಣೆಗಣ್ಣು ತೆರೆದೇ ಬಿಟ್ಟ. ಮನ್ಮಥ ಕ್ಷಣಮಾತ್ರದಲ್ಲಿ ಸುಟ್ಟು ಭಸ್ಮವಾದ.

ದೇವಕಾರ್ಯಕ್ಕಾಗಿ ಕಾಮದೇವನು ತನ್ನ ಪ್ರಾಣವನ್ನೇ ಅರ್ಪಿಸಿದ. ಆದರೆ ಗಂಡನನ್ನು ಕಳೆದುಕೊಂಡ ಹೆಂಡತಿ ರತಿಗೆ ಆ ಆಘಾತವನ್ನು ತಡೆದುಕೊಳ್ಳುವುದಕ್ಕೆ ಆಗಲಿಲ್ಲ. ದುಃಖಿಸುತ್ತ ತನ್ನ ಮಾಂಗಲ್ಯ ಭಾಗ್ಯ ಉಳಿಸಿಕೊಡಬೇಕೆಂದು ಶಂಕರನಿಗೆ ಶರಣು ಬಂದಳು. ಸದಾ ಭಕ್ತಪ್ರಿಯ ಶಂಕರನು ಎಲ್ಲವನ್ನೂ ತಿಳಿದುಕೊಂಡ. ದೇವಕಾರ್ಯಕ್ಕೆ ತನ್ನ ಪ್ರಾಣ ಕಳೆದುಕೊಂಡ ಕಾಮನ ಮೇಲೆ ಕರುಣೆ ಮೂಡಿತು. ಶರಣು ಬಂದ ಕಾಮನ ಹೆಂಡತಿಯನ್ನು ಗಂಗಾಧರ ಬರಿಗೈಯಿಂದ ಕಳುಹಿಸಲಿಲ್ಲ. ನಿನ್ನ ಗಂಡ ನಿನಗೆ ದೊರೆಯುತ್ತಾನೆ ಆದರೆ ಅನಂಗನ ರೂಪದಲ್ಲಿ. ಅವನಿಗೆ ದೇಹವಿಲ್ಲ. ಆದರೆ ಪ್ರತಿವರ್ಷ ಪಾಲ್ಗುಣ ಮಾಸದ ಹುಣ್ಣಿಮೆಯ 5ನೇ ಅಂದರೆ ರಂಗಪಂಚಮಿಯಂದು ಒಂದು ದಿನ ಮಾತ್ರ ನಿನ್ನ ಗಂಡನನ್ನು ದೈಹಿಕವಾಗಿ ನೋಡಿ ಆನಂದಿಸಬಹುದು ಎಂದು ಹೇಳಿ ಕಳಿಸುತ್ತಾನೆ. ಲೋಕಕಲ್ಯಾಣಕ್ಕಾಗಿ ಪರ್ವತರಾಜನ ಮಗಳು ಉಮಾ ಮತ್ತು ಮಹೇಶ್ವರರ ಮದುವೆ ಪಾಲ್ಗುಣ ಹುಣ್ಣಿಮೆಯ ದಿನ ನಡೆಯುತ್ತದೆ. ಮನ್ಮಥ ಅನಂಗನಾಗಿ ಸಕಲ ಜೀವಜಂತುಗಳಲ್ಲಿ ಸೇರಿಕೊಳ್ಳುತ್ತಾನೆ. ರಂಗಪಂಚಮಿಯ ದಿನ ದೇಹ ಪಡೆದ ಮನ್ಮಥ ರತಿಯೊಂದಿಗೆ ಸುಖಿಸಿ, ರಂಗಿನಾಟವಾಡಿ ಮರಳುತ್ತಾನೆ. ಅಂದಿನಿಂದ ಅನಂಗ-ಕಾಮ-ನು ಸರ್ವ ಜೀವಿಗಳಲ್ಲಿ ಅದರಲ್ಲೂ ಮಾನವರಲ್ಲಿ ಸದಾ ಜಾಗೃತನಾಗಿದ್ದಾನೆ. ಶಿವನು ಕಾಮನನ್ನು ದಹಿಸಿದ ಪ್ರಸಂಗದ ಸ್ಮರಣೆಯೇ ಹೋಳಿ.

ಮತ್ತೊಂದು ಪೌರಾಣಿಕ ಕಥಾನಕದ ಪ್ರಕಾರ ರಾಕ್ಷಸ ರಾಜ ಹಿರಣ್ಯಕಷ್ಯಪುವಿನ ತಂಗಿ ಹೋಲಿಕಾಳ ದಹನ ಪ್ರಸಂಗವಿದು. ಹಿರಣ್ಯಕಷ್ಯಪು ಮಹಾಬಲಾಢ್ಯ ರಾಕ್ಷಸ ರಾಜ. ದೇವರುಗಳೆಂದರೆ ಉರಿದು ಬೀಳುತ್ತಿದ್ದ. ಹಿರಣ್ಯಕಷ್ಯಪು ಭೂಮಿಯ ಮೇಲೆ ದೇವಪೂಜೆ, ಯಜ್ಞ-ಯಾಗಾದಿಗಳು ನಡೆಯಬಾರದೆಂದು ಕಟ್ಟಪ್ಪಣೆ ಹೊರಡಿಸಿದ. ಆದರೆ ವಿಚಿತ್ರ ಎಂದರೆ ಅವನ ಮಗ ಪ್ರಹ್ಲಾದ ವಿಷ್ಣು ಭಕ್ತ. ನಿತ್ಯ ವಿಷ್ಣು ನಾಮಸ್ಮರಣೆಯಲ್ಲಿ ತೊಡಗಿರುತ್ತಿದ್ದ. ತಂದೆ ದೇವರುಗಳ ವಿರುದ್ಧ ಇದ್ದರೆ ಮಗ ದೇವರುಗಳ ಪರ ಆಗಿದ್ದ. ಇದು ತಂದೆ ಕಷ್ಯಪನಿಗೆ ತುಂಬ ತಲೆನೋವಾಗಿತ್ತು. ಪರಿಪರಿಯಾಗಿ ಬುದ್ಧಿ ಹೇಳಿದರೂ ಮಗ ಪ್ರಹ್ಲಾದ ಕೇಳಲಿಲ್ಲ. ರಾಕ್ಷಸರಾಜ ಹಿರಣ್ಯಕಶ್ಯಪು ದೈವಭಕ್ತ ಮಗನನ್ನು ತನ್ನ ವೈರಿ ಎಂದೇ ಬಗೆದ. ಏನೆಲ್ಲ ಹಿಂಸೆ ನೀಡಬಹುದೋ ಅಷ್ಟನ್ನೂ ನೀಡಲಾರಂಭಿಸಿದ. ಆದರೂ ಮಗ ಪ್ರಹ್ಲಾದ ಅಂಜಲಿಲ್ಲ, ಅಳುಕಲಿಲ್ಲ. ಆಗ ತಂದೆ ಕೊನೆಯದಾಗಿ ಹೆತ್ತ ಮಗನನ್ನೇ ಕೊಂದು ಹಾಕಲು ನಿರ್ಧರಿಸಿದ.

ರಾಕ್ಷಸರಾಜ ತನ್ನ ಮಗನನ್ನು ಕೊಲ್ಲುವುದನ್ನು ಬಿಟ್ಟು ಬೇರೆ ದಾರಿಯೇ ಇಲ್ಲ ಎಂದುಕೊಂಡ. ಕೊಲ್ಲುವ ಬಗೆಯನ್ನು ಕುರಿತು ಯೋಚಿಸಿದ. ಆಗ ಅವನಿಗೆ ಅವನ ತಂಗಿ ಹೋಲಿಕಾ ನೆನಪಾದಳು. ತಂಗಿ ಹೋಲಿಕಾಗೆ ಮುಟ್ಟಿದ್ದೆಲ್ಲ ಭಸ್ಮವಾಗುವ ದೇವರ ವರವಿತ್ತು. ಮಗನನ್ನು ಸುಟ್ಟು ಭಸ್ಮ ಮಾಡಲು ತಂಗಿ ಹೋಲಿಕಾಳಿಗೆ ಹೇಳಿದ. ಒಂದು ದಿನ ಹೋಲಿಕಾ ಪ್ರಹ್ಲಾದನನ್ನು ಸುಟ್ಟು ಭಸ್ಮ ಮಾಡಲು ಎತ್ತಿಕೊಂಡು ತನ್ನ ಮಡಿಲಿಗೆ ಹಾಕಿಕೊಂಡಳು. ಆದರೆ ಅಲ್ಲೊಂದು ವಿಚಿತ್ರ ನಡೆಯಿತು-ಮಗ ಪ್ರಹ್ಲಾದ ಸುಟ್ಟು ಭಸ್ಮವಾಗದೇ ಹೋಲಿಕಾಳೇ ಭಸ್ಮವಾಗಿ ಹೋದಳು. ಈ ಅದ್ಭುತ ಘಟನೆಯ ಸ್ಮರಣೆಗಾಗಿಯೇ ಹೋಳಿ ಹಬ್ಬವನ್ನು ಆಚರಿಸಲಾಗುತ್ತದೆ ಎನ್ನಲಾಗಿದೆ.

**ದುಂಡಾ ರಾಕ್ಷಸಿ :** ಕೃತಯುಗದ ಕಥೆಯಿದು. ರಘುರಾಜನ ರಾಜ್ಯದಲ್ಲಿ ವಿಚಿತ್ರ ಪ್ರಕರಣವೊಂದು ಎಲ್ಲರ ನಿದ್ದೆಗೆಡಿಸಿತು. ಆಡಲು ಹೋದ ಮಕ್ಕಳು ತಿರುಗಿ ಬಾರದೆ ಹೋದರು. ಕೆಲವು ಮಕ್ಕಳು ಗಾಯಗಳೊಂದಿಗೆ ಮರಳಿದರು. ಇದು ನಿತ್ಯ ನಡೆಯತೊಡಗಿತು. ಕಾರಣ ಪ್ರಜೆಗಳು ರಾಜನಲ್ಲಿ ಮೊರೆಯಿತ್ತರು. ಮಕ್ಕಳನ್ನು ಉಳಿಸಿಕೊಡಬೇಕೆಂದು ಪರಿಪರಿಯಾಗಿ ಬೇಡಿಕೊಂಡರು. ಆಗ ರಾಜ ತನ್ನ ಸೇನಾಧಿಪತಿಯನ್ನು ಕರೆದು ಆ ರಾಕ್ಷಸನನ್ನು ವಧಿಸಲು ಆದೇಶ ನೀಡಿದ. ಅದೇ ಸಮಯದಲ್ಲಿ ರಾಜನ ಆಸ್ಥಾನಕ್ಕೆ ನಾರದರು ದಯಮಾಡಿಸಿದರು. ನಡೆದ ವಿಷಯವನ್ನು ಕೇಳಿದ ನಾರದರು ರಾಜನಿಗೆ ಹೇಳಿದರು- 'ಇವಳು ದುಂಡಾ ರಾಕ್ಷಸಿ. ಅವಳನ್ನು ಸೈನಿಕರಿಂದಾಗಲಿ, ಯಾವುದೇ ವೀರರಿಂದಾಗಲಿ ಕೊಲ್ಲಲು ಸಾಧ್ಯವಿಲ್ಲ. ಕೇಟಲೆಗಳಿಂದ ಮಾತ್ರ ಅವಳನ್ನು ಊರು ಬಿಟ್ಟು ಓಡಿಸಲು ಸಾಧ್ಯ. ಅವಳಿಗೆ ಮಕ್ಕಳ ಅವಾಚ್ಯ ಶಬ್ಧಗಳೆಂದರೆ ಆಗುವುದಿಲ್ಲ.'

ನಾರದರು ದುಂಡಾರಾಕ್ಷಸಿಯನ್ನು ಊರು ಬಿಟ್ಟು ಓಡಿಸಲು ಮಕ್ಕಳು ಏನು ಮಾಡಬೇಕು ಎಂಬುದನ್ನು ತಿಳಿಸಿದರು. ಅದರಂತೆ ರಾಜನು ಊರ ಮಕ್ಕಳನ್ನು ಹಾಗೂ ಅವರ ಹೆತ್ತವರನ್ನು ಕರೆಯಿಸಿ ನಾರದರು ಹೇಳಿದ್ದನ್ನೆಲ್ಲ ಹೇಳಿದರು. ಮಕ್ಕಳು ಜಾಗೃತರಾದರು. ಊರಿನ ಬೀದಿ ಬೀದಿಗಳಲ್ಲಿ ಅಲೆದು ಕಟ್ಟಿಗೆ, ಬೆರಣಿ, ಸುಡುವಂತಹ ಒಣಗಿದ ವಸ್ತುಗಳನ್ನು ತಂದು ಊರಿನ ತುಂಬೆಲ್ಲ ಅಲ್ಲಲ್ಲಿ ಗುಡ್ಡೆ ಹಾಕಿದರು. ಬೆಂಕಿ ಹಚ್ಚಿದರು. ಅದರ ಸುತ್ತ ಹಾಕುತ್ತ ಅವಾಚ್ಯ ಮಾತುಗಳನ್ನು ಹೇಳತೊಡಗಿದರು. ರಾಕ್ಷಸಿ ಕೋಪದಿಂದ ಹೊರಗೆ ಬಂದಳು. ನೋಡಿದಲ್ಲೆಲ್ಲಾ ಬೆಂಕಿಯ ಜ್ವಾಲೆಗಳೇ ಕಾಣತೊಡಗಿದವು. ಮಕ್ಕಳ ಬಾಯಿಂದ ಕೆಟ್ಟ ಕೆಟ್ಟ ಬೈಗುಳಗಳು ಕಿವಿಗೆ ಅಪ್ಪಳಿಸತೊಡಗಿದವು. ದುಂಡಾರಾಕ್ಷಸಿಗೆ ಅಲ್ಲಿ ನಿಲ್ಲಲಾಗಲಿಲ್ಲ. ಓಡತೊಡಗಿದಳು. ಮಕ್ಕಳು ಬೆಂಕಿ ಹತ್ತಿದ ಕಟ್ಟಿಗೆಗಳನ್ನು ತೆಗೆದುಕೊಂಡು ಅವಳತ್ತ ಓಡಿದರು. ಓಡಿದಳು ಓಡಿದಳು ರಾಜ್ಯದ ಗಡಿಯನ್ನೇ ದಾಟಿ ಹೋದಳು. ದುಂಡಾ ರಾಕ್ಷಸಿಯನ್ನು ಓಡಿಸಿದುದರ ನೆನಪಿಗಾಗಿ ಹಾಗೂ ಅವಳು ಮತ್ತೊಮ್ಮೆ ಬಾರದೆ ಇರಲಿ ಎಂದು ಪ್ರತಿವರ್ಷ ಬೆಂಕಿಯನ್ನು ಹಚ್ಚಿ ಅದರ ಸುತ್ತಲೂ ಕುಣಿಯುತ್ತ ಅವಾಚ್ಯ ಶಬ್ಧಗಳ ಹಾಡು ಹೇಳುವ ಪದ್ಧತಿ ಬೆಳೆದು ಬಂದಿತು. ಅದರ ಆಚರಣೆಯ ಮುನ್ನಡೆಯೇ ಇಂದಿನ ಹೋಳಿ. ॐ

## ಮನೆ ಮದ್ದು



**ಜೇನುತುಪ್ಪದೊಂದಿಗೆ ಕಾಳು ಮೆಣಸಿನ ಪುಡಿ ಸೇರಿಸಿ ಸೇವಿಸುವುದರಿಂದ ಕಫ ನಿವಾರಣೆಯಾಗುತ್ತದೆ.**

## ಚೈತ್ರ ಸಂಭ್ರಮವನ್ನು ಅನುರಣಿಸುವ

# ಚಾಂದ್ರಮಾನ ಯುಗಾದಿ

## ಆಚರಣೆಯ ವಿಶೇಷ





**ಪ್ರಾಣಿ ಪಕ್ಷಿ ಸಂಕುಲದೊಂದಿಗೆ ಇಡಿಯ ನಿಸರ್ಗವೇ ನವಚೈತನ್ಯದೊಂದಿಗೆ ಸಂಭ್ರಮಿಸುವ ನವಕಾಲವೇ ಚೈತ್ರಮಾಸದ ಆಗಮನ. ಅದರ ಜೊತೆ ಜೊತೆಗೆ ಹಿಂದೂಗಳ ಪ್ರಮುಖ ಹಬ್ಬ ಯುಗಾದಿಯ ಆಗಮನವೂ ಆಗುತ್ತದೆ. ಯುಗಾದಿಯೆಂದರೆ ದಕ್ಷಿಣ ಭಾರತೀಯರಿಗೆ ಅದರಲ್ಲೂ ವಿಶೇಷವಾಗಿ ಕರ್ನಾಟಕ ಮತ್ತು ಆಂಧ್ರಪ್ರದೇಶದ ಜನತೆಗೆ ನೂತನ ಸಂವತ್ಸರವೂ ಪ್ರಾರಂಭವಾಗುವುದರಿಂದ ಈ ಹಬ್ಬಕ್ಕೆ ತನ್ನದೇ ಆದ ವಿಶೇಷತೆಯೂ, ವೈಶಿಷ್ಟ್ಯತೆಯೂ ಜತೆಗೂಡಿದೆ.**

❖ ಶ್ರೀನಾಥ ರಾಯಸಂ

ಮರಳಿ ಬಂದಿದೆ ಸಂಭ್ರಮದ ಯುಗಾದಿ. ಹಣ್ಣೆಲೆಗಳೆಲ್ಲ ಉದುರಿ, ಮರಗಿಡಗಳೆಲ್ಲ ಹೊಸ ಚಿಗುರಿನೊಂದಿಗೆ ಕಂಗೊಳಿಸುವ ಕಾಲ. ಪ್ರಕೃತಿಯು ತನ್ನ ಮೈಕೊಡವಿ ಹಸಿರನ್ನುಟ್ಟ ಅಪ್ಸರೆಯಂತೆ ಮೆರೆಯುವ ಸವಿಗಾಲ.

ಯುಗಾದಿ ಹಬ್ಬ ಹಿಂದುಗಳಿಗೆ ಹೊಸವರ್ಷದ ಮೊದಲ ದಿನ. ಇಡೀ ವರ್ಷದ ಯೋಜನೆಯನ್ನು ರೂಪಿಸಿಕೊಂಡು ಅದರ ಅನುಗುಣವಾಗಿ ಶುಭ ಸಂಕಲ್ಪವನ್ನು ಮಾಡಿಕೊಳ್ಳುವ ದಿನವೇ ಯುಗಾದಿ. ಹಿಂದಿನ ವರ್ಷದ ಸಾಧನೆಯನ್ನು ಪರಿಶೀಲಿಸಿ, ಈ ವರ್ಷಕ್ಕೆ ಬೇಕಾದ ಸಂವಿಧಾನನ್ನು



ವಿಧಾಯ ಪೂರ್ವಕವಾಗಿ ಹಾಕಿಕೊಳ್ಳುವ ದಿನ. ವೇದಗಳ ಮಂತ್ರದಲ್ಲಿ ವರ್ಷವನ್ನು ರಥಕ್ಕೂ, ಉತ್ತರಾಯಣ, ದಕ್ಷಿಣಾಯಣಗಳನ್ನು ಅದರ ಚಕ್ರಗಳಿಗೂ ಹೋಲಿಸಲಾಗಿದೆ. ಆದ್ದರಿಂದ ವರ್ಷವನ್ನು ಯುಗ ಎಂದೂ, ಅದರ ಮೊದಲನೆಯ ದಿನವನ್ನು ಯುಗಾದಿ ಎಂದೂ ಕರೆಯಲಾಗುತ್ತದೆ.

ಯುಗಾದಿ ಹಬ್ಬವನ್ನು ಆಯಾ ಪ್ರದೇಶಕ್ಕೆ ಅನುಗುಣವಾಗಿ ಜನ ಚಾಂದ್ರಮಾನ ಮತ್ತು ಸೌರಮಾನ ಯುಗಾದಿ ಎಂದು ಆಚರಣೆ ಮಾಡುತ್ತಾರೆ, ಹುಣ್ಣಿಮೆ ದಿನ ಚಂದ್ರನು ಯಾವ ನಕ್ಷತ್ರದಲ್ಲಿ ಇರುವನೋ ಆ ನಕ್ಷತ್ರದ ಹೆಸರಿನಿಂದ ಆ ಮಾಸ ಆರಂಭವಾಗುತ್ತದೆ.

ಯುಗಾದಿ ಹಬ್ಬದ ಸಾಂಪ್ರದಾಯಿಕ ಆಚರಣೆಗಳಲ್ಲಿ ಸಡಗರ ಸಂಭ್ರಮ ಮನೆ ಮಾಡಿರುವುದನ್ನು ಗಮನಿಸಬಹುದು. ಎಲ್ಲರೂ ಹೊಸ ಬಟ್ಟೆಗಳನ್ನು ತೊಟ್ಟು ಸಂಭ್ರಮಿಸುವುದು, ದೇವಾಲಯಗಳಿಗೆ ಹೋಗಿ ದೇವರನ್ನು ಪೂಜಿಸುವುದು, ಬೇವು-ಬೆಲ್ಲದ ಸೇವನೆ, ಒಬ್ಬಟ್ಟು ಹೋಳಿಗೆಯ ಹೂರಣವನ್ನು ಸೇವಿಸುವುದು, ಜೀವನದ ಸಿಹಿ-ಕಹಿಗಳೆರಡನ್ನೂ ಪಡೆಯಬೇಕೆಂದು ನೆನಪಿಸಲು ಬೇವು-ಬೆಲ್ಲಗಳ ಮಿಶ್ರಣವನ್ನು ಸೇವಿಸುವುದು. ಹಾಗೂ ಪಂಚಾಂಗ ಪೂಜೆ, ಪಂಚಾಂಗ ಶ್ರವಣ ಮುಖ್ಯವಾದುವು.

ಯುಗಾದಿಯಂದು ವಿಶೇಷವಾಗಿ ಮನೆಯ ಮುಂಬಾಗಿಲಿಗೆ ಮತ್ತು ದೇವರ ಮನೆಯ ಬಾಗಿಲಿಗೆ ತಳಿರು ತೋರಣ ಕಟ್ಟುವರು. ಮನೆಯ ಮುಂದೆ ಬಣ್ಣಬಣ್ಣದ ರಂಗೋಲಿಯನ್ನಿಡುವರು. ಮುಂಜಾನೆ ಬೇಗನೆ ಎದ್ದು ಅಭ್ಯಂಜನ (ಎಣ್ಣೆ ಸೀಗೇಕಾಯಿಯಿಂದ ತಲೆಯನ್ನು ತೊಳೆದುಕೊಳ್ಳುವುದು) ಮಾಡಿ ಪುಣ್ಯಾಹ ಮಂತ್ರಗಳನ್ನು ಉಚ್ಚರಿಸಿ ಮಾವಿನ ಎಲೆಯಿಂದ ಮನೆಯ ಎಲ್ಲ ಕಡೆ ಕಳಶದ ನೀರನ್ನು ಸಿಂಪಡಿಸುವರು. ನಂತರ ಹೊಸ ಬಟ್ಟೆ ಧರಿಸಿ ಪಂಚಾಂಗವನ್ನು ಮನೆಯ ಹಿರಿಯರು ಓದುವರು, ಮತ್ತೆಲ್ಲರೂ ಅದನ್ನು ಕೇಳುವರು.

ಈ ಯುಗಾದಿ ಹಬ್ಬದಂದು ಬೆಲ್ಲ ಮತ್ತು ಕಹಿಯಾದ ಬೇವು ಮಿಶ್ರಣವನ್ನು ಸೇವಿಸುವ ಆಚರಣೆ ಇದೆ. ಬೆಲ್ಲ ಸುಖಕರ, ಕಹಿಬೇವು ದುಃಖಕರ ಎಂಬುದು ಎಲ್ಲರಿಗೂ

ಗೊತ್ತಿರುವ ವಿಚಾರ. ಜೀವನವು ಕ್ಷಣಕಾಲ ಉರಿದು ನಾಶವಾಗುವ ಮೇಣದ ಬತ್ತಿಯಲ್ಲ. ಸಂಪೂರ್ಣ ಸುಖ ಮತ್ತು ದು:ಖದ ನೆಲೆಯೂ ಅಲ್ಲ. ಪ್ರಕೃತಿಯ ಕತ್ತಲು-ಬೆಳಕಿನ ಆಟದಂತೆಯೇ ಸುಖ-ದುಃಖ, ಶೀತ-ಉಷ್ಣ, ಲಾಭ-ನಷ್ಟಗಳಿಂದಲೂ ಬದುಕು ಕೂಡಿದೆ. ಇವುಗಳ ಸಂಕೇತವೇ ಬೇವು ಬೆಲ್ಲ.

### ಬೇವು ಬೆಲ್ಲದ ಆರೋಗ್ಯದ ವಿಶೇಷತೆ

ಬೇವು-ಬೆಲ್ಲ ವೈದ್ಯಕೀಯ ಗುಣಗಳನ್ನು ಹೊಂದಿದೆ. ಬೇವಿನ ಎಲೆಗಳನ್ನು ಸೇವಿಸುವುದರಿಂದ ಸರ್ವ ಅನಿಷ್ಟಗಳೂ ನಾಶವಾಗುತ್ತವೆ. ಮಾನವ ವಜ್ರದೇಹಿಯಾಗುತ್ತಾನೆ. ಸಂಪತ್ತು ಉಂಟಾಗುತ್ತದೆ. ಆಯಸ್ಸು ವೃದ್ಧಿಯಾಗುತ್ತದೆ ಎಂದು ಆಯುರ್ವೇದ ಹೇಳುತ್ತದೆ.

ಯುಗಾದಿ ಎಂದರೆ ಒಬ್ಬಟ್ಟು ಅಥವಾ ಹೋಳಿಗೆಯೇ ವಿಶೇಷ. ತೆಂಗಿನಕಾಯಿ ಹೂರಣದಲ್ಲಿ ಮಾಡಿದ ಹೋಳಿಗೆ ಬಹಳ ದಿನ ಇರದೇ ಕೆಡುವುದೆಂದು ಕಡಲೆ ಅಥವಾ ತೊಗರೀಬೇಳೆಯ ಹೂರಣದಲ್ಲಿ ಮಾಡುವರು. ಇದನ್ನೇ ಮರಾಠಿಯಲ್ಲಿ ಪೂರಣ ಪೋಳಿ ಎಂದು ಕರೆಯುವರು. ಮಕ್ಕಳು ಸಂಜೆಯ ವೇಳೆಯಲ್ಲಿ ಗುರು ಹಿರಿಯರ ಮನೆಗಳಿಗೆ ಹೋಗಿ ಅವರ ಕಾಲು ಮುಟ್ಟಿ ನಮಸ್ಕರಿಸಿ ಅವರ ಆಶೀರ್ವಾದ ಪಡೆಯುವುದು ಶುಭಕರ ಎಂಬ ನಂಬಿಕೆಯಿದೆ.

ಮಾವಿನ ಬೇವಿನ ಸಮಾಗಮದ ನಂತರ ಪುಷ್ಕಳ ಭೋಜನ. ಕೆಲವು ಪ್ರದೇಶಗಳಲ್ಲಿ ಹುಣಿಸೇಹಣ್ಣು, ಬೆಲ್ಲ, ಮಾವಿನಕಾಯಿ, ಉಪ್ಪು, ಮೆಣಸು, ಬೇವು ಇತ್ಯಾದಿಗಳ ಮಿಶ್ರಣ ಮಾಡಿ ಯುಗಾದಿ ಪಚ್ಚಡಿ ಎಂಬ ಹೆಸರಿನ ಪದಾರ್ಥವನ್ನು ಸೇವಿಸುವರು. ಸಂಜೆಯ ಹೊತ್ತು ಜೋಕಾಲಿ ಜೀಕುವುದು, ಹಾಡುವುದು. ಎಲ್ಲ ಆದ ಮೇಲೆ ಆಚಾರ್ಯರಿಂದ ಹೊಸವರ್ಷದ ಬಗ್ಗೆ ಮಾಹಿತಿ ನೀಡುವ ಪಂಚಾಂಗ ಶ್ರವಣ. ಎಲ್ಲವೂ ಸಾಂಪ್ರದಾಯಿಕ ನೆಲೆಗಟ್ಟಿನಲ್ಲಿ ನಡೆಯುತ್ತದೆ.



**ಒಳ್ಳೆಯ ಮಾತು**

**ಎಲ್ಲ ಸಂದರ್ಭಗಳಲ್ಲಿಯೂ ಮಾತನಾಡಬೇಕು ಎಂಬುದನ್ನು ಬಿಡಿ. ಅನೇಕ ಸಲ ಮಾತಿಗಿಂತ ಮೌನವೇ ಹೆಚ್ಚು ಫಲಕಾರಿ.**

ಯುಗಾದಿ ಹಬ್ಬವನ್ನು ಹೆಚ್ಚಾಗಿ ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಆಚರಿಸುವರು. ಆಂಧ್ರ ಮತ್ತು ಕರ್ನಾಟಕಗಳಲ್ಲಿ ಇದು ಯುಗಾದಿಯಾದರೆ, ಮಹಾರಾಷ್ಟ್ರದಲ್ಲಿ ಗುಡಿಪಾಡ್ ಪಾಡ್ಯಮಿ ದಿವಸ - ಗುಡಿಯನ್ನು ಏರಿಸುವುದೇ ಗುಡಿಪಾಡ್ಯ - ಒಂದು ಕೋಲಿಗೆ ವಸ್ತ್ರವನ್ನು ಕಟ್ಟಿ, ಹೂವಿನ ಹಾರವನ್ನು ಏರಿಸಿ 'ಗುಡಿ' ಎಂದು ಮೂಲೆಯಲ್ಲಿ ಇರಿಸುವರು. ಇದು ಹೊಸ ವರುಷದ ಆಗಮನಕ್ಕೆ ಬಾವುಟವನ್ನು ಹಾರಿಸುವುದರ ಸಂಕೇತ.



ಹತ್ತಾರು ಧರ್ಮ, ಸಂಸ್ಕೃತಿ, ಪ್ರಾದೇಶಿಕತೆಗಳ ವೈವಿಧ್ಯವನ್ನು ತುಂಬಿಕೊಂಡಿರುವ ನಮ್ಮಲ್ಲಿ ಸಂಸ್ಕೃತಿಯ ಜತೆಗೆ ಧಾರ್ಮಿಕ ನಂಬಿಕೆ ಇಂದಿಗೂ ಉಳಿದುಕೊಂಡಿದೆ. ಧರ್ಮಗ್ರಂಥಗಳ ಪಾರಾಯಣ, ಪಂಚಾಂಗ ಶ್ರವಣ ಸಂಸ್ಕೃತಿಯ ಒಂದು ಭಾಗ. ತಲೆತಲಾಂತರಗಳಿಂದಲೂ ಯುಗಾದಿ ಹಬ್ಬದ ದಿನ ಪಂಚಾಂಗ ಶ್ರವಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಾರೆ. 'ಪಂಚಾಂಗ ಶ್ರವಣದಲ್ಲಿ ಭವಿಷ್ಯದ ವಿಚಾರವನ್ನು ರಾಶಿಫಲದ ಆಧಾರದಲ್ಲಿ ಯೋಗ, ಕರಣ, ವಾರ, ತಿಥಿಯನ್ನು ಆಧರಿಸಿ ತಜ್ಞರು ಪಂಚಾಂಗವನ್ನು ಅಧ್ಯಯನ ಮಾಡುವ ಮೂಲಕ ಕೇಳುಗರಿಗೆ, ಜನರಿಗೆ ಮಾಹಿತಿ ನೀಡುತ್ತಾರೆ. ಅಂದಿನಿಂದ ಆರಂಭವಾಗುವ ನೂತನ ಸಂವತ್ಸರದ ಒಳಿತು ಕೆಡುಕುಗಳ ಬಗೆಗಿನ ಭವಿಷ್ಯವನ್ನು ವಿಶೇಷ ರೀತಿಯಲ್ಲಿ ಪಂಚಾಂಗದ ಆಧಾರವಾಗಿಟ್ಟುಕೊಂಡು ಜನರಿಗೆ ಮಾಹಿತಿ ನೀಡುತ್ತಾರೆ.

ಹೊಸ ವರ್ಷದ ಮಳೆ, ಬೆಳೆ ವಿಚಾರ, ಜನರ ಬದುಕಿನ ವಿಚಾರ, ಊರಿಗೆ ಒಳ್ಳೆಯದಾಗುತ್ತೋ ಕೆಟ್ಟದಾಗುತ್ತೋ ಎಂಬ ವಿಚಾರ ಮುಂತಾದವು ಶುಭ ನುಡಿಗಳೊಂದಿಗೆ ಮಿಳಿತಗೊಳ್ಳುತ್ತವೆ. ಅಲ್ಲದೆ ಅದು ಭವಿಷ್ಯದಲ್ಲಿ ಹೊಸ ಭರವಸೆಗೆ, ಆಶಾದಾಯಕ ಬದುಕಿಗೆ ನಾಂದಿ ಹಾಡುತ್ತದೆ' ಎಂಬ ನಂಬಿಕೆ ಪ್ರಚಲಿತದಲ್ಲಿದೆ. ಶಾರ್ವರಿ ಸಂವತ್ಸರಕ್ಕೆ ನಾಂದಿ ಹಾಡುವ ಯುಗಾದಿ ಮತ್ತೆ ಸಿಹಿ ಕಹಿಗಳ ಸಮಾಗಮದೊಂದಿಗೆ ಬಂದಿದೆ. ಬದುಕೆಂಬುದು ಬೇವು ಬೆಲ್ಲದ ಸಮ್ಮಿಶ್ರಣ, ಇದು ಹಸನಾಗಬೇಕಾದರೆ ಭವಿಷ್ಯತ್ತಿನ ರೂಪುರೇಷೆಗಳ ಅರಿವು ನಮಗಿರಬೇಕು ಎಂಬುದು ತಜ್ಞರ ಅಭಿಮತ. ಆ ನಿಟ್ಟಿನಲ್ಲಿ ಮುನ್ನಡೆಯೋಣ.





# ದೇವರು ಎಲ್ಲಿದ್ದಾನೆ?

❖ ಶ್ರೀಮತಿ ಅನಸೂಯ

'ದೇವರು'-ಅಂದು ಇಂದಿಗೂ ನಿಗೂಢವಾಗಿಯೇ ಉಳಿದಿರುವ ವಿರಾಟ್ ಸ್ವರೂಪಿ. ದೇವರೇ ಈ ಸೃಷ್ಟಿಯ ಕಾರಣಕರ್ತ ಎಂದು ಬಹುಸಂಖ್ಯಾತರ ನಂಬಿಕೆ. ಆದರೂ ಆ ಕಾರಣಕರ್ತನ ಇರುವು ಮಾತ್ರ ಅಗಮ್ಯ; ಅಗೋಚರ, ಅದ್ಭುತ. ಅವನ ಅಸ್ತಿತ್ವ ಎಷ್ಟು ಸರಳವೋ ಅಷ್ಟೇ ಕಠಿಣ. ಅವನ ಸ್ವರೂಪ ಅಂಧರ ಗಜಸ್ಪರ್ಷದ ರೀತಿ. ಅದಕ್ಕೇ ಇಂದು ಭೂಮಿಯ ಮೇಲೆ ವಿಷ್ಣು, ಶಿವ, ಬ್ರಹ್ಮ, ರಾಮ, ಕೃಷ್ಣ, ಗಣೇಶ, ಭೈರವ, ವೀರಭದ್ರ, ಲಕ್ಷ್ಮೀ, ಪಾರ್ವತಿ, ಸರಸ್ವತಿ, ದುರ್ಗೆ, ಯಲ್ಲಮ್ಮ, ಮಾಯಕ್ಕ........... ಇನ್ನೂ ಅಸಂಖ್ಯ ದೇವ-ದೇವಿಯರು ಪೂಜೆಗೊಳ್ಳುತ್ತಿದ್ದಾರೆ. ಯಾಕೆಂದರೆ ಅವರೆಲ್ಲರೂ ಈ ಭೂಮಿಯ ಉದ್ಧಾರಕ್ಕೆ ಹಗಲಿರುಳು ದುಡಿಯುತ್ತಿದ್ದಾರೆ ಎಂಬ ಅಚಲ ನಂಬಿಕೆ ಜನರದು. ಇದನ್ನು ಅನುಭವಿಗಳು ಅನುಭಾವಿಸಿದ ಪರಿ-'ನಾಮ ಹಲವು ದೇವನೊಬ್ಬ.' ಅರ್ಥಾತ್ ಅವರವರ ಭಾವದಂತೆ ಭಗವಂತ. ಹೌದು! ಮಾನವನ ಬುದ್ಧಿವಂತಿಕೆಗೆ ನಿಲುಕಲಾರದ್ದು ಯಾವುದು? ತನ್ನ ಬುದ್ಧಿವಂತಿಕೆ ಬಳಸಿ ತನಗೆ ಸಹಾಯ ಮಾಡುತ್ತಿರುವ ತನ್ನ ಆರಾಧನಾಮೂರ್ತಿಯನ್ನು ತಾನೇ ಸೃಷ್ಟಿಸಿಕೊಂಡು ಆರಾಧಿಸುತ್ತಿದ್ದಾನೆ ಎಂಬುದು ಅನುಭವಿಗಳ ಮಾತು. ಇದನ್ನೇ ಶರಣರು ಹೀಗೆ ಹೇಳಿದರು-'ನಂಬಿ ಕರೆದರೆ ಓ ಎನ್ನನೇ ಶಿವನು?' ಅರ್ಥಾತ್ ನಂಬಿ ಪೂಜಿಸಿದರೆ ದೇವರು ಅದೇ ರೂಪದಲ್ಲಿ ತನ್ನ ಭಕ್ತರಿಗೆ ದರ್ಶನ ಕೊಡುತ್ತಾನೆ.

ಆ ದೇವರು ತನ್ನ ಸೃಷ್ಟಿಯ ಜೀವರಾಶಿಗಳಿಗೆ ಬೇಕಾದುದನ್ನೆಲ್ಲ ನೀಡಿದ್ದಾನೆ. ಗಾಳಿ, ಬೆಳಕು, ನೀರು-ಇವು ಸೃಷ್ಟಿಯ ಜೀವರಾಶಿಗಳಿಗೆ ದೇವರು ನೀಡಿರುವ ಅವನದೇ ಅಪ್ಪಟ ಕೊಡುಗೆಗಳು.

ಇವುಗಳನ್ನು ಮಾನವ ನಿರ್ಮಿಸಲಾರ. ಅಲ್ಲದೇ ದೇವರು ಮಾನವನಿಗೆ ತನ್ನ ಅಪರೂಪದ ಮಾನವ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಲು ಆಲೋಚನಾ ಶಕ್ತಿ, ಅರಿವು, ಪಾಪ, ಪುಣ್ಯಗಳ ವಿಚಾರಶಕ್ತಿ ನೀಡಿದ್ದಾನೆ. ಇವುಗಳ ಬಳಕೆ ಸರಿಯಾಗಿ ಆದಾಗಲೇ ಮಾನವ ಜನ್ಮಕ್ಕೊಂದು ಅರ್ಥ.

ಇಂಥಹ ಅದ್ಭುತ ಶಕ್ತಿಯನ್ನು ನಾವು 'ದೇವರು' ಎಂದು ಒಪ್ಪಿ ಮನಸಾರೆ ಭಕ್ತಿಭಾವದಿಂದ ಆರಾಧಿಸಲೇ ಬೇಕಲ್ಲವೇ? ಇವುಗಳ ಬಳಕೆ ಸರಿಯಾಗಿ ಆದಾಗಲೇ ಮಾನವ ಜನ್ಮಕ್ಕೊಂದು ಅರ್ಥ ಅಲ್ಲವೇ?

ಹೌದು, ಈ ಸೃಷ್ಟಿಯ ನಿರ್ಮಾಪಕನನ್ನು, ಆ ಅದ್ಭುತ ಶಕ್ತಿಯನ್ನು ಮಾನವ 'ದೇವರು' ಎಂದು ಒಪ್ಪಿ ನಾನಾ ವಿಧಗಳಲ್ಲಿ ಆರಾಧಿಸುತ್ತ ಬರುತ್ತಿದ್ದಾನೆ. ಆದರೆ ಆ ದೇವರು ಎಲ್ಲಿದ್ದಾನೆ? ಸೃಷ್ಟಿಗೆ ಕಾರಣನಾದ, ಜೀವರಾಶಿಗಳಿಗೆ ಜೀವ ನೀಡಿದ, ಅನ್ನ ನೀರು ನೀಡಿದ ಆ ದೇವನು ಎಲ್ಲಿ? ಈ ಪ್ರಶ್ನೆಗಳಿಗೆ 'ಸಾರ್ವತ್ರಿಕ ಸತ್ಯ' ಎನ್ನುವ ಉತ್ತರ ಇನ್ನೂ ಸಿಕ್ಕಿಲ್ಲ. ಅಷ್ಟೇ ಅಲ್ಲ 'ದೇವರು ಎಂಬ ಕಲ್ಪನೆಯೇ ಅತಾರ್ಕಿಕ, ದೇವರು ಇಲ್ಲವೇ ಇಲ್ಲ' ಎನ್ನುವ ನಾಸ್ತಿಕವಾದಿಗಳೂ ಇದ್ದಾರೆ. ಹಾಗೆಯೇ ದೇವರನ್ನು ನಂಬಿ ಸುಖದ ಜೀವನ ನಡೆಸುವವರೂ ನಮ್ಮ ಮುಂದಿದ್ದಾರೆ. ಆದರೆ 'ದೇವರು ಇದ್ದಾನೆ. ನಮ್ಮೊಳಗೇ ಇದ್ದಾನೆ. ನಂಬಿ ಕರೆದರೆ ಅವನು ಬಂದೇ ಬರುತ್ತಾನೆ. ದೇವರಿಲ್ಲದ ಬದುಕನ್ನು ನಾವು ನೆನಪಿಸಿಕೊಳ್ಳುವುದೂ ಅಸಾಧ್ಯ. ನಮ್ಮ ಬದುಕಿನ ನಮ್ಮ ಜೀವದ ಉಸಿರು ದೇವರು.".

ಸ್ವಾಮಿ ವಿವೇಕಾನಂದರು ಹೇಳುತ್ತಾರೆ. 'ದೇವರ ಅಸ್ತಿತ್ವ ಅರಿತುಕೊಳ್ಳಲು ನಂಬಿಕೆ ಮುಖ್ಯ. ದೇವರ ಮೇಲೆ ನಂಬಿಕೆ ಇದ್ದರೆ



ದೇವರನ್ನು ಕಾಣಲು ದೇವಾಲಯ, ಚರ್ಚ್, ಮಸೀದಿಗಳಿಗೆ ಹೋಗಬೇಕಾಗಿಲ್ಲ. ಭಕ್ತನ ದೇಹವೇ ದೇವರಿಗೆ ದೇಗುಲ ಆಗುತ್ತದೆ. ದೇವರು ಅವನಲ್ಲಿ ತಾನೇ ತಾನಾಗಿ ಉದ್ಭವಿಸುತ್ತಾನೆ, ಅವನಿಗೆ ದಾರಿ ತೋರುತ್ತಾನೆ.' ಇದಕ್ಕೆ ಪೂರಕವಾಗಿ ದೇವರನ್ನು ತಾವು ನೋಡಿದ್ದೇವೆ ಎಂದು ಖಡಾಖಂಡಿತವಾಗಿ ಹೇಳಿರುವ ಮೀರಾ, ಕಬೀರ, ಕನಕದಾಸರು, ಪುರಂದರದಾಸರು, ರಾಮಕೃಷ್ಣ ಪರಮಹಂಸರು, ಶಾರದಾಮಾತೆ............ ಇನ್ನೂ ಅನೇಕರನ್ನು ಹೆಸರಿಸಬಹುದು. ಇದಕ್ಕೆ ಪೂರಕವಾಗಿ ಒಂದು ಕಥೆ–

ಅರಣ್ಯ! ಜುಳು ಜುಳು ಹರಿಯುತ್ತಿರುವ ನದಿ. ನಯನಮನೋಹರ ನಿಸರ್ಗ ರಮಣೀಯತೆ....... .ನದಿಯ ತೀರದಲ್ಲೊಂದು ಆಶ್ರಮ. ಅದರಲ್ಲಿ ದೇವರ ದರ್ಶನದ ಹಂಬಲ ಹೊತ್ತ ಯೋಗಿಯೊಬ್ಬರ ವಾಸ. ಹೆಚ್ಚಿನ ಸಮಯ ಧ್ಯಾನದಲ್ಲೇ ಕಳೆಯುತ್ತಿದ್ದರು. ಅಲ್ಲಿಗೆ ನಿರ್ಮಲ ಹೃದಯದ, ಮುಗ್ಧ ಮನಸ್ಸಿನ ದನಗಾಹಿಯೊಬ್ಬ ಸಮೀಪದ ಊರಿನಿಂದ ದನಕರುಗಳನ್ನು ಮೇಯಿಸಲು ಬರುತ್ತಿದ್ದ. ರಾತ್ರಿಯ ಸಮಯ ಊರಿನಲ್ಲಿ ನಡೆಯುತ್ತಿದ್ದ ಪ್ರವಚನಗಳನ್ನು ಬಿಡದೇ ಕೇಳುತ್ತಿದ್ದ. ದಿನಗಳೆದಂತೆ ಅವನಲ್ಲಿ ದೇವರ ಬಗೆಗೆ ಆಸಕ್ತಿ ಮೂಡಿತು. ಎಲ್ಲರನ್ನೂ ಸಲಹುವ ಆ ಲೋಕಪಾಲಕ ಹೇಗಿರಬೇಕು ಎಂಬ ಕುತೂಹಲ ಬಲವಾಗಿ ಬೆಳೆಯಿತು. ಆದರೆ ದನಗಾಹಿಗರಿಗೆ ದೇವರನ್ನು ಕಾಣುವ ದಾರಿ ತೋರಿಸುವವರಾರು? ಆಗ ಅವನಿಗೆ ನೆನಪಿಗೆ ಹೊಳೆದದ್ದು ನದಿ ತೀರದ ಆಶ್ರಮದ ಯೋಗಿ.

ದಿನಗಳು ಉರುಳುತ್ತಲೇ ಇದ್ದವು. ಗೋಪಾಲಕನಲ್ಲಿ ದೇವರನ್ನು ಕಾಣುವ ತುಡಿತ ಹೆಚ್ಚಾಗಿ ಯೋಗಿಯ ಹತ್ತಿರ ಹೋದ. ಅವರ ಕಾಲಿಗೆ ನಮಸ್ಕರಿಸಿ ಕೈ ಮುಗಿದು ಕುಳಿತುಕೊಂಡ. ಸ್ವಾಮಿಗಳು ಧ್ಯಾನ ಮುಗಿಸಿ ಎದ್ದ ಮೇಲೆ ದನಗಾಹಿಯನ್ನು ಬಂದ ಕಾರಣ ಕೇಳಿದಾಗ–'ತಾವು ದೈವಾಂಶ ಸಂಭೂತರು. ನಾನು ದೇವರನ್ನು ನೋಡಬೇಕು. ದೇವರನ್ನು ಒಲಿಸಿಕೊಳ್ಳಬೇಕು. ಅದಕ್ಕಾಗಿ ನಾನು ಏನು ಮಾಡಬೇಕು. ತಾವು ನನಗೆ ದೇವರ ದರ್ಶನದ ದಾರಿ ತೋರಿಸಬೇಕು' ಎಂದು ಅವರ ಕಾಲಿಗೆ ನಮಸ್ಕರಿಸಿ ಕುಳಿತುಕೊಂಡ. ದನಗಾಹಿಯ ಬೇಡಿಕೆ ಯೋಗಿಗೆ ನಗೆ ತರಿಸಿತು– 'ನಾನೇ ದೇವ ಸಾಕ್ಷತ್ಕಾರಕ್ಕಾಗಿ ಹಗಲಿರುಳೂ ಶ್ರಮಿಸುತ್ತಿರುವಾಗ ನನಗೇ ಒಲಿಯದ ದೇವರು ಈ ದನಗಾಹಿಗೆ ಅಷ್ಟು ಸುಲಭವಾಗಿ ಸಿಗಬಲ್ಲನೇ?' ಎಂದುಕೊಂಡು ತುಟಿಯಂಚಿನಲ್ಲಿ ನಗು ಬೀರುತ್ತ– 'ಗೋಪಾಲಕ, ದೇವರ ದರ್ಶನ ಅಷ್ಟು ಸುಲಭವಲ್ಲ. ನಿನಗೆ ಅದು ಸಾಧ್ಯವೂ ಇಲ್ಲ. ಇದೆಲ್ಲ ನಿನಗೇಕೆ? ದನಕರುಗಳನ್ನು ಪಾಲಿಸುತ್ತ ದೇವರ ದರ್ಶನದ ಆಸೆ ಬಿಟ್ಟು ನೆಮ್ಮದಿಯಾಗಿ ಇರು...........' ಎಂದು ಹೇಳಿ ಅವನನ್ನು ಕಳುಹಿಸಿದರು.

ಭಾರವಾದ ಭಾವದಿಂದಲೇ ಆಶ್ರಮದಿಂದ ಹೊರ ಬಂದ ಗೋಪಾಲಕನಿಗೆ ಯೋಗಿಯ ಮಾತುಗಳು ನಿರಾಸೆ ಮೂಡಿಸಿದವು. ಆದರೆ ದೇವರನ್ನು ಕಾಣುವ ಕಾತುರ ಮಾತ್ರ ಹೆಚ್ಚುತ್ತಲೇ ಹೋಯಿತು. ದೇವರ ದರ್ಶನ ಮಾಡುವುದೇ ತನ್ನ ಬದುಕಿನ ಗುರಿ ಎಂದು ನಿರ್ಧಾರ ಮಾಡಿಯೇ ಬಿಟ್ಟ. ಮತ್ತೊಮ್ಮೆ ಧೈರ್ಯ ಮಾಡಿ ಸ್ವಾಮಿಗಳ ಆಶ್ರಮಕ್ಕೆ ಹೋದ. ಅವರ ಮುಂದೆ ಮಂಡಿಯೂರಿ ಕುಳಿತು–'ತಾವು ನನಗೆ ದೇವರ ದರ್ಶನದ ದಾರಿ ತೋರಿಸಲೇ ಬೇಕು. ಇಲ್ಲದಿದ್ದರೆ ನಾನು ಆಶ್ರಮ ಬಿಟ್ಟು ಹೋಗುವುದಿಲ್ಲ' ಎಂದು ಕಂಬನಿ ಮಿಡಿಯುತ್ತ ಕುಳಿತುಕೊಂಡ. ದನಗಾಹಿಯ ದೇವರ ದರ್ಶನದ ಆತುರತೆಯನ್ನು ಕಂಡು ಯೋಗಿಯೂ ಪ್ರಭಾವಿತರಾದರು. ಅವನ ಮುಗ್ಧತೆ ಕಂಡು ಅವನಿಗೆ ಏನಾದರೂ ದಾರಿ ತೋರಿಸಲೇ ಬೇಕು ಎಂದು ನಿರ್ಧರಿಸಿ–'ಗೋಪಾಲಕ, ದೇವರನ್ನು ಕಾಣುವ ನಿನ್ನ ದೃಢ ನಿರ್ಧಾರಕ್ಕೆ ನಾನು ಮೆಚ್ಚಿದ್ದೇನೆ. ದೇವರು ಸರ್ವಾಂತರ್ಯಾಮಿ. ನೀನೇ ಹೇಳು. ದೇವರ ಬಗೆಗೆ ನೀನು ಏನು ತಿಳಿದುಕೊಳ್ಳಬೇಕು?' ಸ್ವಾಮೀಜಿಯ ಮಾತು ಕೇಳಿ ಗೋಪಾಲಕನಿಗೆ ದೇವರು ಸಿಕ್ಕಷ್ಟೇ ಖುಷಿ ಆಯಿತು. ಗೋಪಾಲಕ ಹೇಳಿದ–'ಮಹಾತ್ಮರೇ, ತಾವು ದೇವರನ್ನು ಕಂಡವರು. ದೇವರು ಎಲ್ಲಿರುತ್ತಾನೆ? ಅವನ ಸ್ವರೂಪ ಎಂಥಹುದು? ಅವನನ್ನು ದರ್ಶನ ಮಾಡುವ ದಾರಿ ತೋರಿಸಿ' ಎಂದು ಬೇಡಿಕೊಂಡ. ಯೋಗಿ ಹೇಳಿದ–'ನೀನು ಪಾಲಿಸುತ್ತಿರುವ ಹಸುಗಳಲ್ಲಿ ನಿನಗೆ ಪ್ರಿಯವಾದ ಗೂಳಿಬಸವ ಒಂದಿದೆ. ಅದೇ ದೇವರು. ಅದೇ ದೇವರ ರೂಪ. ಅದನ್ನೇ ಪೂಜಿಸು. ದೇವರು ನಿನಗೆ ದರ್ಶನ ನೀಡುತ್ತಾನೆ.' ಯೋಗಿಯ ಮಾತು ಕೇಳಿ ಗೋಪಾಲಕನಿಗೆ ಪರಮಾನಂದವಾಯಿತು. ದೇವರು ತನ್ನ ಬಳಿಯೇ ಇದ್ದರೂ ನಾನು ಕಾಣದೇ ಹೋದೆ ಎಂದು ತನಗೆ ತಾನೇ ಬೈಯ್ದುಕೊಂಡ, ತನ್ನ ಬಳಿಯೇ ಇರುವ ದೇವರನ್ನು ತೋರಿಸಿಕೊಟ್ಟ ಯೋಗಿಗೆ ನಮಸ್ಕಾರ ಮಾಡಿ ತನ್ನ ಹಸುಗಳತ್ತ ಧಾವಿಸಿದ.

ದನಗಳ ನಡುವೆ ಶಾಂತವಾಗಿ ಹುಲ್ಲು ಮೇಯುತ್ತಿದ್ದ ಗೂಳಿಯನ್ನು ಕಂಡು ಆನಂದ ಭರಿತನಾದ. ಓಡುತ್ತ ಹೋಗಿ ದೀರ್ಘದಂಡ ನಮಸ್ಕಾರ ಮಾಡಿದ. ಅಂದು ಆ ಗೂಳಿ ಅವನಿಗೆ ಎಂದಿನ ಗೂಳಿಯಾಗಿರದೇ ಸಾಕ್ಷಾತ್ ದೇವರಾಗಿತ್ತು. ಗೂಳಿಯನ್ನು ನಂಬಿ ಅದನ್ನು ಆರಾಧಿಸ ತೊಡಗಿದ. ಹಗಲಿರುಳು ಗೂಳಿಯ ಆರೈಕೆಯಲ್ಲಿಯೇ ದಿನಗಳನ್ನು ಕಳೆಯತೊಡಗಿದ. ಗೂಳಿಗೆ ಧೂಪ–ದೀಪ ಹಚ್ಚಿ ಪ್ರಾರ್ಥಿಸಿದ. ಗೂಳಿಯೇ ದೇವರೆಂದು ನಂಬಿ ಗೂಳಿಯಲ್ಲಿಯೇ ದೇವರನ್ನು ಕಾಣತೊಡಗಿದ. ನಿರ್ಮಲ ನೀರು ಕುಡಿಸಿದ. ಹಚ್ಚ ಹಸಿರಿನ ಮೇವು ತಿನ್ನಿಸಿದ. ಅದು ಮಲಗಿದರೆ ಮಲಗಿದ. ಎಚ್ಚರಿದ್ದರೆ ತಾನೂ ಜಾಗರಣೆ ಮಾಡಿದ. ಒಟ್ಟಾರೆಯಾಗಿ ಗೂಳಿ ಅವನಿಗೆ ಸಾಕ್ಷಾತ್ ದೇವರಾಗಿತ್ತು. ಆ ದೇವನಿಗೆ ಗೋಪಾಲಕ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದ.

> **ದೇವರು ಇದ್ದಾನೆ ಎಂದು ನಂಬಿದವರ ಮನದಲ್ಲಿ ದೇವರಿದ್ದಾನೆ. ಅವನನ್ನು ಕಾಣಲು ಅಚಲವಾದ ನಿಷ್ಠೆ, ಆತ್ಮಶುದ್ಧಿ, ಶ್ರದ್ಧೆ ಬೇಕು.**

ಕಾಲ ಉರುಳುತ್ತಿತ್ತು. ಗೋಪಾಲಕ ತನ್ನ ದೇವರ ಸೇವೆ ಮಾಡುತ್ತಲೇ ಇದ್ದ. ಒಂದು ದಿನ ಗೋಪಾಲಕ ಅರಣ್ಯದಲ್ಲಿ ತನ್ನ ದನಕರುಗಳನ್ನು ಮೇಯಲು ಬಿಟ್ಟು ಒಂದು ಗಿಡದ ನೆರಳಲ್ಲಿ ತನ್ನ ದೇವರು ಗೂಳಿಗೆ ಹುಲ್ಲು ತಿನ್ನಿಸುತ್ತ ಕುಳಿತಿದ್ದ. ನಿದ್ದೆ ಬಂದದ್ದೇ ಗೊತ್ತಾಗಲಿಲ್ಲ. ಮಟಮಟ ಮಧ್ಯಾಹ್ನದ ಬಿಸಿಲ ನಿದ್ದೆಯಲ್ಲಿ 'ವತ್ಸ... ವತ್ಸ....' ಎಂದು ಯಾರೋ ಕರೆದಂತಾಗಿ ಎದ್ದು ಕುಳಿತು ನೋಡಿದ. ಧ್ವನಿ ಗೂಳಿ ಕಡೆಯಿಂದಲೇ ಬಂದಂತಿತ್ತು. ನೋಡಿದರೆ ಗೂಳಿ ಮೆಲಕು ಹಚ್ಚಿ ಕಣ್ಣು ಮುಚ್ಚಿತ್ತು. ಮತ್ತೊಮ್ಮೆ 'ವತ್ಸ.......ವತ್ಸ.......ನಾನು ಇಲ್ಲಿಯೇ ನಿನ್ನೊಡನೆ ನಿನ್ನೊಳಗೇ ಇದ್ದೇನೆ' ಎಂದು ಹೇಳಿದ ಮಾತು ಕೇಳಿಸಿತು. ಈ ಮಾತು ಮೆಲಕು ಹಾಕುತ್ತಿರುವ ಆಕಳಿಂದಲೇ ಬರುತ್ತಿರುವುದು ಗೋವಳನಿಗೆ ಖಾತ್ರಿ ಆಯಿತು. ಆಗ ಅವನಿಗೆ ಭಗವಂತನ ಸಾಕ್ಷಾತ್ಕಾರವಾಯಿತು. ಅವನು ಅಂದುಕೊಂಡ–'ದೇವರು ಗೂಳಿಯಲ್ಲೂ ಇದ್ದಾನೆ. ನನ್ನಲ್ಲೂ ಇದ್ದಾನೆ. ಅಣು–ರೇಣು–ತೃಣ–ಕಾಷ್ಠದಲ್ಲೂ ಅವನ ವಾಸ. ದೇವರ ಸಾಕ್ಷಾತ್ಕಾರದ ರಹಸ್ಯ' ಅವನಿಗಾಯಿತು. ಅವನು ತಾನೆಂದೂ ಕಾಣದ ಆನಂದ, ಶಾಂತಿ, ನೆಮ್ಮದಿ ಅನುಭವಿಸಿದ. ಅವನಿಗರಿಯದಂತೆಯೇ ಅವನ ಬಾಯಿಂದ ಒಂದು ಮಾತು–'ದೇವರು ನಮ್ಮೊಳಗೇ ಇದ್ದಾನೆ. ಅವನನ್ನು ಕಾಣುವ ಕಣ್ಣುಗಳು ಮಾತ್ರ ಬೇಕು.' ಶಿವರಾಮ ಕಾರಂತರು ಹೇಳುತ್ತಾರೆ–'ನಾವು ಕಲ್ಪಿಸಿಕೊಳ್ಳುವ ದೇವರು ನಾವು ಕಂಡ ಸುಂದರ ಸ್ತ್ರೀ–ಪುರುಷರ ರೂಪ. ಆಕಾರಗಳಲ್ಲೇ ಎರಕ ಹೊಯ್ದು ಕಾಣುತ್ತದೆಯೇ ಹೊರತು ಬೇರೆ ಅಲ್ಲ.'

ದೇವರು ಇದ್ದಾನೆ ಎಂದು ನಂಬಿದವರ ಮನದಲ್ಲಿ ದೇವರಿದ್ದಾನೆ. ಅವನು ಅನಾದಿ, ಅನಂತ, ಸರ್ವವ್ಯಾಪಕ, ನಿರಾಕಾರ, ನಿರ್ವಿಕಾರ, ಸರ್ವಜ್ಞ, ಸಚ್ಚಿದಾನಂದ.................. ದೇವರು ಒಬ್ಬನೇ. ಅವನೇ ಶಿವ, ಅವನೇ ವಿಷ್ಣು, ಅವನೇ ಅಲ್ಲಾಹ, ಅವನೇ ಏಸು.......... ನಿಜಗುಣ ಶಿವಯೋಗಿಗಳು ಹೇಳಿದ ಪ್ರಕಾರ–'ಅವರವರ ಭಕುತಿಗೆ, ಅವರವರ ಭಾವಕ್ಕೆ ಅವರವರ ತೆರನಾಗಿ ಇರುತಿಹನು' ದೇವರನ್ನು ಕಾಣಲು ಅಚಲವಾದ ನಿಷ್ಠೆ, ಆತ್ಮಶುದ್ಧಿ, ಶ್ರದ್ಧೆ ಬೇಕು. ॐ



# ಮಾತು ಪರಿಣಾಮ...

**ನಾವು ಆಡುವ ಮಾತುಗಳನ್ನು ಇತರರಿಗೆ ನಾಟದಂತೆ, ಅವರ ಭಾವನೆಗಳಿಗೆ ಧಕ್ಕೆಯಾಗದಂತೆ ಆಡಬೇಕು. ಅಂತಹ ಮಾತುಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು.**

ಅದೇ ತಾನೇ ಮಹಾಭಾರತ ಯುದ್ಧ ಮುಗಿದಿತ್ತು. 18 ದಿನಗಳ ಯುದ್ಧ ದ್ರೌಪದಿಯನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ. 80ನೇ ವಯಸ್ಸಿನವರೆಗೂ ಕೊಂಡೊಯ್ದಿತು. ಊರಲ್ಲಿ ಎಲ್ಲಿ ನೋಡಿದರಲ್ಲಿ ವಿಧವೆಯರೇ ಕಾಣಿಸುತ್ತಿದ್ದರು. ಕೈ ಕಾಲು ಮುರಿದುಕೊಂಡು ಅಂಗವೈಕಲ್ಯಗೊಂಡ ಪುರುಷರು, ಅನಾಥ ಮಕ್ಕಳು ಓಡಾಡುತ್ತಿದ್ದರು. ನಂದನವನದಂತಿದ್ದ ಹಸ್ತಿನಾಪುರ ಸ್ಮಶಾನ ಮೌನದಲ್ಲಿತ್ತು.

ರಾಣಿ ದ್ರೌಪದಿ ಶೂನ್ಯಮನಸ್ಕಳಾಗಿ ತದೇಕಚಿತ್ತದಿಂದ ಗೋಡೆಯನ್ನು ನೋಡುತ್ತಾ ಕುಳಿತಿದ್ದಳು. ಆಗ ಶ್ರೀಕೃಷ್ಣ ಪರಮಾತ್ಮ ಅಲ್ಲಿಗೆ ಬಂದ. ದ್ರೌಪದಿ ಓಡಿ ಹೋಗಿ ಕೃಷ್ಣನನ್ನು ತಬ್ಬಿಕೊಂಡು ಅಳತೊಡಗಿದಳು. ಕೃಷ್ಣ ದ್ರೌಪದಿಯ ತಲೆಯನ್ನು ನೇವರಿಸಿ, ಅವಳನ್ನು ಸಮೀಪದ ಪಲ್ಲಂಗದ ಮೇಲೆ ಕೂರಿಸಿದ.

**ದ್ರೌಪದಿ–** ಕೃಷ್ಣ... ಏನಿದೆಲ್ಲ? ಹೀಗೆಲ್ಲ ಆಗುತ್ತದೆ ಎಂದು ನಾನು ಅಂದುಕೊಂಡೇ ಇರಲಿಲ್ಲ.

**ಕೃಷ್ಣ–** ಕರ್ತವ್ಯ ಮತ್ತು ನಿಯತ್ತು ಬಹು ಕ್ರೂರಿಗಳು ಪಾಂಚಾಲಿ. ಅವು ನಾವು ಯೋಚಿಸಿದಂತೆ ಇರುವುದಿಲ್ಲ. ನಮ್ಮ ಕರ್ಮಗಳನ್ನು ಪರಿಣಾಮಗಳಲ್ಲಿ ಬದಲಿಸಿಬಿಡುತ್ತವೆ.....ನೀನು ಸೇಡು ತೀರಿಸಿಕೊಳ್ಳಬೇಕು ಅಂದುಕೊಂಡಿದ್ದೆ. ನಿನ್ನ ಸೇಡು ತೀರಿತು. ದುಶ್ಯಾಸನ ದುರ್ಯೋಧನರಷ್ಟೇ ಅಲ್ಲ, ಇಡೀ ಕೌರವ ವಂಶವೇ ನಿರ್ವಂಶವಾಯ್ತು. ಇದು ನೀನು ಸಂತೋಷ ಪಡುವ ವಿಚಾರ. ಯಾಕೆ ..... ನಿನಗೆ ಆನಂದವಾಗುತ್ತಿಲ್ಲವೇ?

**ದ್ರೌಪದಿ–** ಕೃಷ್ಣಾ.... ನೀನು ನನ್ನ ಕಣ್ಣೀರನ್ನು ಒರೆಸಲು ಬಂದಿರುವೆಯಾ ಅಥವಾ ನನ್ನ ಗಾಯಗಳ ಮೇಲೆ ಉಪ್ಪು ಸುರಿಯಲು ಬಂದಿರುವೆಯಾ?

**ಕೃಷ್ಣ–** ಎರಡೂ ಅಲ್ಲ ದ್ರೌಪದಿ. ನಾನು ವಾಸ್ತವವನ್ನು ಅರ್ಥೈಸಲು ಬಂದಿದ್ದೇನೆ. ನಮ್ಮ ಕರ್ಮದ ಫಲಗಳ ಪರಿಣಾಮಗಳು ನಮ್ಮ ಕಣ್ಣಿಗೆ ಕಾಣುವುದಿಲ್ಲ. ಅವು ಹತ್ತಿರವಾದಾಗ ನಮ್ಮ ಕೈಯಲ್ಲಿ ಏನೂ ಇರುವುದಿಲ್ಲ.

**ದ್ರೌಪದಿ–** ಅಂದರೆ ......ಇದಕ್ಕೆಲ್ಲ ನಾನೇ ಕಾರಣವೇ ಕೃಷ್ಣ?

**ಕೃಷ್ಣ–** ಇಲ್ಲ ದ್ರೌಪದಿ... ನಿನ್ನನ್ನು ನೀನು ಅಷ್ಟೊಂದು ಮಹತ್ವಪೂರ್ಣಳು ಎಂದು ತಿಳಿದುಕೊಳ್ಳಬೇಡ. ಆದರೆ ನೀನು ನಿನ್ನ ಕರ್ಮಗಳಲ್ಲಿ ಕಿಂಚಿತ್ತಾದರೂ ದೂರದೃಷ್ಟಿ ಇಟ್ಟಿದ್ದರೆ ಇಂದು ಹೀಗೆ ದುಃಖಿಸಬೇಕಾದ ಈ ಪರಿಸ್ಥಿತಿ ಬರುತ್ತಿರಲಿಲ್ಲ.

**ದ್ರೌಪದಿ–** ಅಂದರೇ......?

**ಕೃಷ್ಣ:–** ಅಂದು ಸ್ವಯಂವರದಲ್ಲಿ ಕರ್ಣನಿಗೆ ನೀನು ಅವಮಾನಿಸದೆ ಇದ್ದಿದ್ದರೆ, ಭಾಗವಹಿಸಲು ಅವಕಾಶ ಕೊಟ್ಟಿದ್ದರೆ ಅದರ ಪರಿಣಾಮ ಬೇರೆಯೇ ಆಗಿರುತ್ತಿತ್ತು. ನಂತರ ಕುಂತಿಮಾತೆ ನಿನಗೆ ಐವರೂ ಪಾಂಡವರನ್ನು ವಿವಾಹವಾಗಲು ಆಹ್ವಾನಿಸಿದಾಗ ನೀನು ತಿರಸ್ಕರಿಸಿದ್ದರೆ ಅದರ ಪರಿಣಾಮವೂ ಇಂದು ಬೇರೆಯೇ ಇರುತ್ತಿತ್ತು. ನಂತರ ನಿನ್ನ ಮಹಲಿನಲ್ಲಿ ದುರ್ಯೋಧನನಿಗೆ ಅವಮಾನ ಮಾಡಿರದೇ ಇದ್ದಿದ್ದರೆ, ನಿನ್ನ ವಸ್ತ್ರಾಪಹರಣವೇ ಆಗುತ್ತಿರಲಿಲ್ಲ. ಆಗಲೂ ಪರಿಸ್ಥಿತಿ ಬೇರೆಯೇ ಆಗಿರುತ್ತಿತ್ತು.

ನಮ್ಮ ಬಾಯಿಂದ ಬರುವ ಪ್ರತಿ ಮಾತಿನಶಬ್ದಗಳು ಸಹ ನಮ್ಮ ಕರ್ಮಗಳಾಗಿರುತ್ತವೆ ದ್ರೌಪದಿ. ನಾವು ಮಾತುಗಳನ್ನು ಆಡುವ ಮೊದಲು ಅವುಗಳನ್ನು ಅಳತೆ ಮಾಡಬೇಕಾಗುತ್ತದೆ. ಇಲ್ಲವಾದರೆ ಅದರ ದುಷ್ಪರಿಣಾಮವನ್ನು ನಾವು ಮಾತ್ರ ಅಲ್ಲ... ನಮ್ಮ ಸುತ್ತಮುತ್ತಲಿನ ವಾತಾವರಣವೂ ಅನುಭವಿಸಬೇಕಾಗುತ್ತದೆ.

ಎಲ್ಲ ಜೀವರಾಶಿಗಳಲ್ಲಿ ಮನುಷ್ಯನೆಂಬ ಏಕಮಾತ್ರ ಜೀವಿಯ ವಿಷ ಅವನ ಹಲ್ಲಿನಲ್ಲಿರುವುದಿಲ್ಲ; ಬದಲಾಗಿ ಆಡುವ ಮಾತುಗಳ ಶಬ್ದಗಳಲ್ಲಿ ಇರುತ್ತದೆ. ಅದಕ್ಕಾಗಿಯೇ ನಾವು ಆಡುವ ಶಬ್ದಗಳನ್ನು ಇತರರಿಗೆ ನಾಟದಂತೆ, ಅವರ ಭಾವನೆಗಳಿಗೆ ಧಕ್ಕೆಯಾಗದಂತೆ ಆಡಬೇಕು. ಅಂತಹ ಶಬ್ದಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಜೀವನ ಸಾರ್ಥಕತೆ ಪಡೆಯುತ್ತದೆ.

(ವಾಟ್ಸಪ್‌ನಿಂದ)

**ಅತಿಯಾದ ಚಾಪಲ್ಯವು ವ್ಯಕ್ತಿಯನ್ನು ಆರ್ತನನ್ನಾಗಿಸುತ್ತದೆ. ಸ್ಥಿರ ಪ್ರಜ್ಞೆಯುಳ್ಳ ಜ್ಞಾನಿಯು ಕರ್ಮಿಯ ಮೇಲೆ ಹಿಡಿತ ಸಾಧಿಸುವನು. ಅಜ್ಞಾನ ನಿದ್ರೆಯಿಂದ ಚೇತರಿಸಿಕೊಂಡಿರುವವನೇ ಜ್ಞಾನಿಯಾಗುವನು.**



# ಜ್ಞಾನ ಸ್ವಯಂ ಅನ್ವೇಷಣೆ

❖ ಶ್ರೀ ಧರ್ಮಪಾಲನಾಥ ಸ್ವಾಮೀಜಿ

ಜಗತ್ತು ವಿಷಯ ಸುಖಗಳ ಆಗರ. ಸುಖಕ್ಕಾಗಿ ನಮ್ಮ ಆತುರ, ಕಾತುರ, ಶಬ್ದ, ರೂಪ, ರಸ, ಗಂಧ, ಸ್ಪರ್ಶಾದಿ ವಿಷಯ ಸುಖಗಳು ವ್ಯಕ್ತಿಯನ್ನು ತನ್ನೆಡೆಗೆ ಆಕರ್ಷಿಸುವುದು ಮಾತ್ರವಲ್ಲ ಸುಖದ ಅನುಭೂತಿಗಾಗಿ ಸದಾ ಅನುರಕ್ತಿಯುಳ್ಳವನನ್ನಾಗಿಸುತ್ತವೆ. ಒಂದಲ್ಲ ಒಂದು ಸುಳಿಯ ಸಂಕಟದಲ್ಲಿ ಬಂಧಿಯಾಗಿಸುತ್ತವೆ. ಸಕಲ ಇಂದ್ರಿಯಗಳು ದಾಸ್ಯದ ಅನುರಕ್ತಿಯನ್ನು ಉಂಟುಮಾಡುತ್ತವೆ. ಅತಿಯಾದ ಚಾಪಲ್ಯವು ವ್ಯಕ್ತಿಯನ್ನು ಆರ್ತನನ್ನಾಗಿಸುತ್ತದೆ. ಆತ್ಮಾನುಭಾವ ಹೊಂದಲು ಎಂದಿಗೂ ಬಿಡುವುದಿಲ್ಲ.

ನಾನು ಇಂದ್ರಿಯಗಳ ಒಡೆಯ ಎಂಬ ಅರಿವಿನ ಜ್ಞಾನವಿರಬೇಕು. ನಾನು ಹೇಳಿದ ಹಾಗೆ ಅವುಗಳು ಕೇಳಬೇಕು ಎಂಬ ದೃಢ ನಿಶ್ಚಯ ಯಾರಲ್ಲಿ ಮೂಡುತ್ತದೆಯೋ, ಅವರು ಸರ್ವಬಂಧ, ಸರ್ವದುಃಖ ನಿವೃತ್ತಿಯಾಗಿ ಶಾಶ್ವತ ಆನಂದ ಪ್ರಾಪ್ತಿ ಹೊಂದುತ್ತಾರೆ. ಆದರೆ ಅದು ಸಾಧ್ಯವೇ? ಮನಸ್ಸಿದ್ದರೆ ಮಾರ್ಗ. ಅಸಾಧ್ಯವೆಂಬುದು ಯಾವುದೂ ಇಲ್ಲ. ಅಪತೃಷ್ಣೆಯುಳ್ಳವನಲ್ಲಿ ವಿಷಯ ಲಾಂಪಟ್ಯ, ವಂಚನೆ, ಸ್ವಾರ್ಥ, ಚೌರ್ಯ ಹಿಂಸೆ, ಚಪಲತೆ, ಚಾಂಚಲ್ಯತೆ, ಅಟ್ಟಹಾಸ ಉಪಟಳ ಗುಣಗಳಿರುತ್ತವೆ. ತಾನು ಬಯಸಿದ್ದನ್ನು ಪಡೆಯಲು ಯಾವ ಅಕಾರ್ಯಕ್ಕೂ ಇಳಿಯಲು ಸಿದ್ಧನಿರುವನೋ, ಅವನಿಂದ ಸಾಧ್ಯವೇ ಇಲ್ಲ. ಹುಟ್ಟಿದ ವ್ಯಕ್ತಿ ಮರಣದವರೆಗೂ ನಗು, ಅಳು, ಆಸೆ, ಆಕಾಂಕ್ಷೆ, ಬಯಕೆ, ನಿರಾಸೆಗಳಲ್ಲಿ ಅಸಹಾಯಕನಾಗಿ ರಾಗ-ದ್ವೇಷ, ಸೋಲು-ಗೆಲುವು ಈ ದ್ವಂದ್ವಗಳ ಹೆದ್ದೆರೆಗಳಲ್ಲಿ ತೇಲುತ್ತಿರುತ್ತಾನೆ. ಬೇಕು/ಬೇಡವೆಂಬುದನ್ನು ಮನಸ್ಸು, ಬುದ್ಧಿ ಚಿಂತಿಸುತ್ತದೆ. ನಾಲಿಗೆ ನುಡಿಯುತ್ತದೆ ನುಡಿದಂತೆ ನಡೆಸುತ್ತದೆ ಕರ್ಮ. ಕರ್ಮಕ್ಕೆ ಮೂಲವಾದ ಮನಸ್ಸನ್ನು ಕರ್ಮಿಯೆಂದು ತಿಳಿಯಬಹುದು.

ಸ್ಥಿರ ಪ್ರಜ್ಞೆಯುಳ್ಳ ಜ್ಞಾನಿಯು ಕರ್ಮಿಯ ಮೇಲೆ ಹಿಡಿತ ಸಾಧಿಸುವನು. ಕರ್ಮಿಯು ಬಾಹ್ಯೇಂದ್ರಿಯ ಹಾಗೂ ಅಂತರಿಂದ್ರಿಯಗಳ ಒಡೆಯ. ಅವನನ್ನು ಶಮ ದಮಗಳಿಂದ ನಿಗ್ರಹಿಸಬೇಕು. ಸಂಯಮದಿಂದ ಮನಸ್ಸಿನ ಚಾಂಚಲ್ಯತೆ ತಡೆಗಟ್ಟಬೇಕು. ಸಂಯಮಿ ಅಂದರೆ ಸಂಯಮವುಳ್ಳವನಾಗಿ ಇಂದ್ರಿಯಗಳನ್ನು ಜಯಿಸಿಕೊಂಡಿರುವ ಯೋಗಿ ಎಂಬರ್ಥ. ಅಜ್ಞಾನ ನಿದ್ರೆಯಿಂದ ಚೇತರಿಸಿಕೊಂಡಿರುವವನೇ ಜ್ಞಾನಿಯಾಗುವನು. ಸದಾ ಅಜ್ಞಾನ ನಿದ್ರೆಯಲ್ಲೇ ಮುಳುಗಿ ಸುಖಕ್ಕಾಗಿ ಹಪಹಪಿಸುತ್ತಿರುವವನಿಗೆ ಇದು ಕ್ಲಿಷ್ಟ ಮಾರ್ಗ. ಯಾಕೆಂದರೆ ಜೇಡರ ಬಲೆಯಲ್ಲಿ ಸಿಕ್ಕ ನೊಣದಂತೆ ಮಾಯಾ ಪ್ರಪಂಚದಲ್ಲಿ ಸಿಲುಕಿ ಅಸಹಾಯಕನಾಗಿ ಬಿಡುತ್ತಾನೆ. ಸತ್ಯ ಸಾಕ್ಷಾತ್ಕಾರದ ಕಡೆ ಮನಸ್ಸು ದುರ್ಬಲವಾಗಿರಿಸುತ್ತದೆ.

ವಿವೇಕಿಯಾದ ಸಂಯಮಿಯು ಸತ್ಯಾಸತ್ಯವನ್ನು ಅರುಹಬಲ್ಲ. ಅಸತ್ಯವನ್ನು ಪರಿತ್ಯಜಿಸಿ ಸತ್ಯವನ್ನು ಅರುಹಬಲ್ಲ ಪ್ರತಿಯೊಬ್ಬರ ಅಂತರ್ಯದಲ್ಲಿ ಅಪಾರ ಅದ್ಭುತ ಶಕ್ತಿ ಅಡಗಿರುತ್ತದೆ. ನಮ್ಮ ದೌರ್ಬಲ್ಯಗಳಿಂದಾಗಿ ಕಾಣಲು ಸಾಧ್ಯವಾಗುತ್ತಿಲ್ಲ. ಪರಮ ಶ್ರೇಷ್ಠವಾದ ಶಕ್ತಿಯನ್ನು ನಾವು ನಂಬಲೇಬೇಕು. ತನ್ಮೂಲಕ ನಮ್ಮ ಆತ್ಮ ಶೋಧನೆಯೊಂದಿಗೆ ಆತ್ಮನ ಪರಮ ವೈಭವವನ್ನು ಮನಗಂಡು ನಿತ್ಯ ಸ್ವಯಂ ಅನ್ವೇಷಣೆಯೊಂದಿಗೆ ದೇವನೇ ತಾನಾಗುವ ಸ್ಥಿತಿ ಹೊಂದುವುದೇ ಪರಮ ಉದ್ದೇಶವಾಗಬೇಕು. ॐ

# ತಂದೆ ಯಾಕೆ ಹೀಗೆ...?

ಮಗ ಶಾಲೆಗೆ ಹೋಗುತಿದ್ದ. ಅಧ್ಯಾಪಕರು ಕೊಟ್ಟ ಹೋಂ ವರ್ಕ್ ಮಾಡಿದ್ದೀಯಾ ಎಂದು ತಂದೆ ಕೇಳಿದರು, ಆಯ್ತು ಎಂದು ಮಗ ಉತ್ತರಿಸಿದ. ಎಲ್ಲಾ ಕಾರ್ಯದಲ್ಲೂ ತಂದೆ ಮಗನನ್ನು ಪ್ರಶ್ನಿಸುತ್ತಿದ್ದರು.

ಗೇಟ್ ತೆರೆದು ಬಿಟ್ಟು ಹೋದರೆ ಗೇಟ್ ಹಾಕಿ ಹೋಗೆಂದೂ, ಪೈಪಲ್ಲಿ ನೀರಿನ ಹನಿಗಳು ಬೀಳುತಿದ್ದರೆ ಪೈಪ್ ಸರಿಯಾಗಿ ಬಂದ್ ಮಾಡೆಂದೂ, ಫ್ಯಾನ್ ಸ್ವಿಚ್ ಆನ್ ಮಾಡಿ ಆಫ್ ಮಾಡದೆ ಹೋದರೆ ಸುಮ್ಮನೆ ಯಾಕೆ ಫ್ಯಾನ್ ತಿರುಗಿಸುತ್ತೀಯಾ ಎಂದೂ, ನೆನೆದ ಬಟ್ಟೆಯನ್ನು ಬೆಡ್ ಶೀಟ್ ಮೇಲೆ ಇಟ್ಟರೆ ನಿನ್ನ ಬಟ್ಟೆಯಿಂದ ಬೆಡ್ ಅನ್ನೂ ನೆನೆಸುವೆಯಾ ಎಂದೆಲ್ಲ ಹೇಳಿ ಗದರುತ್ತಿದ್ದರು.

ತಂದೆಯ ಮಾತನ್ನು ಕೇಳಿ ಕೇಳಿ ಬೆಳೆದು ನಿಂತ ಮಗನಿಗೆ ಕಿರಿ ಕಿರಿಯಾಗತೊಡಗಿತು. ಎಲ್ಲಾ ವಿಷಯದಲ್ಲೂ ತನಗೆ ಕಿರಿಕಿರಿ ಮಾಡುವ ತಂದೆಯಿಂದ ದೂರವಾಗಬೇಕೆಂದು ಚಿಂತಿಸಿದ. ಆದರೆ ಯಾವುದೇ ಕೆಲಸವಿಲ್ಲದೆ ತಾನು ತಂದೆಯಿಂದ ದೂರವಾದರೆ ಗತಿಯೇನು ಎಂದೂ ಯೋಚಿಸಿದ. ಏಕೆಂದರೆ ತಂದೆ ಎಷ್ಟೇ  ಗದರಿದರೂ ಏನು ಬೇಕೆಂದು ಕೇಳಿದರೂ ಯಾವುದನ್ನೂ ನಿರಾಕರಿಸದೇ ಬೇಕಾದುದನ್ನೆಲ್ಲ ತಂದು ಕೊಡುತ್ತಿದ್ದರು.

ಅದೊಂದು ದಿನ ಇಂಟರ್‌ವ್ಯೂಗೆ ಕರೆ ಬಂದಿತು. ಒಳ್ಳೆಯ ಸ್ಯಾಲರಿ ಬರುವ ಕೆಲಸ ಅದು. ಕೆಲಸ ಸಿಕ್ಕಿದರೆ ಜೀವಿಸಲೇನು ಚಿಂತೆಯಿಲ್ಲ, ಆಗಲೇ ತೀರ್ಮಾನಿಸಿದ ಮಗ ಕೆಲಸಕ್ಕೆ ಸೇರಿ ಒಳ್ಳೆಯ ಸಂಪತ್ತು ಗಳಿಸಿ ಶತ್ರುವಾದ ತಂದೆಯಿಂದ ದೂರವಾಗಬೇಕು, ಇನ್ನು ಮುಂದೆ ತಂದೆ ತನ್ನ ತಂಟೆಗೆ ಬರಬಾರದು ಎಂದು ಚಿಂತಿಸಿದ.

ಇಂಟರ್‌ವ್ಯೂಗೆ ಹೋಗುವಾಗಲೂ ನಿನ್ನ ಮಕ್ಕಳಾಟ ಬಿಟ್ಟು ಸಂದರ್ಶನದಲ್ಲಿ ಸರಿಯಾಗಿ ಉತ್ತರಿಸು ಎಂದು ತಂದೆ ಹೇಳಿದರು. ಅವರ ಮಾತಿಗೆ ಬೆಲೆ ಕೊಡದೆ, ಅವರಿಂದ ದೂರವಾಗಿ ಯಾವ ಕಿರಿಕಿರಿಯೂ ಇಲ್ಲದೆ ಜೀವಿಸಬಹುದೆಂದು ನೆನೆದು ಮುಂದೆ ನಡೆದ.

ಇಂಟರ್‌ವ್ಯೂ ಹಾಲ್‌ಗೆ ಹೋಗುವಾಗ ಹೊರಗಿನ ಗೇಟ್ ತೆರೆದಿತ್ತು. ಗೇಟ್ ಹಾಕಿ ಹೋಗೆಂದು ಹೇಳುವ ತಂದೆಯ ಮಾತು ನೆನಪಾಗಿ ಗೇಟ್ ಹಾಕಿ ಒಳ ನಡೆದ. ಹಾಲ್‌ನಲ್ಲಿ ಎಲ್ಲಾ ಕಡೆಯೂ ಫ್ಯಾನ್ ತಿರುಗುತ್ತಿದ್ದವು, ಅಲ್ಲೂ ತಂದೆಯ ಮಾತು ನೆನಪಾಗಿ ಅಗತ್ಯವಿಲ್ಲದೆ ತಿರುಗುವ ಫ್ಯಾನ್ ಆಫ್ ಮಾಡಿದ. ಸಿಂಕ್‌ನ ನಲ್ಲಿಯಿಂದ ನೀರಿನ ಹನಿಗಳು ವ್ಯರ್ಥವಾಗಿ ಹರಿದು ಹೋಗುತ್ತಿತ್ತು. ಅದನ್ನೂ ನಿಲ್ಲಿಸಿ ನಿಗದಿ ಪಡಿಸಿದ ಸ್ಥಳಕ್ಕೆ ಹೋಗಿ ತನ್ನ ಸರದಿಗಾಗಿ ಕಾಯತೊಡಗಿದ.

ಅರ್ಧ ಗಂಟೆಯ ಬಳಿಕ ಮೆನೇಜರ್ ಬಂದು ಹೇಳಿದರು–"ನಾಳೆಯಿಂದ ನೀವು ಕೆಲಸಕ್ಕೆ ಬನ್ನಿ, ನಾವು ನಿಮ್ಮನ್ನು ಆಯ್ಕೆ ಮಾಡಿದ್ದೇವೆ. ಈತನಿಗೆ ಆಶ್ಚರ್ಯವಾಯ್ತು. ಇಂಟರ್‌ವ್ಯೂನೇ ನಡೆದಿಲ್ಲ.  ಅದು ಹೇಗೆ ಆಯ್ಕೆ ಮಾಡಿದಿರಿ? ಎಂದ.

ನೀವು ಗೇಟ್ ಹಾಕಿದ್ದನ್ನೂ, ಫ್ಯಾನ್ ಆಫ್ ಮಾಡಿದ್ದನ್ನೂ ಹಾಗೂ ನಲ್ಲಿಯಲ್ಲಿ ಹರಿಯುತ್ತಿದ್ದ ನೀರು ನಿಲ್ಲಿಸಿದ್ದನ್ನೂ ನಾವು ಸಿಸಿ ಟಿವಿಯಲ್ಲಿ ನೋಡಿದ್ದೇವೆ. ನೀವಲ್ಲದೆ ಬೇರೆ ಯಾರೂ ಅದನ್ನು ಚಿಂತಿಸಲಿಲ್ಲ, ನಿಮ್ಮಂತವರು ನಮಗೆ ಬೇಕು ಎಂದರು.

ಆ ಒಂದು ಕ್ಷಣ ಮಗ ತನ್ನ ತಂದೆಯನ್ನು ನೆನೆದು ಕಣ್ಣೀರಾದ. ಮನೆಗೆ ಬಂದವನೆ ತಂದೆಯನ್ನು ಬಿಗಿಯಾಗಿ ಅಪ್ಪಿ ಬಿಕ್ಕಿ ಬಿಕ್ಕಿ ಅಳುತ್ತಾ ಹೇಳಿದ... ಕ್ಷಮಿಸಿ ಅಪ್ಪಾ, ನೀವು ಗದರಿಸಿ ಕಲಿಸಿದ್ದು ನನಗೆ ಈ ಕೆಲಸ ಸಿಗಲು ಕಾರಣವಾಯಿತು. ನೀವು ನನಗೆ ಸ್ಫೂರ್ತಿ. ನಿಮ್ಮಿಂದ ನಾನು ಎಂದಿಗೂ ದೂರವಾಗಲಾರೆ ಎಂದ.

**ನೀತಿ:** ತಂದೆ ತಾಯಿ ಮಕ್ಕಳಿಗೆ ಹೇಳುವ ಯಾವೊಂದು ಬುದ್ದಿಯ ಮಾತು ದ್ವೇಷದಿಂದ ಹೇಳುವುದಲ್ಲ. ಅವರ ಪ್ರತಿಯೊಂದು ಮಾತೂ ಮಕ್ಕಳ ಬಾಳಿಗೆ ದಾರಿದೀಪ.

(ವಾಟ್ಸಪ್‌ನಿಂದ)







## ಒಳ್ಳೆಯ ಮಾತು

**ಅಹಂ ಎನ್ನುವುದು ಕಣ್ಣಿನಲ್ಲಿ ಬಿದ್ದ ಧೂಳಿನ ಹಾಗೆ. ಅದನ್ನು ಹೊರತೆಗೆಯದ ಹೊರತು ಏನನ್ನೂ ಸ್ಪಷ್ಟವಾಗಿ ನೋಡಲು ಸಾಧ್ಯವಾಗದು.**

# ಅಸೂಯೆ ಎಂಬ ಬೆಂಕಿ





'ಅಸೂಯೆ' ಎಂಬುದು ಅರಿಷಡ್ವರ್ಗದಲ್ಲಿ ಒಂದು. ಅಂದರೆ ನಮಗಿಂತ ಅಧಿಕ ಪಡೆದವರನ್ನು ಕಂಡು ಕರುಬುವುದು. ಇದಕ್ಕೆ ಹೊಟ್ಟೆಕಿಚ್ಚು ಮತ್ತು ಹೊಟ್ಟೆಯುರಿ ಎಂಬ ಪರ್ಯಾಯ ಅರ್ಥಗಳೂ ಉಂಟು. ಹೊಟ್ಟೆಯ ಹಸಿವನ್ನು ನೀಗಿಸಲು ಆಹಾರವಿದೆ. ಆದರೆ ಹೊಟ್ಟೆಯುರಿಯನ್ನು ಆರಿಸಲು ನೀರು ಎಲ್ಲಿಹುದು? ನರಕದಂಥ ಹಿಂಸೆಯನ್ನು ನೀಡುವ ಈ ಅಸೂಯೆ ಎನ್ನುವ ಉರಿ ಹೃದಯದಲ್ಲಿ ನೆಲೆಸಿರುವಾಗ, ನಿದ್ದೆ ಬರಲು ಹೇಗೆ ಸಾಧ್ಯ. ಮತ್ಸರ ಪಡುವವನ ಸಂಕಟವನ್ನು ಯಾರಾದರೂ ನಿವಾರಿಸಲು ಸಾಧ್ಯವೇ? ಅಂತಹವನನ್ನು ಆ ದೇವರೇ ಕಾಪಾಡಬೇಕು.

ಯಾರಿಗೆ ಏನು, ಎಷ್ಟು ಮತ್ತು ಯಾವ ಸಮಯಕ್ಕೆ ಸಿಗಬೇಕೆನ್ನುವುದು ವಿಧಿ ಲಿಖಿತವೆನ್ನುತ್ತದೆ ನಮ್ಮ ಸನಾತನ ಧರ್ಮ. ಪ್ರತಿಯೊಬ್ಬರ ಅನುಭವವೂ ಅದನ್ನು ಪುಷ್ಟೀಕರಿಸುತ್ತದೆ. ಆಸೆಪಟ್ಟು ಸಿಕ್ಕಿದ್ದರಲ್ಲಿ ತೃಪ್ತಿಯಿಂದ ಜೀವನ ಮಾಡಿದವರ ಮತ್ತು ಅತಿಯಾಸೆ ಪಟ್ಟು ಅಸೂಯೆಯಿಂದ ಮತ್ತು ಅಹಂಕಾರದಿಂದ ತಮ್ಮ ಮತ್ತು ತಮ್ಮನ್ನು ನಂಬಿದವರ ಜೀವನವನ್ನು ನಾಶಮಾಡಿದವರ ದೃಷ್ಟಾಂತಗಳು ನಮಗೆ ಹೇರಳವಾಗಿ ಸಿಗುತ್ತವೆ. ಮಹಾಭಾರತದ ದುರ್ಯೋಧನನೇ ಇದಕ್ಕೆ ಸೂಕ್ತ ಉದಾಹರಣೆ. ಹಾಗೆ ನಾವು ಆಸೆಪಟ್ಟು ನಮಗೆ ಸಿಗದಿದ್ದನ್ನು ನೆನೆದು ಮತ್ತು ಅದು ಬೇರೆಯವರಿಗೆ ಸಿಕ್ಕಿದರೆ ಕಂಡು ಅಸೂಯೆ ಪಡುವುದು ಎಷ್ಟು ಸರಿ? ಆದರೆ ಮಾನವನ ಸ್ವಭಾವವು ಹೀಗೆ ಅಸೂಯೆ ಪಡುತ್ತಲೇ ಇರುತ್ತದೆ. ಈ ಅಸೂಯೆ ಎನ್ನುವ ಬೆಂಕಿ, ಅಸೂಯೆ ಪಡುವವನನ್ನು ಒಳಗೊಳಗೇ ಸುಡುತ್ತಲೇ ಇರುತ್ತದೆ. ಈ ಬೆಂಕಿಯನ್ನು ಯಾರಿಂದಲೂ ಆರಿಸಲು ಸಾಧ್ಯವಿಲ್ಲ.

ಅಸೂಯೆ ಪಟ್ಟಾಕ್ಷಣ ನಮಗೆ ನಾವು ಬಯಸಿದ್ದು ಸಿಗುವ ಹಾಗಿದ್ದರೆ, ಅದು ಬೇರೆ ವಿಷಯ. ಹಾಗೆ ಸಿಗುವುದಿಲ್ಲವಲ್ಲ. ವಸ್ತುವಂತೂ ಸಿಗುವುದಿಲ್ಲ, ಉಳಿಯುವುದೇನು, ಕೇವಲ ನಮ್ಮನ್ನು ಸುಡುವ ಅಸೂಯೆಯ ಬೆಂಕಿ. ಇದು ಮನಸ್ಸನ್ನು ಸುಡುತ್ತದೆ ಮತ್ತು ಆ ಸುಡುವ ಮನಸ್ಸು ದೈಹಿಕ ಆರೋಗ್ಯವನ್ನೂ ಹಾಳುಗೆಡುವುತ್ತದೆ. ಚಿಂತೆ ಹತ್ತಿ ನಿದ್ದೆಯೂ ಬರುವುದಿಲ್ಲ. ಈ ಚಿಂತೆಗೆ ಕಾರಣ, ಆಸೆ ಪಡುವ ನಾವು, ನಮ್ಮ ಯೋಗ್ಯತೆ ಮತ್ತು ಸಾಮರ್ಥ್ಯದ ಮಿತಿ ಎರಡನ್ನೂ ಅರಿತಿರುವುದಿಲ್ಲ. ಕೆಲವು ವಿಷಯ, ವಸ್ತು ಮತ್ತು ವ್ಯಕ್ತಿಗಳು ನಮ್ಮ ಕೈಗೆಟುಕುವುದಿಲ್ಲ ಎಂದು ನಾವು ಅರಿತಿದ್ದರೂ, ಮತ್ತೆ ಮತ್ತೆ ಅದನ್ನು ಪಡೆದುಕೊಳ್ಳಲು ಪ್ರಯತ್ನಪಡುವ ನಮ್ಮ ಆಸೆಗೇನೂ ಮಿತಿಯಿರುವುದಿಲ್ಲ. ಆದರೆ ವಿವೇಚನೆಯಿಂದ ಕೂಡಿದ ಆಲೋಚನೆಯಿದ್ದರೆ, ಖಂಡಿತ ನಾವು ನಮ್ಮ ಮನಸ್ಸಿನಲ್ಲಿ ನಡೆಯುವ ಈ ತೀರಲಾರದ ಆಸೆಗಳನ್ನು ಮತ್ತು ಆ ಆಸೆಗಳಿಂದ ಉಂಟಾದ ಅಸೂಯೆಯನ್ನು ಹೋಗಲಾಡಿಸಿಕೊಳ್ಳಬಹುದು. ನಮ್ಮ ಕೊರತೆಗಳನ್ನು ಮತ್ತು ಅನ್ಯರ ಕ್ಷಮತೆಗಳನ್ನು ಒಪ್ಪಿಕೊಂಡು ಬದುಕಲು ನಮಗೆ ನಮ್ಮ 'ಅಹಂಕಾರ' ಅಡ್ಡ ಬರುತ್ತದೆ. ಅಂತಹ ನಮ್ಮನ್ನು ಆ ದೇವರೇ ಕಾಪಾಡಬೇಕು ಅಲ್ಲವೇ? **'ಅನ್ಯೇಷಾಂ ಉದಯಂ ದೃಷ್ಟ್ವಾ ಯೇ ಅಭಿನಂದಂತಿ ಮಾನವಾಃ, ತೇ ವೈ ಭಾಗವತೋತ್ತಮಾಃ'** ಎಂದರೆ, ಪರರ ಅಭಿವೃದ್ಧಿಯನ್ನು ಕಂಡು ಸಂತೋಷಪಡುವವನು, ಪರಮಾತ್ಮನಿಗೆ ಪ್ರಿಯನಾಗುತ್ತಾನೆ ಎಂದು ಅರ್ಥ. **'ಅಸೂಯೆ ಪಡುವವನು ಅಲ್ಲ'** ಎಂದೂ ಅರ್ಥ.

ಹಾಗಾಗಿ ನಮ್ಮ ಮಾನಸಿಕ ಸ್ವಾಸ್ಥ್ಯವನ್ನು ದೃಷ್ಟಿಯಲ್ಲಿರಿಸಿಕೊಂಡು, ಅತಿ ಆಸೆ ಪಡದೆ, ನಮ್ಮ ಮಿತಿಗಳನ್ನು ಅರಿತುಕೊಂಡು, ಪೂರ್ವಕರ್ಮಾನುಸಾರ, ನಮ್ಮ ವಿಧಿಯನುಸಾರ, ನಮ್ಮ ಸಾಮರ್ಥ್ಯಕ್ಕನುಸಾರ ಮತ್ತು ನಮ್ಮ ಪ್ರಯತ್ನಕ್ಕನುಸಾರ ನಮಗೆ ಲಭ್ಯವಾದದ್ದನ್ನು ತೃಪ್ತಿಯಿಂದ ಅನುಭವಿಸಿದರೆ ಮನಸ್ಸಿಗೆ ನಿರಾಳ, ನೆಮ್ಮದಿ. ನಮಗೆ ಆಯ್ಕೆ ಮಾಡಿಕೊಳ್ಳಲು ಸಂಪೂರ್ಣ ಸ್ವಾತಂತ್ರ್ಯ ಮತ್ತು ಅಧಿಕಾರವುಂಟು. ನಾವೇನು ಆಯ್ದು ಕೊಂಡರೆ ಅದರನುಸಾರ ನಮಗೆ ಕಷ್ಟವೋ ಅಥವಾ ಸುಖವೋ ಸಿಗುತ್ತದೆ. ಅಸೂಯೆ ಎಂಬ ಬೆಂಕಿ ನಂದಿಹೋಗಿ ನೆಮ್ಮದಿ, ಶಾಂತಿ ಮನದಲ್ಲಿ ಮನೆಮಾಡುತ್ತದೆ.

ಈ ಜಗತ್ತಿನಲ್ಲಿ ಹುಟ್ಟಿದ ಪ್ರತೀ ಪ್ರಾಣಿಯೂಸುಖವಾಗಿರಬೇಂದುಕೊಳ್ಳುವುದು ಬಹಳ ಸಹಜ. ಆದರೆ ಆ ಸುಖ ಏನು, ಯಾವ ರೀತಿಯ ಬದುಕನ್ನು ಸುಖವಾದ ಬದುಕು ಎನ್ನಬೇಕು ಎನ್ನುವುದು ನಮಗೆ ಗೊತ್ತಿರುವುದಿಲ್ಲ. ಹುಚ್ಚು ಹಿಡಿದವರಂತೆ ಭ್ರಮಾಧೀನರಾಗಿ ಸುಖದ ಬೆನ್ನ ಹತ್ತಿ ಅಂತ್ಯದಲ್ಲಿ ನಿರಾಶರಾಗುವವರೇ ನಾವೆಲ್ಲಾ. ಒಂದು ವಿಶಾಲವಾದ ಹುಲ್ಲ ಬಯಲಲ್ಲಿ, ಒಂದು ಆಕಳ ಕರು ಚಂಗು ಚಂಗೆಂದು ನೆಗೆಯುತ್ತಾ 'ಒಳ್ಳೆಯ ಹುಲ್ಲು ಇಲ್ಲಿದೆ, ಆಲ್ಲಿ ಚೆನ್ನಾಗಿದೆ ಅಥವಾ ಇನ್ನೂ ಎಲ್ಲೋ ಚೆನ್ನಾಗಿರಬಹುದು" ಎಂದು ಯೋಚಿಸಿ, ಎಲ್ಲ ಕಡೆ ಓಡಿ, ಕಡೆಗೆ ಎಲ್ಲಿಯೂ ಮೆಲ್ಲದೆಯೇ ಓಡಿ ಓಡಿ ದಣಿವಂತೆ ಇದೆ ನಮ್ಮ ಪರಿಸ್ಥಿತಿ.

## ಮನೆ ಮದ್ದು





**ನೆಲ್ಲಿಕಾಯಿ ಸೇವಿಸುವುದರಿಂದ ಅಥವಾ ಕಲ್ಲುಸಕ್ಕರೆ ಮತ್ತು ಲವಂಗ ತಿನ್ನುವುದರಿಂದ ನೆಗಡಿ, ಕಫ, ಕೆಮ್ಮು ನಿವಾರಣೆಯಾಗುತ್ತದೆ.**





# ಪರಮಾಣು ಬಾಂಬು

## ಒಂದು ರೋಚಕ ಕಥೆ....

**ಪರಮಾಣು ಬಾಂಬು ದ್ವಿತೀಯ ಜಾಗತಿಕ ಯುದ್ಧದ ಒಂದು ಶಿಶು. ಪರಮಾಣು ಬಾಂಬಿನ ರೋಮಾಂಚಕ ಶೋಧನೆಯ ಹಿಂದಿರುವ ಇತಿಹಾಸ ಅತ್ಯಂತ ಕೌತುಕಮಯ. ಪರಮಾಣು ಬಾಂಬಿನ ರೋಚಕ ಕಥೆಯ ಮುಂದುವರೆದ ಭಾಗ ಓದಿ......**

❖ ಜಿ. ವರದರಾಯ ಪೈ

ಫೆಬ್ರವರಿ ಸಂಚಿಕೆಯಿಂದ ಮುಂದುವರೆದುದು.....

ಕೊನೆಗೂ ಜುಲೈ ತಿಂಗಳಿನ ಒಂದು ರಾತ್ರಿ ಸೀಲರ್ಡ್ ಅವರಿಗೆ ಉಪಾಯ ಹೊಳೆಯಿತು; ಆಲ್ಬರ್ಟ್ ಐನ್‌ಸ್ಟೈನ್ ಅವರು ಅಧ್ಯಕ್ಷ ರೂಸ್‌ವೆಲ್ಟ್ ಅವರಿಗೆ ಪತ್ರ ಬರೆದರೆ, ಆಧ್ಯಕ್ಷರು ಪರಮಾಣು ಬಾಂಬು ಯೋಜನೆಗೆ ಒಪ್ಪಿಗೆ ಕೊಟ್ಟೇ ಕೊಡುವರೆಂಬ ಭರವಸೆ ಅವರಿಗುಂಟಾಯಿತು. ಜಗತ್ತಿನ ಆತ್ಯಂತ ಶ್ರೇಷ್ಠ ವಿಜ್ಞಾನಿ ಜರ್ಮನಿಯಲ್ಲಾದ ಸಂಶೋಧನೆಯ ಬಗೆಗೆ ಕಳವಳ ವ್ಯಕ್ತಪಡಿಸಿ, ಅಮೇರಿಕಾ ಸರಕಾರವು ಪರಮಾಣು ಬಾಂಬು ಯೋಜನೆಗೆ ಕೈಹಾಕಬೇಕೆಂದು ಒತ್ತಾಯಪಡಿಸಿದರೆ, ಅಧ್ಯಕ್ಷರು ಒಪ್ಪದಿರುತ್ತಾರೆಯೇ ಎನ್ನುವುದು ಅವರ ತರ್ಕ. ಹಿಟ್ಲರ್‌ನ ಕ್ರೌರ್ಯವನ್ನು ಸ್ವತಃ ಅನುಭವಿಸಿ ಜರ್ಮನಿಯಿಂದ ವಲಸೆ ಬಂದ ಐನ್‌ಸ್ಟೈನ್ ಅವರು ಅಧ್ಯಕ್ಷರಿಗೆ ಪತ್ರ ಬರೆಯಲು ಖಂಡಿತವಾಗಿಯೂ ಒಪ್ಪುತ್ತಾರೆಂಬ ನಂಬಿಕೆ ಅವರಿಗಿತ್ತು. ಈ ಅದ್ಭುತ ಯೋಚನೆ ಬಂದಾಗ ಅವರಿಗಾದ ಆನಂದ ಅಷ್ಟಿಷ್ಟಲ್ಲ. ಆ ಕೂಡಲೇ ಅವರು ತನ್ನ ಗೆಳೆಯ ಯ್ಯುಜೀನ್ ಪಿ. ವಿಗ್ನರ್ ಅವರೊಡನೆ ಈ ಬಗೆಗೆ ಸಮಾಲೋಚನೆ ನಡೆಸಲು ಪ್ರಿನ್‌ಸ್ಟನ್‌ಗೆ ಧಾವಿಸಿದನು. ವಿಗ್ನರ್ ಕೂಡ ಹಂಗೇರಿಯಿಂದಲೇ ವಲಸೆ ಬಂದವರು. ನಾಜಿ ತತ್ವವನ್ನು ಅವರು ಕೂಡ ದ್ವೇಷಿಸುತ್ತಿದ್ದರು.

ವಿಗ್ನರ್ ಅವರಿಗೆ ಸೀಲರ್ಡ್ ಅವರ ಯೋಜನೆ ಸರಿಯೆನಿಸಿತು. ಅವರು ಐನ್‌ಸ್ಟೈನ್ ಅವರ ನಿಕಟ ಗೆಳೆಯರೂ ಆಗಿದ್ದರು. ಆದುದರಿಂದ ಐನ್‌ಸ್ಟೈನ್ ಅವರನ್ನು ಒಪ್ಪಿಸುವ ಧೈರ್ಯ ಅವರಿಗಿತ್ತು. ಆದರೆ ಆಗ ಐನ್‌ಸ್ಟೈನ್ ಪ್ರಿನ್ಸ್‌ಟನ್ನಿನಲ್ಲಿ ಇರಲಿಲ್ಲ. ವಿಶ್ರಾಂತಿಗಾಗಿ ಅವರು ಲಾಂಗ್ ಐಲೆಂಡಿಗೆ ಹೋಗಿದ್ದರು. ಏನು ಮಾಡುವುದು? ಐನ್‌ಸ್ಟೈನ್ ಬರುವವರೆಗೆ ಕಾಯುವುದೇ? ಅಥವಾ ಲಾಂಗ್ ಐಲೆಂಡಿಗೇ ಧಾವಿಸುವುದೇ? ಸೀಲರ್ಡ್ ಅವರಿಗೆ ಕಾಯುವ ತಾಳ್ಮೆ ಇದ್ದಿರಲಿಲ್ಲ. ಅವರು ಆ ಕೂಡಲೇ ವಿಗ್ನರ್ ಮತ್ತು ಟೆಲ್ಲರ್ ಅವರೊಂದಿಗೆ ಲಾಂಗ್ ಐಲೆಂಡಿಗೆ ಧಾವಿಸಿದರು. ಟೆಲ್ಲರ್ ಕೂಡ ಹಂಗೇರಿಯಿಂದಲೇ ವಲಸೆ ಬಂದ ಭೌತಶಾಸ್ತ್ರಜ್ಞ.

### ಐನ್‌ಸ್ಟೈನ್ ಸಹಿ :

ಸೀಲರ್ಡ್ ಮತ್ತು ವಿಗ್ನರ್ ಅವರು ಎಲ್ಲವನ್ನೂ ಐನ್‌ಸ್ಟೈನ್ ಅವರಿಗೆ ವಿವರಿಸಿದರು. ಸಹಜವಾಗಿಯೇ ನ್ಯೂಕ್ಲಿಯರ್ ವಿದಳನದ ಬಗ್ಗೆ ಕೇಳಿದಾಗ ಐನ್‌ಸ್ಟೈನ್‌ರು ರೋಮಾಂಚನಗೊಂಡರು. 1905ರಲ್ಲಿ ಅವರು ಬಿಡಿಸಿದ ಸೂತ್ರ E=mc2 ಸರಿಯೆಂದು ರುಜುವಾತಾಯಿತಲ್ಲವೆ? ಆದರೆ ಈ ಅತಿಮುಖ್ಯ ಸಂಶೋಧನೆ ನಡೆದದ್ದು ಜರ್ಮನಿಯಲ್ಲಾದ ಕಾರಣ ಅವರಿಗೆ

ತುಂಬಾ ಕಸಿವಿಸಿಯಾಯಿತು. ಹಿಟ್ಲರ್‌ಅವರ ವಿಜ್ಞಾನಿಗಳು ಪರಮಾಣು ಬಾಂಬು ತಯಾರಿಸುವ ಮೊದಲೇ ಅಮೇರಿಕಾದಲ್ಲಿ ಬಾಂಬು ತಯಾರಾಗಬೇಕೆಂದು ಅವರು ಬಯಸಿದರು. ಈಗಾಗಲೇ ಈ ಸಂಶೋಧನೆ ಜರ್ಮನಿಯಲ್ಲಿ ತುಂಬ ಮುಂದುವರಿದಿರಬೇಕೆಂಬ ಸಂಶಯ ಅವರಿಗೆ ಚಿಂತೆಯನ್ನುಂಟುಮಾಡಿತು. ಸೀಲರ್ಡ್ ಮತ್ತು ವಿಗ್ನರ್ ಅವರನ್ನುದ್ದೇಶಿಸಿ ಅವರು ಹೇಳಿದರು. "ಈಗಲೇ ಪತ್ರವನ್ನು ನೀವು ತಯಾರುಮಾಡಿರಿ, ನಾನು ಸಹಿ ಹಾಕುತ್ತೇನೆ." 1939ರ ಆಗಸ್ಟ್ 2ರಂದು ಐನ್‌ಸ್ಟೈನ್‌ರು ಈ ಐತಿಹಾಸಿಕ ಪತ್ರಕ್ಕೆ ಸಹಿ ಹಾಕಿದರು.

ಅಧ್ಯಕ್ಷರಿಗೆ ಬರೆದ ಐನ್‌ಸ್ಟೈನ್ ಅವರ ಪತ್ರದ ಮುಖ್ಯ ಸಾರಾಂಶ ಇಷ್ಟು : "ಸಾಕಷ್ಟು ದ್ರವ್ಯರಾಶಿಯ ಯುರೇನಿಯಮ್‌ದಿಂದ ಅಗಾಧ ಶಕ್ತಿ ಪಡೆಯಬಹುದೆಂದು ಫರ್ಮಿ ಮತ್ತು ಸೀಲರ್ಡ್ ಅವರ ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ. ಈ ತತ್ವದ ಆಧಾರದ ಮೇಲೆ ಪರಮಾಣು ಬಾಂಬನ್ನು ತಯಾರಿಸಬಹುದೆಂದು ನಮ್ಮ ವಾದ. ಒಂದು ಬಂದರಿನ ಮೇಲೆ ಇಂಥ ಒಂದು ಬಾಂಬನ್ನು ಸ್ಫೋಟಿಸಿದರೆ ಬಂದರು ಆ ಕೂಡಲೇ ಪೂರ್ತಿಯಾಗಿ ನಾಶವಾಗುತ್ತದೆ. ಸುತ್ತಮುತ್ತಲಿನ ಪ್ರದೇಶಗಳಿಗೂ ಸಾಕಷ್ಟು ಹಾನಿಯಾಗುವುದರಲ್ಲಿ ಸಂಶಯವಿಲ್ಲ. ಬಹಳ ಆತಂಕದ ಸಂಗತಿಯೆಂದರೆ, ಹಿಟ್ಲರ್‌ನ ಜರ್ಮನಿಯಲ್ಲಿ ಈ ಸಂಶೋಧನೆ ಈಗಾಗಲೇ ತುಂಬ ಮುಂದುವರಿದಿದೆ. ಆದುದರಿಂದ ಅಮೇರಿಕಾ ಸರ್ಕಾರ ಒಂದಿಷ್ಟೂ ವಿಳಂಬ ಮಾಡದೆ ಪರಮಾಣು ಬಾಂಬು ಯೋಜನೆಗೆ ಆದ್ಯತೆ ನೀಡಬೇಕೆಂಬುದು ನನ್ನ ಕಳಕಳಿಯ ಸಲಹೆ,"

"ಈ ಪತ್ರವನ್ನು ಅಧ್ಯಕ್ಷರ ಕೈಯಲ್ಲಿ ಕೊಡುವುದು ಉತ್ತಮ. ಅವರಿಗೆ ನಿಕಟವರ್ತಿಯಾಗಿರುವ ವ್ಯಕ್ತಿಯೊಬ್ಬರಿಂದ ಈ ಕೆಲಸವನ್ನು ಮಾಡಿಸಬೇಕು. ಅಂಥ ವ್ಯಕ್ತಿ ಯಾರೆಂದು ಕಂಡುಹಿಡಿದು ಆದಷ್ಟು ಬೇಗನೆ ಇದನ್ನು ಅವರಿಗೆ ಮುಟ್ಟಿಸುವ ಜವಾಬ್ದಾರಿ ನಿಮ್ಮದು" ಎಂದೂ ಐನ್‌ಸ್ಟೈನ್ ಸೂಚಿಸಿದರು.

### ಅಧ್ಯಕ್ಷರ ಪಾತ್ರ :

ಆಗ ಸೀಲರ್ಡ್ ಅವರಿಗೆ ತನ್ನ ಗೆಳೆಯ ಅಲೆಕ್ಸಾಂಡರ್ ಸ್ಯಾಕ್ಸ್ ಅವರ ನೆನಪಾಯಿತು. ಸ್ಯಾಕ್ಸ್ ಅವರು ಅಧ್ಯಕ್ಷರ ನಿಕಟವರ್ಗದವರಲ್ಲೊಬ್ಬರಾಗಿದ್ದರು. ಆ ಕೂಡಲೇ ಅವರು ಸ್ಯಾಕ್ಸ್‌ರನ್ನು ಕಾಣಲು ವಾಷಿಂಗ್‌ಟನ್ನಿಗೆ ಧಾವಿಸಿದರು. ಪತ್ರವನ್ನು ತಾನು ಅಧ್ಯಕ್ಷರಿಗೆ ಕೊಡುತ್ತೇನೆಂದು ಸ್ಯಾಕ್ಸ್ ಅವರು ಹೇಳಿದಾಗ ಸೀಲರ್ಡ್ ಅವರಿಗೆ ಎಲ್ಲಿಲ್ಲಸದ ತೃಪ್ತಿ.

ಸ್ಯಾಕ್ಸ್ ಅವರಿಗೆ ಕೂಡ ಅಧ್ಯಕ್ಷರೊಡನೆ ಕೂಡಲೇ ಭೇಟಿ ಸಿಗಲಿಲ್ಲ. ಅಕ್ಟೋಬರ್ 11 ರಂದು ಕೊನೆಗೂ ಅವರು ಪತ್ರವನ್ನು ಅಧ್ಯಕ್ಷರ ಕೈಯಲ್ಲಿ ಕೊಟ್ಟರು.

ಈ ಮಧ್ಯೆ ಸೆಪ್ಟೆಂಬರ್ 1ರಂದು ಯುರೋಪಿನಲ್ಲಿ ದ್ವಿತೀಯ ಜಾಗತಿಕ ಯುದ್ಧ ಶುರುವಾಗಿತ್ತು. ಆ ದಿನ ಬೆಳಿಗ್ಗೆ 4.45 ರ ಹೊತ್ತಿನಲ್ಲಿ ಹಿಟ್ಲರ್ ಅವರು ಯುದ್ಧವನ್ನು ಘೋಷಿಸದೆಯೇ ಪೋಲೆಂಡಿನ ನಗರಗಳ ಮೇಲೆ ಬಾಂಬುಗಳನ್ನು ಸ್ಫೋಟಿಸಿದರು. ಅದೇ ಸಮಯದಲ್ಲಿ ಜರ್ಮನಿಯ ಸೈನಿಕರು ಪೋಲೆಂಡಿನ ಗಡಿ ಪ್ರದೇಶವನ್ನು ದಾಟಿ ಬಹಳಷ್ಟು ಸ್ಥಳವನ್ನು ಆಕ್ರಮಿಸಿದರು. ಇದು ಅನ್ಯಾಯ, ಅಕ್ರಮ ಎಂದು ಘೋಷಿಸಿದ ಇಂಗ್ಲೆಂಡ್, ಸೇನೆಯನ್ನು ಆಕ್ರಮಿತ ಸ್ಥಳದಿಂದ ಹಿಂತೆಗೆಯಬೇಕೆಂದು ಹಿಟ್ಲರ್‌ನಿಗೆ ಎಚ್ಚರಿಕೆ ಕೊಟ್ಟಿತು. ಹಿಟ್ಲರ್ ಈ ಎಚ್ಚರಿಕೆಯನ್ನು ನಿರ್ಲಕ್ಷಿಸಿದರು. ಇದರಿಂದ ಕೆರಳಿದ ಇಂಗ್ಲೆಂಡ್ ಸೆಪ್ಟೆಂಬರ್ 3 ರಂದು ಜರ್ಮನಿಯ ಮೇಲೆ ಯುದ್ಧ ಸಾರಿತು.

ಸ್ಯಾಕ್ಸ್ ಅವರು ಅಧ್ಯಕ್ಷ ರೂಸ್‌ವೆಲ್ಟ್ ಅವರನ್ನು ಭೇಟಿಯಾದದ್ದು ಈ ಹಿನ್ನೆಲೆಯಲ್ಲಿ. ಸಹಜವಾಗಿಯೇ ಅಧ್ಯಕ್ಷರ ಮೇಲೆ ಐನ್‌ಸ್ಟೈನ್‌ರ ಪತ್ರ ತುಂಬಾ ಪ್ರಭಾವ ಬೀರಿತು. ಅಷ್ಟಾಗಿಯೂ ಯೋಜನೆ ಭಾರೀ ಪ್ರಮಾಣದ್ದಾದುದರಿಂದ ಒಂದು ಖಚಿತ ನಿರ್ಣಯಕ್ಕೆ ಬರುವ ಮೊದಲು ಅವರು ಆಳವಾಗಿ ಯೋಚಿಸುವುದು ಅನಿವಾರ್ಯವಾಗಿತ್ತು. ಆದುದರಿಂದ ಆ ಕೂಡಲೇ ಅವರು ಸ್ಯಾಕ್ಸ್ ಅವರೊಡನೆ ಯೋಜನೆಯ ಬಗೆಗೆ ಏನನ್ನೂ ಹೇಳಲಿಲ್ಲ. ಮರುದಿನ ಬೆಳಿಗ್ಗೆ ಉಪಾಹಾರಕ್ಕೆ ಬರಬೇಕೆಂದು ಸ್ಯಾಕ್ಸ್ ಅವರಿಗೆ ಆಹ್ವಾನ ಕೊಟ್ಟರು.

### ಅಧ್ಯಕ್ಷರ ಒಪ್ಪಿಗೆ :

ಮರುದಿನ ಬೆಳಿಗ್ಗೆ ಸ್ಯಾಕ್ಸ್ ಅವರು ವೈಟ್‌ಹೌಸಿಗೆ ಹೋದಾಗ ಅಧ್ಯಕ್ಷರು ತುಂಬ ಲವಲವಿಕೆಯಿಂದಿದ್ದರು. ಅವರು ಸ್ಯಾಕ್ಸ್ ಅವರೊಡನೆ ಕೇಳಿದರು, "ಈ ಬೆಳಿಗ್ಗೆ ಹೊಸ ವಿಚಾರವೇನಾದರೂ ಇದೆಯೇ?"

"ಹೊಸ ವಿಚಾರವೇನೂ ಇಲ್ಲ, ಚಿಕ್ಕ ಒಂದು ಕತೆಯಿದೆ, ಹೇಳಲೇ?"

"ಕತೆಯೆಂದರೆ ನನಗೆ ತುಂಬ ಇಷ್ಟ, ಹೇಳಿ."

"ಇಂಗ್ಲೆಂಡನ್ನು ವಶಪಡಿಸಬೇಕೆಂಬುದು ನೆಪೋಲಿಯನ್ ಬೋನಾಪಾರ್ಟರ ಮಹತ್ವಾಕಾಂಕ್ಷೆಯಾಗಿತ್ತು. ಅದು ತಮಗೆ ಗೊತ್ತಿದ್ದ ವಿಚಾರ, ಆದರೆ ಕೊನೆಯವರೆಗೂ ಅವರು ಯಶಸ್ವಿಯಾಗಲಿಲ್ಲ, ಏಕೆ? ಕಾಲುವೆಯ ಭಾರೀ ಅಲೆಗಳು ಫ್ರೆಂಚ್ ಸಮರ ನೌಕೆಗಳಿಗೆ ಆತಂಕವಾಗಿದ್ದವು. ಸ್ಟೀಮ್ ಬೋಟ್‌ಗಳನ್ನು ಉಪಯೋಗಿಸಿದರೆ ಸುಲಭವಾಗಿ ಕಾಲುವೆಯನ್ನು ದಾಟಬಹುದು ಎಂದು ಅಮೇರಿಕಾದ ವಿಜ್ಞಾನಿ ರಾಬರ್ಟ್ ಫುಲ್ಟಾನ್ ಅವರು ನೆಪೋಲಿಯನ್‌ರಿಗೆ ಸಲಹೆ ಕೊಟ್ಟರು. ಇದೆಂಥ ಹುಚ್ಚು ಸಲಹೆ ಎಂದು ನೆಪೋಲಿಯನ್ ಅವರು ಅದನ್ನು ತಳ್ಳಿಹಾಕಿದರು. ಅಂದು ಫುಲ್ಟಾನ್ ಅವರ ಸಲಹೆಯನ್ನು ನೆಪೋಲಿಯನ್ ಅವರು ಸ್ವೀಕರಿಸಿದ್ದರೆ ಇಂದು ಯುರೋಪಿನ ಇತಿಹಾಸ ಬೇರೆಯೇ ಆಗಿರುತಿತ್ತು. ಇಷ್ಟೇ ನನ್ನ ಕತೆ." ರೂಸ್‌ವೆಲ್ಟ್‌ರಿಗೆ ಸ್ಯಾಕ್ಸರ ಬುದ್ಧಿವಂತಿಕೆ ಮೆಚ್ಚಿಗೆಯಾಯಿತು. ನಸುನಗುತ್ತ ಅವರು ಸ್ಯಾಕ್ಸ್‌ರ ಬೆನ್ನು ತಟ್ಟಿದರು. ಆ ಕೂಡಲೇ ತಮ್ಮ ಕಾರ್ಯದರ್ಶಿ ಬ್ರಿಗೇಡಿಯರ್ ಜನರಲ್ ಎಡ್ವಿನ್ 'ಪಾ' ವಾಟ್ಸನ್ ಅವರನ್ನು ಕರೆಯಿಸಿದರು. ಐನ್‌ಸ್ಟೈನ್ ಅವರ ಪತ್ರವನ್ನು ಅವರ ಕೈಯಲ್ಲಿ ಕೊಟ್ಟು, 'ಈ ಯೋಜನೆಯನ್ನು ಒಂದಿಷ್ಟೂ ವಿಳಂಬ ಮಾಡದೆ ಅಂಗೀಕೃತಗೊಳಿಸಬೇಕು' ಎಂದು ಹೇಳಿದರು.

ಅಧ್ಯಕ್ಷರು ಪರಮಾಣು ಬಾಂಬು ಯೋಜನೆಯ ಸಲಹಾ ಸಮಿತಿಯನ್ನು ಆ ಕೂಡಲೇ ರಚಿಸಿದರು. ಈ ಸಮಿತಿಯಲ್ಲಿ ಸ್ಯಾಕ್ಸ್, ಫರ್ಮಿ, ಸೀಲರ್ಡ್, ವಿಗ್ನರ್ ಮತ್ತು ಟೆಲ್ಲರ್ ಅಲ್ಲದೆ ಹಲವಾರು ಸೇನಾಧಿಕಾರಿಗಳಿದ್ದರು. ಅಕ್ಟೋಬರ್ 21ರಂದು ಸಮಿತಿಯ ಸದಸ್ಯರು ಮೊದಲ ಬಾರಿಗೆ ಸಭೆ ಸೇರಿದರು. ಆ ಸಭೆಯಲ್ಲಿ ಯುರೇನಿಯಂ ವಿದಳನದ ಎಲ್ಲ ಸಂಶೋಧನೆಗಳನ್ನು ವಿಶ್ವವಿದ್ಯಾನಿಲಯಗಳಲ್ಲಿಯೇ ಮಾಡುವುದೆಂದು ನಿಶ್ಚಯವಾಯಿತು. 1940ರ ಫೆಬ್ರವರಿ 20ರಂದು ಈ ಸಂಶೋಧನೆಗಳಿಗಾಗಿ ಕೇವಲ 6000 ಡಾಲರುಗಳನ್ನು ಸರಕಾರ ಬಿಡುಗಡೆ ಮಾಡಿತು.

(ಮುಂದುವರೆಯುವುದು........)

## ಮನೆ ಮದ್ದು



**ಒಂದು ಚಮಚ ಧನಿಯಾವನ್ನು ಒಂದು ಲೋಟ ನೀರಿನಲ್ಲಿ ಕುದಿಸಿ ಕಷಾಯ ಮಾಡಿ ಕುಡಿದರೆ ತಲೆಸುತ್ತು ಕಡಿಮೆಯಾಗುತ್ತದೆ.**





# ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ

# ಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಮೇಳ

## ಒಂದು ಪಕ್ಷಿನೋಟ....

❖ ಮೇಲುಕೋಟೆ ವಿ.ಎನ್.ಗೌಡ

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಕ್ಷಣದಿಂದಲೂ ಪರಮಪೂಜ್ಯ ಗುರುಗಳಾದ ಜಗದ್ಗುರು ಶ್ರೀ ಶ್ರೀ ಶ್ರೀ ಪದ್ಮಭೂಷಣ ಡಾ॥ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ನಿರ್ಮಿಸಿಕೊಟ್ಟಿರುವ ಆದರ್ಶದ ಸತ್ಪಥದಲ್ಲಿ ಮುನ್ನಡೆಯುತ್ತಾ ಸಮಾಜ ಸೇವಾ ಕೈಂಕರ್ಯದಲ್ಲಿ ನಿರತರಾಗಿದ್ದಾರೆ. ಮಹಾಸ್ವಾಮಿಗಳವರ ಸೇವಾವ್ಯಾಪ್ತಿ ಬಹು ವಿಸ್ತಾರವಷ್ಟೇ ಅಲ್ಲ, ಮೇರು ಸದೃಶವಾದುದಾಗಿದೆ. ಆಧ್ಯಾತ್ಮಿಕ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳು ಹಾಗೂ ವಿಶೇಷವಾಗಿ ಇಡೀ ಶೈಕ್ಷಣಿಕ ಕ್ಷೇತ್ರಕ್ಕೇ ಶೋಭೆ ತರುವಂತಹ ಬೃಹತ್ ಯೋಜನೆಗಳನ್ನು ಹಮ್ಮಿಕೊಂಡು ಅವುಗಳನ್ನೆಲ್ಲ ಆಗು ಮಾಡುತ್ತಿದ್ದಾರೆ. ಸ್ವಾಮಿಗಳವರು ಮಾಡುತ್ತಿರುವ ಬಹುಶ್ರುತ ಸೇವಾ ಕೈಂಕರ್ಯಗಳು ಜಾತಿ, ಮತ, ಧರ್ಮಗಳಿಗೆ ಹೊರತಾದ ಮಾನವೀಯ ನೆಲೆಗಟ್ಟಿನಲ್ಲಿ ರೂಪಿತಗೊಂಡಿದ್ದು ಇಡೀ ಲೋಕ ಕಲ್ಯಾಣದಲ್ಲಿ ಕೈಗೊಂಡಿರುವ ಅನುಕರಣೀಯ ಆದರ್ಶಕಾರ್ಯಗಳಾಗಿವೆ. ಅಸಂಖ್ಯಾತ ಬಡ ಮಕ್ಕಳಿಗೆ ಆಧುನಿಕ ಜಗತ್ತಿನ ಆಗುಹೋಗುಗಳ ಅಪೂರ್ವ ಗವಾಕ್ಷವನ್ನೇ ತೆರೆದಿಟ್ಟಿರುವ ಪರಮಪೂಜ್ಯರ ಶೈಕ್ಷಣಿಕ ಆಸಕ್ತಿಯು ಅಳತೆ–ಆಲೋಚನೆಗಳಿಗೆ ಅತೀತವಾದುದಾಗಿದೆ. ಸ್ವಾಮಿಗಳವರು ಧರ್ಮ ಸಂಸ್ಕೃತಿಯ ಜೊತೆ ಜೊತೆಯಲ್ಲಿ ಶಿಕ್ಷಣ, ಅಭಿವೃದ್ಧಿ, ಪರಿಸರ ಸಂರಕ್ಷಣೆ, ಗೋಸಂರಕ್ಷಣೆ, ಬಡ ಜನತೆಯ ಆರೋಗ್ಯ ರಕ್ಷಣೆ, ಜನಪದ ಕಲಾಸಂಪ್ರದಾಯಗಳ ರಕ್ಷಣೆ, ಮಹಿಳೆಯರ ಸ್ವಾವಲಂಬಿ ಬದುಕಿಗೆ ಒತ್ತು, ಯುವಜನತೆಗೆ ನೈತಿಕ ಶಿಕ್ಷಣ ನೀಡುವುದು.....ಹೀಗೆ ಜನತೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ.

ಜ್ಞಾನಿಗಳೂ, ತತ್ತ್ವಜ್ಞಾನಿಗಳೂ, ವೈಜ್ಞಾನಿಕವಾಗಿ ಅಪರಿಮಿತ ಪರಿಣತಿಯನ್ನುಳ್ಳವರೂ ಆಗಿರುವ ಪರಮಪೂಜ್ಯ ಮಹಾಸ್ವಾಮಿಗಳವರು ನಿತ್ಯ ಸಂಚಾರಿಗಳು. ಪ್ರತಿದಿನವೂ ಒಂದಲ್ಲ ಒಂದು ಗ್ರಾಮಕ್ಕೆ ಭೇಟಿ ನೀಡುತ್ತಾ ಜನರಲ್ಲಿ ಧರ್ಮಪ್ರಜ್ಞೆಯನ್ನು ಮೂಡಿಸುತ್ತಿದ್ದಾರೆ. ಅಂತೆಯೇ ತಮ್ಮ ದಿವ್ಯ ಸಂದೇಶಗಳ ಮೂಲಕ ದೇಶಹಿತಕ್ಕಾಗಿ ಹಾಗೂ ಸಮಾಜ ಕಲ್ಯಾಣಕ್ಕಾಗಿ ಜನರನ್ನು ಪ್ರೇರೇಪಿಸುತ್ತಿದ್ದಾರೆ. ತಾವು ಪಟ್ಟಾಭಿಷಿಕ್ತರಾದ ಅತ್ಯಂತ ಕಡಮೆ ಅವಧಿಯಲ್ಲಿ ದೇಶದಾದ್ಯಂತ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಸಂಸ್ಥೆಗಳನ್ನು ಅತ್ಯಾಧುನಿಕವಾಗಿ ನಿರ್ಮಿಸುವ ಮೂಲಕ ಅಡಿಪಾಯ ಭದ್ರವಾಗಿದ್ದರೆ ಅದರ ಮೇಲೆ ಎಂತಹ ಸುಂದರ ಮಹಲನ್ನಾದರೂ ಕಟ್ಟಬಹುದು ಎಂಬುದಕ್ಕೆ ಶ್ರೀಮಠವನ್ನು ಸಾಕ್ಷಿಯನ್ನಾಗಿಸುತ್ತಿದ್ದಾರೆ. ಪರಮಪೂಜ್ಯ ಗುರೂಜಿರವರು ನಿರ್ಮಿಸಿ ಕೊಟ್ಟಿರುವ ಭದ್ರ ಅಡಿಪಾಯದ ಮೇಲೆ ಸನಾತನ ಜೀವನ ಮೌಲ್ಯಗಳಿಂದೊಡಗೂಡಿದ ಹತ್ತು ಹಲವು ಯೋಜನೆಗಳನ್ನು ಸಂಕಲ್ಪಿಸಿ ಅವುಗಳನ್ನೆಲ್ಲ ಸಾಕಾರಗೊಳಿಸುವ ನಿಟ್ಟಿನಲ್ಲಿ ಅತ್ಯಾಧುನಿಕ ಸಂಸ್ಥೆಗಳನ್ನು ನಿರ್ಮಿಸುವ ಮೂಲಕ ಲೋಕ ಸೇವೆಯಲ್ಲಿ ನಿರತರಾಗಿದ್ದಾರೆ. ಪರಮಪೂಜ್ಯ ಗುರೂಜಿರವರ ಸದಾಶಯದಂತೆ ಜಾತಿ ಮತ, ಧರ್ಮಗಳ ಭೇದವೆಣಿಸದೆ ಸರ್ವ ಜನಾಂಗದ ಮಕ್ಕಳ ಕಣ್ಗಳಲ್ಲಿ ಜ್ಞಾನದ ಬೆಳಕನ್ನು ಬೆಳಗಿಸುತ್ತಿದ್ದಾರೆ.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಸಿದ್ಧ ಸಿಂಹಾಸನಾಧೀಶ್ವರ ಗುರುಗಳಿಗೆ ಪ್ರತಿ ವರ್ಷ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವದ ಆಚರಣೆ ಶ್ರೀಮಠದಲ್ಲಿ ಪ್ರತಿವರ್ಷ ಅನೂಚಾನವಾಗಿ ನಡೆಯುತ್ತಿರುವ ಪರಂಪರೆ. ಶ್ರೀ ಮಠದ ಪರಂಪರೆಯಂತೆ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವವನ್ನು ಭಕ್ತ ಜನತೆ ಅತ್ಯಂತ ವೈಶಿಷ್ಟ್ಯಪೂರ್ಣವಾಗಿ ಆಚರಿಸುವ ಮೂಲಕ ತಮ್ಮ ಭಕ್ತಿಗೌರವವನ್ನು ಸಮರ್ಪಿಸುತ್ತಾರೆ. ಅಂತೆಯೇ ಶ್ರೀಮಠದ ಗುರು ಪರಂಪರೆಯಲ್ಲಿ 71ನೇ ಪೀಠಾಧ್ಯಕ್ಷರಾಗಿದ್ದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಪದ್ಮಭೂಷಣ ಡಾ॥ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ತಮ್ಮ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವವನ್ನು ಈ ನಾಡಿನ ಸಂಸ್ಕೃತಿಯ ಮೂಲ ಬೇರುಗಳಾಗಿರುವಂತಹ ಜನಪದ ಕಲೆ, ಸಂಸ್ಕೃತಿಯ ಪುನರುತ್ಥಾನಕ್ಕಾಗಿ ಮೀಸಲಿಟ್ಟಿದ್ದರು. ಪ್ರತಿ ವರ್ಷ ಮೂರು ದಿನಗಳ ಕಾಲ ಸಾವಿರಾರು ಮಂದಿ ಜನಪದ ಕಲಾವಿದರನ್ನು ಕರೆಸಿ ಶ್ರೀಕ್ಷೇತ್ರದಲ್ಲಿ ರಾಜ್ಯಮಟ್ಟದ ಜಾನಪದ ಕಲಾಮೇಳವನ್ನು ಆಯೋಜಿಸುವ ಮೂಲಕ ಜನಪದ ಕಲೆ ಸಂಸ್ಕೃತಿಯ ಉಳಿವಿಗೆ ಎಲ್ಲ ರೀತಿಯ ನೆರವನ್ನೂ ನೀಡುತ್ತಿದ್ದರು. ಆ ಕಾರ್ಯಕ್ರಮ ಇಂದಿಗೂ ಶ್ರೀ ಕ್ಷೇತ್ರದಲ್ಲಿ ಅತ್ಯಂತ ಯಶಸ್ವಿಯಾಗಿ ಮುಂದುವರೆದಿದೆ. ಸಂತ ಪರಂಪರೆಯನ್ನು ಪ್ರವೇಶಿಸುವ ಮೊದಲು ಪರಮಪೂಜ್ಯ ಮಹಾಸ್ವಾಮಿಗಳವರು ವಿಜ್ಞಾನದ ವಿದ್ಯಾರ್ಥಿಯಾಗಿದ್ದರು. ಅವರು ಸಂತರಾದ ನಂತರ ಹೇಳುತ್ತಿದ್ದರು – ಸಂತರಿಗೂ ವಿಜ್ಞಾನಿಗಳಿಗೂ ಅಂತಹ ವ್ಯತ್ಯಾಸವೇನಿಲ್ಲ. ವಿಜ್ಞಾನಿಗಳು ಬಾಹ್ಯ ಜಗತ್ತನ್ನು ಕುರಿತು ಅನ್ವೇಷಿಸುತ್ತಾರೆ. ಸಂತರು ಆಂತರಿಕ ಜಗತ್ತಿನ ಅನ್ವೇಷಣೆಯಲ್ಲಿ ತೊಡಗುತ್ತಾರೆ. ಇಬ್ಬರ ಸಾಧನೆಯೂ ಒಂದೇ. ಹೊಂದಿರುವ ಗುರಿಯೂ ಒಂದೇ. ಆದರೆ ಆ ಗುರಿಯತ್ತ ಸಾಗುವ ಮಾರ್ಗ ಮಾತ್ರ ಬೇರೆಯಾಗಿರುತ್ತದೆಯಷ್ಟೆ. ಆ ನಿಟ್ಟಿನಲ್ಲಿ ಜ್ಞಾನ ವಿಜ್ಞಾನ ಎರಡೂ ಸಮ್ಮಿಲಿತವಾಗಿ ನಡೆದಾಗ ಹೆಚ್ಚು ಪ್ರಯೋಜನವಾಗುತ್ತದೆ ಎಂದು ಹೇಳುತ್ತಿದ್ದರು. ಪೂಜ್ಯ ಗುರುಗಳ ಆಶಯದಂತೆ ಗ್ರಾಮೀಣ ಜನರಿಗೆ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಮಹತ್ವಪೂರ್ಣ ಮಾಹಿತಿಯನ್ನು ತಲುಪಿಸಬೇಕೆಂಬ ನಿಟ್ಟಿನಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರು ತಮ್ಮ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವದ ಶುಭ ಸಂದರ್ಭದಲ್ಲಿ ಜ್ಞಾನ–ವಿಜ್ಞಾನ ತಂತ್ರಜ್ಞಾನ ಸಮ್ಮೇಳನವನ್ನು ಹಮ್ಮಿಕೊಂಡು ಅದರ ಸತ್ಫಲವನ್ನು ಜನ ಸಾಮಾನ್ಯರಿಗೆ ತಲುಪಿಸುತ್ತಿದ್ದಾರೆ. ಇಂದಿನ ಯುವ ಪೀಳಿಗೆಗೆ ಅನುಕೂಲವಾಗುವಂತೆ ಜ್ಞಾನ, ವಿಜ್ಞಾನ, ತಂತ್ರಜ್ಞಾನ ಮೇಳವನ್ನು ಆಯೋಜಿಸಿ ಪೂಜ್ಯ ಗುರೂಜಿಯವರ ಸತ್ಸಂಕಲ್ಪವನ್ನು ಸಾಕಾರಗೊಳಿಸುತ್ತಿದ್ದಾರೆ.





ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಪದ್ಮಭೂಷಣ ಡಾ॥ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ತಮ್ಮ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವದ ಶುಭ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹನೀಯರನ್ನು ಗುರುತಿಸಿ ಅವರಿಗೆ **"ಚುಂಚಶ್ರೀ"** ಪ್ರಶಸ್ತಿ ನೀಡಿ ಗೌರವಿಸುವ ಯೋಜನೆಯನ್ನು 1999ರಿಂದ ಜಾರಿಗೆ ತಂದರು. ಈ ಯೋಜನೆ ಇಂದಿಗೂ ಮುಂದುವರೆದಿದೆ. ಅದೇ ರೀತಿ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳವರು ತಮ್ಮ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವದ ಶುಭ ಸಂದರ್ಭದಲ್ಲಿ **"ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ"** ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದವರನ್ನು ಗುರುತಿಸಿ ಅವರಿಗೆ **"ವಿಜ್ಞಾತಂ"** ಪ್ರಶಸ್ತಿ ನೀಡಬೇಕೆಂದು ಸಂಕಲ್ಪಿಸಿದರು. ಪರಮಪೂಜ್ಯ ಮಹಾಸ್ವಾಮಿಗಳವರ ಸತ್ಸಂಕಲ್ಪದಂತೆ 2016ರಲ್ಲಿ ಜಾರಿಗೆ ಬಂದ **'ವಿಜ್ಞಾತಂ ಪ್ರಶಸ್ತಿ'** ಪ್ರದಾನ ಯೋಜನೆಯಂತೆ ಮೊದಲ ಬಾರಿಗೆ 2016ರಲ್ಲಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅಪರಿಮಿತ ಸಾಧನೆ ಮಾಡಿದ ವಿಶ್ವ ವಿಖ್ಯಾತ ವಿಜ್ಞಾನಿಗಳೂ, 'ಭಾರತ ರತ್ನ' ಪ್ರಶಸ್ತಿ ಪುರಸ್ಕೃತರೂ, ಕನ್ನಡಿಗರೂ ಆದ ಪ್ರೊ.ಸಿ.ಎನ್.ಆರ್. ರಾವ್ ಅವರಿಗೆ 'ವಿಜ್ಞಾತಂ ಪ್ರಶಸ್ತಿ;ಯನ್ನು ಪ್ರದಾನ ಮಾಡಿ ಗೌರವಿಸಲಾಯಿತು. 2017ನೇ ಸಾಲಿನಲ್ಲಿ ಖ್ಯಾತ ವಿಜ್ಞಾನಿ ಪ್ರೊ.ಯು.ಆರ್. ರಾವ್‌ರವರಿಗೆ, 2018ನೇ ಸಾಲಿಗೆ ಜ್ಞಾನ ಹಾಗೂ ಆಧ್ಯಾತ್ಮಿಕ ಕ್ಷೇತ್ರದ ಸಾಧಕರಾದ ಶ್ರೀ ಎಂ.ರವರಿಗೆ, 2019ನೇ ಸಾಲಿನಲ್ಲಿ ಖ್ಯಾತ ವಿಜ್ಞಾನಿ ಡಾ.ಶರಚ್ಚಂದ್ರರವರಿಗೆ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪ್ರದಾನ ಮಾಡಿ ಗೌರವಿಸಲಾಗಿದೆ.

ರಾಜ್ಯಮಟ್ಟದ ಈ ಸಮ್ಮೇಳನದಲ್ಲಿ "ಜ್ಞಾನ"ಕ್ಕೆ ಸಂಬಂಧಿಸಿದಂತೆ ನಾಡಿನ ಪ್ರಮುಖ ಸಂಘ ಸಂಸ್ಥೆಗಳು, ಆಧ್ಯಾತ್ಮಿಕ ಕೇಂದ್ರಗಳು ಪಾಲ್ಗೊಂಡು ಆಧ್ಯಾತ್ಮಿಕ ಪ್ರಪಂಚದ ಉನ್ನತ ವಿಚಾರಧಾರೆಗಳನ್ನು ಜನ ಸಾಮಾನ್ಯರಿಗೂ ನಿಲುಕುವಂತೆ ಪ್ರಾತ್ಯಕ್ಷಿಕೆಗಳ ಮೂಲಕ ಮನದಟ್ಟು ಮಾಡುತ್ತಾರೆ. ವಿಜ್ಞಾನಕ್ಕೆ ಸಂಬಂಧಿಸಿದಂತೆ ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶ್ವ ವಿಖ್ಯಾತಿಯನ್ನು ಪಡೆದಿರುವ ತಂತ್ರಜ್ಞಾನ ಸಂಸ್ಥೆಗಳಾದ ಇಸ್ರೋ, ಟಾಟಾ ಇನ್‌ಸ್ಟಿಟ್ಯೂಟ್, ಡಿಆರ್.ಡಿ.ಒ, ಎನ್.ಎಲ್ ಮುಂತಾದ ತಂತ್ರಜ್ಞಾನ ಸಂಸ್ಥೆಗಳು ಪಾಲ್ಗೊಂಡು ಜನ ಸಾಮಾನ್ಯರಿಗೆ ವಿಜ್ಞಾನದ ನೂತನ ಆವಿಷ್ಕಾರಗಳು, ಅವುಗಳ ಪ್ರಯೋಜನವನ್ನು ಕುರಿತು ಪ್ರಾತ್ಯಕ್ಷಿಕೆಗಳ ಮೂಲಕ ಪ್ರಸ್ತುತ ಪಡಿಸುತ್ತಾರೆ. ಇದೇ ಸಂದರ್ಭದಲ್ಲಿ ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ನಾಲ್ಕು ವೈದ್ಯಕೀಯ ಮಹಾವಿದ್ಯಾಲಯಗಳು, ನಾಲ್ಕು ತಾಂತ್ರಿಕ ಮಹಾ ವಿದ್ಯಾಲಯಗಳು, ನರ್ಸಿಂಗ್ ಮುಂತಾದ ಉನ್ನತ ಶಿಕ್ಷಣ ಪಡೆಯುತ್ತಿರುವ ನಲವತ್ತೈದಕ್ಕೂ ಹೆಚ್ಚು ಕಾಲೇಜುಗಳ ವಿದ್ಯಾರ್ಥಿಗಳು ವಿಜ್ಞಾನ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾಣೆಗಳು, ಅವುಗಳ ಪ್ರಯೋಜನವನ್ನು ಸಾಮಾನ್ಯ ಜನರು ಸದ್ಬಳಕೆ ಮಾಡಿಕೊಳ್ಳುವ ಬಗೆಯನ್ನು ವಿಧ ವಿಧ ಪ್ರಾತ್ಯಕ್ಷಿಕೆಗಳ ಮೂಲಕ ಪ್ರಸ್ತುತ ಪಡಿಸುತ್ತಾರೆ.

ವಿಜ್ಞಾನ, ತಂತ್ರಜ್ಞಾನ ಮತ್ತು ಅಧ್ಯಾತ್ಮಿಕ ಕ್ಷೇತ್ರದಲ್ಲಿ ಇತ್ತೀಚಿನ ಬೆಳವಣಿಗೆಗಳನ್ನು ಜನರ ಗಮನಕ್ಕೆ ತರುವುದು. ವಿಜ್ಞಾನವನ್ನು ಆಧ್ಯಾತ್ಮದೊಡನೆ ಮೇಳೈಸುವುದನ್ನು ಕುರಿತು ಯುವಕರಲ್ಲಿ ಜಾಗೃತಿ ಮೂಡಿಸುವುದು. ಆಧ್ಯಾತ್ಮವನ್ನು ವೈಜ್ಞಾನಿಕವಾಗಿ ಅಭ್ಯಸಿಸುವುದು ಹಾಗೂ ವಿಜ್ಞಾನವನ್ನು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ನೋಡುವುದು. ಎಲ್ಲರಲ್ಲೂ ವಿಶೇಷವಾಗಿ ಯುವಜನತೆ ಎಲ್ಲವನ್ನೂ ವೈಜ್ಞಾನಿಕ ದೃಷ್ಟಿಕೋನದಿಂದ ನೋಡಿ ಕಾರ್ಯೋನ್ಮುಖರಾಗುವಂತೆ ಪ್ರೇರೇಪಿಸುವುದು. ಸಮಾಜದ ಸಾಂಸ್ಕೃತಿಕ, ಸಾಮಾಜಿಕ, ಆಧ್ಯಾತ್ಮಿಕ, ಪರಿಸರ, ಕೃಷಿ, ಇಂಧನ ಉಳಿತಾಯ, ಆರೋಗ್ಯ ಮುಂತಾದ ವಿಷಯಗಳಲ್ಲಿ ಸಂಶೋಧನೆ ಮತ್ತು ಶೈಕ್ಷಣಿಕ ಉನ್ನತ ಸಾಧನೆ ಗಳಿಸುವಲ್ಲಿ ಉತ್ಸಾಹ

ತುಂಬುವುದು ಈ ಮೇಳದ ಪ್ರಮುಖ ಉದ್ದೇಶ. ಪರಮಪೂಜ್ಯ ಮಹಾಸ್ವಾಮಿಗಳವರ ಸತ್ಸಂಕಲ್ಪವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳುತ್ತಿರುವ ಜ್ಞಾನ, ವಿಜ್ಞಾನ, ತಂತ್ರಜ್ಞಾನ ಮೇಳವು ನಾಡಿನ ಎಲ್ಲ ಜ್ಞಾನಿಗಳ, ವಿಜ್ಞಾನಿಗಳ ಹಾಗೂ ತಂತ್ರಜ್ಞಾನಿಗಳೆಲ್ಲರ ಪ್ರಶಂಸೆಗೆ ಪಾತ್ರವಾಗಿದೆ.

2013ರಿಂದ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿರುವ ಈ ಜ್ಞಾನ-ವಿಜ್ಞಾನ-ತಂತ್ರಜ್ಞಾನ ಮೇಳದ ವೈಶಿಷ್ಟ್ಯತೆ ಎಂದರೆ ಪ್ರತಿವರ್ಷ 200ಕ್ಕೂ ಹೆಚ್ಚು ಮಳಿಗೆಗಳಲ್ಲಿ 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು ತಮ್ಮದೇ ವೆಚ್ಚದಲ್ಲಿ ತಯ್ಯಾರಿಸುತ್ತಿರುವ ಉಪಕರಣಗಳನ್ನು ಮತ್ತು ಅನ್ವೇಷಣೆಗಳನ್ನು ಪ್ರದರ್ಶಿಸುತ್ತಿರುವುದು. ಹಾಗೂ ಈ ಪ್ರದರ್ಶನವನ್ನು 5000ಕ್ಕೂ ಹೆಚ್ಚು ಯುವ ಜನತೆ ವೀಕ್ಷಿಸುತ್ತಿರುವುದು. ವಿಜ್ಞಾನ-ಜ್ಞಾನ-ತಂತ್ರಜ್ಞಾನ, ಆಧ್ಯಾತ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ಸುಪ್ರಸಿದ್ಧ ಪರಿಣಿತರಿಂದ ಉಪನ್ಯಾಸಗಳನ್ನು ಏರ್ಪಡಿಸುತ್ತಿರುವುದು. ಮೇಳದಲ್ಲಿ ಪ್ರದರ್ಶಿಸುವ ಅತ್ಯುತ್ತಮ ಮಳಿಗೆ ಮತ್ತು ಪ್ರದರ್ಶನಗಳಿಗೆ ಬಹುಮಾನ ನೀಡುತ್ತಿರುವುದು, ವಿಜ್ಞಾನ-ಜ್ಞಾನ-ತಂತ್ರಜ್ಞಾನ ಮತ್ತು ಆಧ್ಯಾತ್ಮಿಕ ವಿಷಯಗಳ ಬಗ್ಗೆ ರಸಪ್ರಶ್ನೆ ಮತ್ತು ಪಿ.ಪಿ.ಟಿ ಸ್ಪರ್ಧೆಯನ್ನು ಏರ್ಪಡಿಸುತ್ತಿರುವುದು. ಮೇಳದ ವಿಶೇಷ ಆಕರ್ಷಣೆಯೆಂದರೆ ಪ್ರತಿ ವರ್ಷವೂ ರಾಷ್ಟ್ರೀಯ ಪ್ರಶಸ್ತಿ "ವಿಜ್ಞಾತಂ ಪ್ರಶಸ್ತಿ"ಯನ್ನು ಪ್ರದಾನ ಮಾಡುವುದು. 'ವಿಜ್ಞಾತಂ' ಎಂದರೆ ವಿಜ್ಞಾನ-ಜ್ಞಾನ-ತಂತ್ರಜ್ಞಾನ ಎಂದು ಪೂರ್ಣ ಹೆಸರು. 'ವಿಜ್ಞಾತಂ' ಎಂದರೆ ತನ್ನನ್ನು ತಾನು ಅರಿತುಕೊಂಡವರು ಅಥವಾ ಅತ್ಯುನ್ನತ ಸಾಧನೆಯನ್ನು ಸಾಕಾರ ಮಾಡಿಕೊಂಡವರು ಎಂದೂ ಅರ್ಥೈಸಬಹುದು ಎಂಬುದು ಪೂಜ್ಯ ಮಹಾಸ್ವಾಮಿಗಳವರ ವಿಶ್ಲೇಷಣೆ.

ಪರಮಪೂಜ್ಯ ಮಹಾಸ್ವಾಮಿಗಳವರು ಜ್ಞಾನ, ವಿಜ್ಞಾನ, ತಂತ್ರಜ್ಞಾನ ಮೇಳ ನಡೆಯುವ ಅವಧಿಯಲ್ಲಿ ವಿಶ್ವ ವಿಖ್ಯಾತರೆನಿಸಿರುವ ಜ್ಞಾನಿಗಳು, ವಿಜ್ಞಾನಿಗಳು, ತಂತ್ರಜ್ಞಾನಿಗಳು ಹಾಗೂ ವಿಷಯ ಪರಿಣಿತರನ್ನು ಶ್ರೀಕ್ಷೇತ್ರ-ಕ್ಕೆ ಆಹ್ವಾನಿಸಿ ಅವರಿಂದ ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸುವ ಮೂಲಕ ಯುವಜನರ ಜ್ಞಾನಪರಿಧಿಯನ್ನು ವಿಸ್ತಾರಗೊಳಿಸುವ ಕಾರ್ಯವನ್ನೂ ಮಾಡುತ್ತಿದ್ದಾರೆ. ಇದರ ಜೊತೆಗೆ ಇದೇ ಶುಭ ಸಂದರ್ಭದಲ್ಲಿ ಬಾರಿ ಬೃಹತ್ ಉದ್ಯೋಗ ಮೇಳವನ್ನೂ ಹಮ್ಮಿಕೊಳ್ಳುತ್ತಿರುವುದು ನಿರುದ್ಯೋಗಿ ಯುವಜನತೆ ತಮ್ಮ ಭವಿಷ್ಯದ ಬದುಕನ್ನು ಕಟ್ಟಿಕೊಳ್ಳಲು ಸಹಕಾರಿಯಾಗುತ್ತಿದೆ. ಹೀಗೆ ಪರಮಪೂಜ್ಯ ಜಗದ್ಗುರು ಮಹಾಸ್ವಾಮಿಗಳವರು ಉತ್ತಮ ಸಮಾಜ ನಿರ್ಮಾಣ ಮಾಡಬೇಕೆಂಬ ಪರಿಕಲ್ಪನೆಯೊಂದಿಗೆ ಆಯೋಜಿಸುತ್ತಿರುವ ಜ್ಞಾನ ವಿಜ್ಞಾನ ತಂತ್ರಜ್ಞಾನ ಮೇಳದ ಪ್ರಯೋಜನವವನ್ನು ನಮ್ಮ ಯುವ ಜನಾಂಗ ಸದುಪಯೋಗಪಡಿಸಿಕೊಳ್ಳಬೇಕು. ಜ್ಞಾನ ವಿಜ್ಞಾನದ ಆವಿಷ್ಕಾರಗಳನ್ನು ಇಂದಿನ ವ್ಯವಸ್ಥೆಗೆ ಅಳವಡಿಸಿಕೊಂಡು ಉತ್ತಮ ಸಮಾಜದ ನಿರ್ಮಾಣ ಮಾಡಬೇಕು. ಹಾಗಾದಾಗ ಮಾತ್ರ ಶ್ರೀ ಮಠವು ಹಮ್ಮಿಕೊಳ್ಳುತ್ತಿರುವ ಈ ಮೇಳದ ಸಾರ್ಥಕತೆ ಅಡಗಿದೆ.



## ಒಳ್ಳೆಯ ಮಾತು

**ಇನ್ನೊಬ್ಬರ ಯೋಗ್ಯತೆಯನ್ನು ಅಳೆಯುವ ಕೆಲಸ ನಮ್ಮದಾಗಬಾರದು. ಇತರರ ಯೋಗ್ಯತೆಯನ್ನು ಗೌರವಿಸುವುದು ನಮ್ಮ ವ್ಯಕ್ತಿತ್ವವಾಗಬೇಕು.**

# DECLARATION

Statement about ownership of

## 'ADICHUNCHANAGIRI' (KANNADA)

Under Rule 8 form (IV) News Paper, Central Rules 1956.

| | | |
|---|---|---|
| 1. Place of publication | : | Bangalore |
| 2. Periodicity of Publication | : | Monthly |
| 3. Printer Name | : | T. Venkatesh |
| Nationality | : | Indian |
| Address | : | Abhimaani Prakashana, 2/4, Dr. RajkumarRoad, Rajajinagara, Bangalore - 560 010. |
| 4. Publishers Name | : | Sri Nirmalanandanatha Swamiji |
| Nationality | : | Indian |
| Address | : | President, Adichunchanagiri Mahasamthana Math, Vijayanagar, Bangalore-40 |
| 5. Editor's Name | : | Sri Nirmalanandanatha Swamiji |
| Nationality | : | Indian |
| Address | | President, Adichunchanagiri Mahasamsthana Math Vijayanagar, Bangalore-40 |
| 6. Name & Addresses of the Individuals who own paper | : | Adichunchanagiri Shikshana Trust Adichunchanagiri Mahasamsthana Math Vijayanagar, Bangalore-40 |

I, Sri Nirmalanandanatha Swamiji hereby declare that the particulars given above are true to the of my knowledge and belief.

1st March 2020

Sd.
(Sri Nirmalanandanatha Swamiji)
Signature of the Publisher



# 2020ನೇ ಸಾಲಿನ ವಿಜ್ಞಾನತಂ ಪ್ರಶಸ್ತಿ ಪುರಸ್ಕೃತ

# ಡಾ॥ ವಾಸುದೇವ್ ಕಲ್ಕುಂಟೆ ಆತ್ರೇರವರು

**ಡಾ॥ ವಿ.ಕೆ.ಆತ್ರೇರವರು ವೈಜ್ಞಾನಿಕ ಕ್ಷೇತ್ರದಲ್ಲಿ ಸಲ್ಲಿಸಿರುವ ಅಪರಿಮಿತ ಕೊಡಗೆಯನ್ನು ಪರಿಗಣಿಸಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ನೀಡುವ ಪ್ರತಿಷ್ಠಿತ 'ವಿಜ್ಞಾನತಂ' ರಾಷ್ಟ್ರೀಯ ಪ್ರಶಸ್ತಿಯನ್ನು 2020ನೇ ಸಾಲಿಗೆ ಶ್ರೀಯುತರಿಗೆ ನೀಡಿ ಗೌರವಿಸಲಾಗಿದೆ.**

ಡಾ॥ ವಾಸುದೇವ್ ಕಲ್ಕುಂಟೆ ಆತ್ರೇರವರು 1939ನೇ ಇಸವಿಯಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಕಲ್ಕುಂಟೆ ಗ್ರಾಮದಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾಲಯದ ಭಾಗವಾಗಿದ್ದ ಬೆಂಗಳೂರಿನ Univesrity Visvesvaraya College of Engineering ನಲ್ಲಿ (UVCE) 1961ರಲ್ಲಿ ಬಿ.ಇ. ಪದವಿ ಪಡೆದ ಡಾ॥ ಆತ್ರೇಯವರು 1963ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (IISC) ಯಲ್ಲಿ ಸ್ನಾತಕೋತ್ತರ ಪದವಿಗಳಿಸಿದರು. 1967ರಲ್ಲಿ ಕೆನಡಾದ ವಾಟರ್ಲೂ ವಿಶ್ವವಿದ್ಯಾಲಯದಿಂದ ಎಲೆಕ್ಟ್ರಿಕಲ್‌ಎಂಜಿನಿಯರಿಂಗ್‌ನಲ್ಲಿ Ph.D ಪದವಿ ಪಡೆದ ಬಳಿಕ ಕೆನಡಾದ ನೋವಾಸ್ಕೋಷಿಯಾದ ಹ್ಯಾಲಿಫ್ಯಾಕ್ಸ್‌ನ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪ್ರಾಧ್ಯಾಪಕರಾಗಿ 1980ರವರೆಗೆ ಸೇವೆ ಸಲ್ಲಿಸಿದರು.

1980ರಲ್ಲಿ ಕೊಚ್ಚಿನ್‌ನ DRDO ಸಂಸ್ಥೆ ನೇವಲ್ ಫಿಜಿಕಲ್ ಅಂಡ್ ಓಷಿಯಾನೊಗ್ರಾಫಿಕ್ ಪ್ರಯೋಗಾಲಯದಲ್ಲಿ ಸೇರ್ಪಡೆಯಾದ ಡಾ॥ ಆತ್ರೇಯವರು ಕೆಲವೇ ವರ್ಷಗಳಲ್ಲಿ, ಅಂದರೆ, 1984ರಲ್ಲಿ ನಿರ್ದೇಶಕರಾಗಿ ಸಂಸ್ಥೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ತರುವಾಯ ಡಾ॥ ಆತ್ರೇಯವರು DRDO ಸಂಸ್ಥೆಯ R&D ವಿಭಾಗದ ಚೀಫ್ ಕಂಟ್ರೋಲರ್ ಆಗಿ ನೇಮಕವಾದರು. 2000ರ ಫೆಬ್ರವರಿ ಮಾಹೆಯಲ್ಲಿ ಶ್ರೀಯುತರು DRDO ಮಹಾ ನಿರ್ದೇಶಕರಾಗುವುದರ ಜೊತೆಗೆ ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರರಾಗಿ ಸೇವೆ ಸಲ್ಲಿಸಿದರು. ವಿದ್ಯುನ್ಮಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಡಾ॥ ಆತ್ರೇಯವರ ಸೇವೆ ಅನುಪಮವಾಗಿದ್ದು DRDO ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ನೌಕಾ ವಿಭಾಗದ ಜಲಾಂತರ್ಗತ ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ಡಾ॥ ಆತ್ರೇಯವರು ಬಹುಮುಖ್ಯ ಹೊಣೆಗಾರಿಕೆಯನ್ನು ವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಡಾ॥ ಆತ್ರೇಯವರು ಬರೆದ 50ಕ್ಕೂ ಹೆಚ್ಚು ವೈಜ್ಞಾನಿಕ ಸಂಶೋಧನಾ ಲೇಖನಗಳು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಜೊತೆಗೆ ಪದವಿ ಹಾಗೂ ಸ್ನಾತಕೋತ್ತರ ಪದವಿ ಹಂತದ ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳನ್ನು ರಚಿಸಿದ್ದಾರೆ. ದೇಶದಲ್ಲಿ ಅಂಡರ್‌ವಾಟರ್ ಸಿಸ್ಟಮ್ SONARS ಮತ್ತು TORPEDOES ಕ್ಷೇತ್ರದಲ್ಲಿ ಡಾ॥ ಆತ್ರೇಯವರು ಮಾಡಿರುವ ಸಂಶೋಧನೆ ಇತರರೆಲ್ಲರಿಗೂ ಮಾರ್ಗದರ್ಶಕವಾಗಿದೆ. ಸಾಗರ ಸಂಶೋಧನೆಗೆ ಬಹು ವಿಧಗಳಲ್ಲಿ ಸಹಾಯವಾಗುವ "ಸಾಗರಧ್ವನಿ" ಎಂಬ ಸಾಗರೀಯ ಹಡಗನ್ನು ಅಭಿವೃದ್ಧಿ ಪಡಿಸುವಲ್ಲಿ ಇವರ ಪಾತ್ರ ಅತ್ಯಂತ ಗಣನೀಯವಾದುದು.

ಡಾ॥ ಆತ್ರೇರವರು DRDO ಸಂಸ್ಥೆಯಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ 1986ರಲ್ಲಿ DRDO ವರ್ಷದ ವಿಜ್ಞಾನಿ ಪ್ರಶಸ್ತಿ, 1990ರಲ್ಲಿ ವಿದುನ್ಮಾನ ವಿಜ್ಞಾನ ಮತ್ತು ತಂತ್ರಜ್ಞಾನ VASVIK ಪ್ರಶಸ್ತಿ, 1993ರಲ್ಲಿ ವಿದ್ಯುನ್ಮಾನ ಹಾಗೂ ದೂರ ಸಂಪರ್ಕಕ್ಕಾಗಿ IETE ರಾಮ್‌ಲಾಲ್ ವಾಧ್ವಾ ಚಿನ್ನದ ಪದಕ, 1998ರಲ್ಲಿ DRDO ತಂತ್ರಜ್ಞಾನ ನಾಯಕತ್ವ ಪ್ರಶಸ್ತಿ, 2000ರಲ್ಲಿ ಪದ್ಮಭೂಷಣ ಪ್ರಶಸ್ತಿ, 2006ರಲ್ಲಿ ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಡಾ॥ ಆತ್ರೇರವರು ವೈಜ್ಞಾನಿಕ ಕ್ಷೇತ್ರದಲ್ಲಿ ಸಲ್ಲಿಸಿರುವ ಅಪರಿಮಿತ ಕೊಡಗೆಯನ್ನು ಪರಿಗಣಿಸಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ನೀಡುವ ಪ್ರತಿಷ್ಠಿತ 'ವಿಜ್ಞಾನತಂ' ರಾಷ್ಟ್ರೀಯ ಪ್ರಶಸ್ತಿಯನ್ನು 2020ನೇ ಸಾಲಿಗೆ ಶ್ರೀಯುತರಿಗೆ ನೀಡಿ ಗೌರವಿಸಲಾಗಿದೆ.



# ಶ್ರೀಕ್ಷೇತ್ರದಲ್ಲಿ ರಾಜ್ಯಮಟ್ಟದ ಜ್ಞಾನ ವಿಜ್ಞಾನ



ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಸಿದ್ಧ ಸಿಂಹಾಸನಾಧೀಶ್ವರ ಗುರುಗಳ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವದ ಆಚರಣೆ ಶ್ರೀಮಠದಲ್ಲಿ ಪ್ರತಿವರ್ಷ ಅನೂಚಾನವಾಗಿ ನಡೆಯುತ್ತಿರುವ ಪರಂಪರೆ. ಶ್ರೀ ಮಠದ ಪರಂಪರೆಯಂತೆ ಈ ವರ್ಷವೂ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ|| ನಿರ್ಮಲಾನಂದನಾಥ ಮಹಾಸ್ವಾಮಿಗಳವರ **ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವ**ವು ಅತ್ಯಂತ ವೈಶಿಷ್ಟ್ಯಪೂರ್ಣವಾಗಿ ನೆರವೇರಿತು. ಇದೇ ಶುಭ ಸಂದರ್ಭದಲ್ಲಿ ಪರಮಪೂಜ್ಯ ಮಹಾಸ್ವಾಮಿಗಳವರು ಗ್ರಾಮೀಣ ಜನರಿಗೆ ಮತ್ತು ವಿದ್ಯಾರ್ಥಿಗಳಿಗೆ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಮಹತ್ವಪೂರ್ಣ ಮಾಹಿತಿಯನ್ನು ತಲುಪಿಸಬೇಕೆಂಬ ಆಶಯದಿಂದ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ವಸ್ತು ಪ್ರದರ್ಶನವನ್ನು ಹಮ್ಮಿಕೊಂಡು ಅದರ ಸತ್ಫಲವನ್ನು ಜನ ಸಾಮಾನ್ಯರಿಗೆ ತಲುಪಿಸುತ್ತಿದ್ದಾರೆ. ಕಳೆದ ಏಳು ವರ್ಷಗಳಿಂದಲೂ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿರುವ ರಾಜ್ಯಮಟ್ಟದ ಈ ಜ್ಞಾನ ವಿಜ್ಞಾನ ತಂತ್ರಜ್ಞಾನ ಮೇಳವು ಈ ವರ್ಷ ದಿನಾಂಕ 19.2.2020 ಮತ್ತು 20.2.2020 ಎರಡು ದಿನಗಳ ಕಾಲ ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ಅತ್ಯಂತ ಯಶಸ್ವಿಯಾಗಿ ನೆರವೇರಿತು.

ದಿನಾಂಕ 19.2.2020ರಂದು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ|| ನಿರ್ಮಲಾನಂದನಾಥ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ **ಜ್ಞಾನ ವಿಜ್ಞಾನ ತಂತ್ರಜ್ಞಾನ ಮೇಳ ಮತ್ತು ವಸ್ತು ಪ್ರದರ್ಶನ**ದ ಉದ್ಘಾಟನಾ ಸಮಾರಂಭ ನೆರವೇರಿತು. ಸಮಾರಂಭವನ್ನು ನವದೆಹಲಿಯ ನ್ಯಾಷನಲ್ ಬೋರ್ಡ್ ಆಫ್ ಅಕ್ರಿಡಿಟೇಷನ್‌ನ ಅಧ್ಯಕ್ಷರಾದ ಪ್ರೊ.ಅಗರವಾಲ್‌ರವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ರಾಜ್ಯದ ಉಪಮುಖ್ಯಮಂತ್ರಿಗಳೂ, ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಾಂತ್ರಿಕ ಕೌಶಲ್ಯಾಭಿವೃದ್ಧಿ ಸಚಿವರೂ ಆದ ಸನ್ಮಾನ್ಯ ಡಾ.ಸಿ.ಎನ್.ಅಶ್ವತ್ಥ್‌ನಾರಾಯಣರವರು, ಪೂಜ್ಯ ಶ್ರೀ ಶ್ರೀಪುರುಷೋತ್ತಮಾನಂದನಾಥ ಸ್ವಾಮಿಗಳವರು ಪೂಜ್ಯ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮಿಗಳವರು, ಡಾ.ಎಸ್. ಚಂದ್ರಶೇಖರಶೆಟ್ಟಿರವರು, ಮಾಜಿ ಸಚಿವರಾದ ಸನ್ಮಾನ್ಯ ಶ್ರೀ ಎನ್.ಚೆಲುವರಾಯಸ್ವಾಮಿರವರು, ಹಿಂದೂಸ್ಥಾನ್ ಏರೋನಾಟಿಕ್ಸ್‌ನ ಚೀಫ್ ಡಿಸೈನರ್ ಆದ ಡಾ.ಟಿ.ಆರ್.ರಾಜಣ್ಣರವರು ಈ ಶುಭ ಸಂದರ್ಭಕ್ಕೆ ಸಾಕ್ಷಿಯಾದರು.

ಸಮಾರಂಭಕ್ಕೂ ಮೊದಲು ರಾಜ್ಯದ ಉಪಮುಖ್ಯಮಂತ್ರಿಗಳಾದ ಸನ್ಮಾನ್ಯ ಡಾ. ಸಿ.ಎನ್. ಅಶ್ವತ್ಥ್ ನಾರಾಯಣರವರು ವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಸಚಿವರು, ಜ್ಞಾನ ವಿಜ್ಞಾನಗಳು ನಮ್ಮ ಸಮಾಜದ ಆಧಾರ ಸ್ತಂಭಗಳು. ಜ್ಞಾನ ವಿಜ್ಞಾನಗಳು ಇಲ್ಲದೆ ಸಮಾಜದ ಮುನ್ನಡೆ ಅಸಾಧ್ಯ. ಇವುಗಳೆರಡರ ಬಗ್ಗೆ ನಮ್ಮ ಯುವ ಪೀಳಿಗೆಯನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಶ್ರೀ ಆದಿಚುಂಚನಗಿರಿಯ ಮಹಾಸ್ವಾಮಿಗಳವರು ತಮ್ಮ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವವನ್ನು ಮೀಸಲಿಟ್ಟಿರುವುದು ಶ್ಲಾಘನೀಯ. ಸಮಾಜವನ್ನು ಸರಿದಾರಿಯಲ್ಲಿ

**ಬಾಲಗಂಗಾಧರನಾಥ ನಗರದಲ್ಲಿ ಸೈನ್ಸ್ ಪಾರ್ಕ್ ಸ್ಥಾಪನೆ ಮಾಡಲು ಇಪ್ಪತ್ತೈದು ಕೋಟಿ ರೂಪಾಯಿ ಅನುದಾನ ನೀಡಲಾಗುವುದು.**

**-ಡಾ. ಸಿ.ಎನ್. ಅಶ್ವತ್ಥ್ ನಾರಾಯಣರವರು**
**ಉಪ ಮುಖ್ಯಮಂತ್ರಿಗಳು. ಕರ್ನಾಟಕ ಸರ್ಕಾರ**







# ಮತ್ತು ತಂತ್ರಜ್ಞಾನ ಸಮ್ಮೇಳನ



ಮುನ್ನಡೆಸಲು ಸ್ವಾಮಿಗಳವರು ಹಗಲಿರುಳೆನ್ನದೆ ಶ್ರಮಿಸುತ್ತಿದ್ದಾರೆ. ಶಿಕ್ಷಣವನ್ನು ಉದ್ಯೋಗ ಪಡೆಯುವುದಕ್ಕಾಗಿ ಮಾತ್ರ ಪಡೆಯುವುದರಿಂದ ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲ. ಇಂದು ಸಮಾಜವನ್ನು ಹಲವು ಸಮಸ್ಯೆಗಳು ಕಾಡುತ್ತಿವೆ. ಆ ಸಮಸ್ಯೆಗಳನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಪರಮಪೂಜ್ಯ ಮಹಾಸ್ವಾಮಿಗಳವರ ಕಾರ್ಯ ಕ್ಷೇತ್ರ ಬಹು ವಿಸ್ತಾರವಾಗಿದೆ. ಅವರ ಮಾರ್ಗದರ್ಶನದಲ್ಲಿ ತಿಳಿಸಿದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಪ್ರೊ.ಅಗರವಾಲ್‌ರವರು, ನಾವು ವೈಜ್ಞಾನಿಕವಾಗಿ ಎಷ್ಟೇ ಮುಂದುವರೆದಿದ್ದರೂ ಅದಕ್ಕೆ ಆಧ್ಯಾತ್ಮಿಕ ಸಂಸರ್ಗ ಇಲ್ಲದೇ ಹೋದರೆ ವಿಜ್ಞಾನ ಕ್ಷೇತ್ರ ಪರಿಪೂರ್ಣ ಎನಿಸುವುದಿಲ್ಲ. ಆ ದೃಷ್ಟಿಯಿಂದ ಶ್ರೀ ಆದಿಚುಂಚನಗಿರಿ ಮಠವು ಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಮೇಳವನ್ನು ಹಮ್ಮಿಕೊಂಡು ಜನರಿಗೆ ಆ ಬಗ್ಗೆ ಮನವರಿಕೆ ಮಾಡಿ ಕೊಡುತ್ತಿರುವುದು ಶ್ಲಾಘನೀಯ. ಇದರ ಸದುಪಯೋಗವನ್ನು ನಮ್ಮ ಯುವ ಜನತೆ ಪಡೆದು ಸಮಾಜ ಹಾಗೂ ದೇಶದ ಅಭಿವೃದ್ಧಿಗೆ ಅಭಿಮುಖರಾಗಬೇಕು ಎಂದು ತಿಳಿಸಿದರು.

ಮಾಜಿ ಸಚಿವರಾದ ಶ್ರೀ ಎನ್. ಚೆಲುವರಾಯಸ್ವಾಮಿರವರು ಮಾತನಾಡಿ ಶೈಕ್ಷಣಿಕವಾಗಿ ಒಂದು ಸರ್ಕಾರ ಮಾಡಲು ಸಾಧ್ಯವಿಲ್ಲದಷ್ಟು ಸೇವೆಯನ್ನು ಸಾಧಿಸುತ್ತಿರುವ ಶ್ರೀಮಠ ಜಾತ್ಯತೀತವಾಗಿ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿರುವುದು ಸರ್ವವೇದ್ಯ. ಜಗದ್ಗುರು ಡಾ.ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಹಾಕಿ ಕೊಟ್ಟಿರುವ ಮಾರ್ಗದಲ್ಲಿ ಮುನ್ನಡೆಯುತ್ತಲೇ ಮತ್ತಷ್ಟು ಸಾಧನೆಯನ್ನು, ಸೇವೆಯನ್ನು ಮಾಡುತ್ತಿರುವ ಡಾ.ನಿರ್ಮಲಾನಂದನಾಥ ಸ್ವಾಮಿಗಳವರನ್ನು ಇಡೀ ಸಮಾಜದ ಅಭಿನಂದಿಸುತ್ತದೆ ಎಂದು ತಿಳಿಸಿದರು.



ಪ್ರಾಸ್ತಾವಿಕ ನುಡಿಗಳನ್ನಾಡಿದ ಡಾ.ಎನ್.ಎಸ್.ರಾಮೇಗೌಡರು, ಉತ್ತಮ ಸಮಾಜ ನಿರ್ಮಾಣ ಮಾಡಬೇಕೆಂಬ ಪರಿಕಲ್ಪನೆಯೊಂದಿಗೆ ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ಕಳೆದ ಏಳು ವರ್ಷಗಳಿಂದ ಜ್ಞಾನ ವಿಜ್ಞಾನ ತಂತ್ರಜ್ಞಾನ ಮೇಳವನ್ನು ನಡೆಸಿಕೊಂಡು ಬರಲಾಗುತ್ತಿದೆ. ಶ್ರೀ ಮಠವು ಹಮ್ಮಿಕೊಂಡಿರುವ ಈ ಜ್ಞಾನ ವಿಜ್ಞಾನ ಮೇಳದ ಪ್ರಯೋಜನವನ್ನು ಯುವ ಜನತೆ ಪಡೆದುಕೊಳ್ಳುವುದರಲ್ಲಿ ಮಾತ್ರ ಈ ಮೇಳದ ಸಾರ್ಥಕತೆ ಇದೆ ಎಂದು ತಿಳಿಸಿದರು.

ಸಮಾರಂಭದ ದಿವ್ಯ ಸಾನ್ನಿಧ್ಯಪೀಠದಿಂದ ಆಶೀರ್ವಚನ ನೀಡಿದ ಪರಮಪೂಜ್ಯ ಮಹಾಸ್ವಾಮಿಗಳವರು, ಯಾವುದೇ ದೇಶ ಹೆಚ್ಚು ಪ್ರಗತಿಯನ್ನು ಸಾಧಿಸಬೇಕಾದರೆ ಪ್ರತಿಯೊಬ್ಬ ಪ್ರಜೆಯೂ ಶಿಕ್ಷಣವನ್ನು ಪಡೆಯಬೇಕು. ಇಂದು ಶಾಲಾ ಕಾಲೇಜುಗಳು, ವಿಶ್ವ ವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಮೂಲಕ ಸಮಾಜದಲ್ಲಿ ಜ್ಞಾನ ದೀವಿಗೆಯನ್ನು ಬೆಳಗಿಸುತ್ತಿವೆ. ಶಿಕ್ಷಣದಲ್ಲಿ ಜ್ಞಾನ ಮತ್ತು ವಿಜ್ಞಾನವನ್ನು ಸಮ್ಮಿಳಿತಗೊಳಿಸಿಕೊಂಡಾಗ ಮಾತ್ರ ಭವಿಷ್ಯದ ಬದುಕು ಸುಂದರವಾಗುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನದೊಡನೆ ಜ್ಞಾನವನ್ನು ಸಮ್ಮಿಳಿತಗೊಳಿಸಿಕೊಂಡಾಗ ಬದುಕು ಸುಂದರವಾಗುತ್ತದೆ. ಆ ನಿಟ್ಟಿನಲ್ಲಿ ಯುವಜನರನ್ನು ಪ್ರೇರೇಪಿಸಲು ಶ್ರೀಕ್ಷೇತ್ರದಲ್ಲಿ ಜ್ಞಾನ ವಿಜ್ಞಾನ ತಂತ್ರಜ್ಞಾನ ಮೇಳವನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದರ ಸದುಪಯೋಗವನ್ನು ನಮ್ಮ ಯು ಜನ ಪಡೆಯಬೇಕೆಂದು ಆಶಿಸಿದರು.

ಸಮಾರಂಭದಲ್ಲಿ ಪೂಜ್ಯ ಶ್ರೀ ಶ್ರೀ ಸೋಮೇಶ್ವರನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಸೌಮ್ಯನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಶಂಭುನಾಥಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಧರ್ಮಪಾಲನಾಥ ಸ್ವಾಮಿಗಳವರು,













ಪೂಜ್ಯ ಶ್ರೀ ಶ್ರೀ ಗುಣನಾಥಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಚಂದ್ರಶೇಖರನಾಥಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಮಂಗಳನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಚೈತನ್ಯನಾಥಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಶಿವಪುತ್ರ ಸ್ವಾಮಿಗಳವರು, ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳವರು ಮುಂತಾದ ಗಣ್ಯರು ಉಪಸ್ಥಿತರಿದ್ದರು

ಈ ಸಮ್ಮೇಳನದಲ್ಲಿ "ಜ್ಞಾನ"ಕ್ಕೆ ಸಂಬಂಧಿಸಿದಂತೆ ನಾಡಿನ ಪ್ರಮುಖ ಹತ್ತಕ್ಕೂ ಹೆಚ್ಚು ಸಂಘ ಸಂಸ್ಥೆಗಳು, ಆಧ್ಯಾತ್ಮಿಕ ಕೇಂದ್ರಗಳು ಪಾಲ್ಗೊಂಡು ಆಧ್ಯಾತ್ಮಿಕ ಪ್ರಪಂಚದ ಉನ್ನತ ವಿಚಾರಧಾರೆಗಳನ್ನು ಜನ ಸಾಮಾನ್ಯರಿಗೂ ನಿಲುಕುವಂತೆ ಪ್ರಾತ್ಯಕ್ಷಿಕೆಗಳ ಮೂಲಕ ಮನದಟ್ಟು ಮಾಡಿದರು.

ವಿಜ್ಞಾನಕ್ಕೆ ಸಂಬಂಧಿಸಿದಂತೆ ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶ್ವ ವಿಖ್ಯಾತಿಯನ್ನು ಪಡೆದಿರುವ ತಂತ್ರಜ್ಞಾನ ಸಂಸ್ಥೆಗಳಾದ ಇಸ್ರೋ, ಟಾಟಾ ಇನ್‌ಸ್ಟಿಟ್ಯೂಟ್, ಡಿಆರ್.ಡಿ.ಒ, ಎನ್.ಎಲ್ ಮುಂತಾದ ತಂತ್ರಜ್ಞಾನ ಸಂಸ್ಥೆಗಳು ಪಾಲ್ಗೊಂಡು ಜನ ಸಾಮಾನ್ಯರಿಗೆ ವಿಜ್ಞಾನದ ನೂತನ ಆವಿಷ್ಕಾರಗಳು, ಅವುಗಳ ಪ್ರಯೋಜನವನ್ನು ಕುರಿತು ಪ್ರಾತ್ಯಕ್ಷಿಕೆಗಳ ಮೂಲಕ ಪ್ರಸ್ತುತ ಪಡಿಸಿದರು.

ಇದೇ ಸಂದರ್ಭದಲ್ಲಿ ವಿವಿಧ ಸಂಘ ಸಂಸ್ಥೆಗಳು, ಇತರ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಹಾಗೂ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟಿನ ಆಶ್ರಯದಲ್ಲಿ ಮುನ್ನಡೆಯುತ್ತಿರುವ ವೈದ್ಯಕೀಯ ಮತ್ತು ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ಅಧ್ಯಯನ ನಿರತರಾಗಿರುವ ವಿದ್ಯಾರ್ಥಿಗಳು, ನರ್ಸಿಂಗ್ ಮುಂತಾದ ಉನ್ನತ ಶಿಕ್ಷಣ ಪಡೆಯುತ್ತಿರುವ ಕಾಲೇಜುಗಳ ವಿದ್ಯಾರ್ಥಿಗಳು ವಿಜ್ಞಾನ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾಣೆಗಳು, ಅವುಗಳ ಪ್ರಯೋಜನವನ್ನು ಸಾಮಾನ್ಯ ಜನರು ಸದ್ಬಳಕೆ ಮಾಡಿಕೊಳ್ಳುವ ಬಗೆಯನ್ನು ವಿಧ ವಿಧ ಪ್ರಾತ್ಯಕ್ಷಿಕೆಗಳ ಮೂಲಕ ಪ್ರಸ್ತುತ ಪಡಿಸಿದರು.

ಅದೇ ದಿನ ಮಧ್ಯಾಹ್ನ ಬಾಲಗಂಗಾಧರನಾಥ ಸ್ವಾಮೀಜಿ ತಾಂತ್ರಿಕ ಮಹಾವಿದ್ಯಾಲಯದ ಸೆಮಿನಾರ್ ಹಾಲ್‌ನಲ್ಲಿ ಪರಮಪೂಜ್ಯ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಮೊದಲನೇ ಉಪನ್ಯಾಸ ಕಾರ್ಯಕ್ರಮದಲ್ಲಿ ಯು ಎಸ್ ಎ ಯ ಡೇಟಾ ಸೈಂಟಿಸ್ಟ್ ಮತ್ತು ಕನ್ಸಲ್ಟೆಂಟ್ ಆದ ಡಾ.ಉದಯಶಂಕರ್ ಪುರಾಣಿಕ್‌ರವರು 'ಮಾಹಿತಿ ತಂತ್ರಜ್ಞಾನದಲ್ಲಿ ಇತ್ತೀಚೆಗಿನ ಬೆಳವಣಿಗೆಗಳು' ವಿಷಯವನ್ನು ಕುರಿತು ಉಪನ್ಯಾಸ ನೀಡಿದರು.

ಆದಿಚುಂಚನಗಿರಿ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿರುವ ಬಿಜಿಎಸ್ ಆಡಿಟೋರಿಯಂನಲ್ಲಿ ಏರ್ಪಡಿಸಿದ್ದ ಎರಡನೇ ಅವಧಿಯ ಉಪನ್ಯಾಸ ಮಾಲಿಕೆಯಲ್ಲಿ ನ್ಯಾಷನಲ್ ಫ್ಯಾಕಲ್ಟಿ ಆನ್ ಟ್ರೋಪಿಕಲ್ ಡಿಸೀಜಸ್ ಫಿಜಿಷಿಯನ್‌ರವರಾದ ಡಾ.ಕೆ.ನಾಗೇಶ್‌ರವರು 'ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಣಿಗಳ ಕಚ್ಚುವಿಕೆಯಿಂದ ವಿಷ ಹರಡುವಿಕೆ" ವಿಷಯವನ್ನು ಕುರಿತು ಉಪನ್ಯಾಸ ನೀಡಿದರು.

ಆದಿಚುಂಚನಗಿರಿ ಕ್ಷೇತ್ರದಲ್ಲಿರುವ ಬಿಜಿಎಸ್ ದೈಹಿಕ ಶಿಕ್ಷಣ ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಿದ್ದ ಮೂರನೇ ಉಪನ್ಯಾಸ ಕಾರ್ಯಕ್ರಮದಲ್ಲಿ ಯೋಗ ವಿಶ್ವ ವಿದ್ಯಾಲಯದ ಕುಲಸಚಿವರಾದ ಪ್ರೊ. ಎಂ.ಕೆ.ಶ್ರೀಧರ್‌ರವರು 'ಭಾರತೀಯ ಪುರಾತತ್ವ ವಿಜ್ಞಾನ' ವಿಷಯವನ್ನು ಕುರಿತು ಉಪನ್ಯಾಸ ನೀಡಿದರು.

ಅದೇ ದಿನ ಸಂಜೆ ನಡೆದ ನಾಗಚಂದ್ರಿಕಾ ಭಟ್ ಮತ್ತು ತಂಡದವರು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರೆದಿದ್ದ ಸಾವಿರಾರು ಮಂದಿಯ ಮನಸೂರೆಗೊಂಡವು. ॐ




# 2020ನೇ ಸಾಲಿನ ವಿಜ್ಞಾತಂ ಪ್ರಶಸ್ತಿ ಪ್ರದಾನ

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳವರ **ಏಳನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವ ಮತ್ತು "ವಿಜ್ಞಾತಂ" ಪ್ರಶಸ್ತಿ ಪ್ರದಾನ** ಸಮಾರಂಭವು ದಿನಾಂಕ 20.2.2020ರಂದು ಪರಮಪೂಜ್ಯ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು.

ಸಮಾರಂಭಕ್ಕೂ ಮೊದಲು ಪರಮಪೂಜ್ಯ ಮಹಾಸ್ವಾಮಿಗಳವರೊಡಗೂಡಿ ಖ್ಯಾತ ವಿಜ್ಞಾನಿ ಡಾ.ವಾಸುದೇವ ಕಲ್ಕುಂಟೆ ಆತ್ರೇರವರು ಮತ್ತು ಗಣ್ಯಾತಿಗಣ್ಯರೆಲ್ಲರೂ ಜ್ಞಾನ ವಿಜ್ಞಾನ ತಂತ್ರಜ್ಞಾನಮೇಳದ ವಸ್ತು ಪ್ರದರ್ಶನವನ್ನು ವೀಕ್ಷಿಸಿದರು. ವಿವಿಧ ಸಂಘ ಸಂಸ್ಥೆಗಳು, ಇತರ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಹಾಗೂ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟಿನ ಆಶ್ರಯದಲ್ಲಿ ಮುನ್ನಡೆಯುತ್ತಿರುವ ವೈದ್ಯಕೀಯ ಮತ್ತು ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ಅಧ್ಯಯನ ನಿರತರಾಗಿರುವ ವಿದ್ಯಾರ್ಥಿಗಳಿಂದ ರೂಪಿತಗೊಂಡಿದ್ದ ವೈಜ್ಞಾನಿಕ ಪ್ರಯೋಗಾಲಯಗಳು, ಜ್ಞಾನ ವಿಜ್ಞಾನ ತಂತ್ರಜ್ಞಾನಗಳ ಪ್ರದರ್ಶನ ಹಾಗೂ ಪ್ರಾತ್ಯಕ್ಷಿಕೆಗಳನ್ನು ವೀಕ್ಷಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಪೂಜ್ಯ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮಿಗಳವರು ಸರ್ವರನ್ನೂ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿ ಮಾನವನ ಸೇವೆಯೇ ಮಾಧವನ ಸೇವೆ ಎಂದು ನಂಬಿ ಅದರಂತೆಯೇ ನಡೆದ ಪರಮಪೂಜ್ಯ ಜಗದ್ಗುರು ಪದ್ಮಭೂಷಣ ಡಾ.ಬಾಲಗಂಗಾಧರನಾಥ ಮಹಾಸ್ವಾಮಿಗಳವರ ಅಹರ್ನಿಶಿ ಸೇವೆಯಿಂದಾಗಿ ಇಂದು ಶ್ರೀ ಮಠವು ಬೃಹದಾಕಾರವಾಗಿ ಬೆಳೆದಿದೆ. ಅವರ ಸತ್ಸಂಕಲ್ಪಗಳನ್ನೆಲ್ಲ ಸಾಕಾರಗೊಳಿಸುವ ನಿಟ್ಟಿನಲ್ಲಿ ಶ್ರೀಮಠವು ಹತ್ತು ಹಲವು ಸಮಾಜಮುಖಿ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ. ಅದೇ ನಿಟ್ಟಿನಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳವರ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವದ ಸಮದರ್ಭದಲ್ಲಿ ಜ್ಞಾನ ವಿಜ್ಞಾನ ಮೇಳವನ್ನು ಹಮ್ಮಿಕೊಳ್ಳಲಾಗುತ್ತಿದೆ. ಜನತೆ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ನಂತರ ನಡೆದ "ವಿಜ್ಞಾತಂ" ಪದವಿ ಪ್ರದಾನ ಸಮಾರಂಭವನ್ನು ಪರಮಪೂಜ್ಯ ಜಗದ್ಗುರು ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಮೈಸೂರಿನ ರಾಮಕೃಷ್ಣ ಆಶ್ರಮದ ಪೂಜ್ಯ ಶ್ರೀ ಸ್ವಾಮಿ ಮುಕ್ತಿದಾನಂದಜೀ ಮಹರಾಜ್‌ರವರು ಗಣ್ಯಾತಿ ಗಣ್ಯರೊಡಗೂಡಿ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಪೂಜ್ಯ ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಡಾ. ಪ್ರಕಾಶನಾಥ ಸ್ವಾಮಿಗಳವರು, ಡಾ.ವಾಸುದೇವ ಕಲ್ಕುಂಟೆ ಆತ್ರೇರವರು, ಸನ್ಮಾನ್ಯ ಶ್ರೀ ವೈ.ಕೆ.ಪುಟ್ಟಸೋಮೇಗೌಡರು, ಶಾಸಕರಾದ ಶ್ರೀ ಕೆ.ಸುರೇಶಗೌಡರು, ವಿಧಾನ ಪರಿಷತ್ ಸದಸ್ಯರಾದ ಶ್ರೀ ಎನ್. ಅಪ್ಪಾಜಿಗೌಡರು ಈ ಶುಭ ಸಂದರ್ಭಕ್ಕೆ ಸಾಕ್ಷಿಯಾದರು.

ಸಮಾರಂಭವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ಪೂಜ್ಯ ಶ್ರೀ ಶ್ರೀ ಸ್ವಾಮಿ ಮುಕ್ತಿದಾನಂದಜೀ ಮಹರಾಜ್‌ರವರು ಆದಿಚುಂಚನಗಿರಿಯ ಪೂಜ್ಯ ಸ್ವಾಮಿಗಳವರು ತಮ್ಮ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವದ ಶುಭ ಸಂದರ್ಭದಲ್ಲಿ ವಿಜ್ಞಾನಿಯೊಬ್ಬರನ್ನು ಗೌರವಿಸಿಸುವ ಹೊಸ ಪರಂಪರೆಗೆ ನಾಂದಿಯಾಡಿದ್ದಾರೆ. ನಮ್ಮ ಸಂಸ್ಕೃತಿಯಲ್ಲಿ



ಮೊದಲಿನಿಂದಲೂ ವಿಜ್ಞಾನ ಮತ್ತು ಧರ್ಮ ಎರಡೂ ಜೊತೆ ಜೊತೆಯಾಗಿಯೇ ಸಾಗಿ ಬರುತ್ತಿವೆ. ವಿಜ್ಞಾನವನ್ನು ಯಂತ್ರಗಳ ಮೂಲಕ ಬಳಸುತ್ತೇವೆ. ಜ್ಞಾನವನ್ನು ಮನುಷ್ಯರ ಮನಸುಗಳನ್ನು ಅರಳಿಸಲು ಬಳಸುತ್ತೇವೆ. ವಿಜ್ಞಾನದಲ್ಲಿ ಅತ್ಯಂತ ಉನ್ನತ ಸಾಧನೆಗಳನ್ನು ಮಾಡಿದವರನ್ನು ಗೌರವಿಸುವ ಉದ್ದೇಶವೇನೆಂದರೆ ನಾವು ಪ್ರಗತಿ ಪಥದಲ್ಲಿ ಮುನ್ನಡೆಯಲು ಪ್ರತಿಯೊಂದು ಮನೆಯಲ್ಲಿಯೂ ಇರುವ ಮನಸುಗಳು ಆ ನಿಟ್ಟಿನಲ್ಲಿ ಚಿಂತಿಸುವಂತಾಗಬೇಕು. ಜನ ಸಾಮಾನ್ಯರಲ್ಲೂ ಜ್ಞಾನದ ಜೊತೆಗೆ ವಿಜ್ಞಾನವೂ ಮೇಳೈಸಬೇಕು ಎಂಬುದೇ ಆಗಿದೆ.

ಸ್ವಾಮಿಗಳವರು ಜ್ಞಾನ ವಿಜ್ಞಾನವನ್ನು ಸಮುಚ್ಚಯಿಸಿ ಮೇಳವನ್ನು ನಡೆಸುತ್ತಿರುವುದು ಅತ್ಯಂತ ಶ್ಲಾಘನೀಯ. ಮನುಷ್ಯ ಜ್ಞಾನವನ್ನು ಕಲಿಯಲಿ ಅಥವಾ ವಿಜ್ಞಾನವನ್ನೇ ಕಲಿಯಲಿ. ಆದರೆ ತನ್ನ ಬದುಕಿನಲ್ಲಿ ಉನ್ನತ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಮುಖ್ಯ. ವಿಜ್ಞಾನ ಬಡತನದ ನಿವಾರಣೆಗೆ ಸಹಾಯ ಮಾಡಬೇಕು. ಹೊಸ ಹೊಸ ಅನ್ವೇಷಣೆಗೆ ಸಹಕಾರಿಯಾಗಬೇಕು. ಆದರೆ ಮನುಷ್ಯನಲ್ಲಿರುವ ಕೆಟ್ಟತನ ದುಷ್ಟತನಗಳ ನಿವಾರಣೆಗೆ ಆಧ್ಯಾತ್ಮ ಅವಶ್ಯಕ. ಆಗ ಮಾತ್ರ ದೇಶದಲ್ಲಿ ಶಾಂತಿ ನೆಮ್ಮದಿ ನೆಲೆಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಪರಮಪೂಜ್ಯ ಮಹಾಸ್ವಾಮಿಗಳವರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಿಂದ ಕೊಡಮಾಡುವ ರಾಷ್ಟ್ರಮಟ್ಟದ ಪ್ರತಿಷ್ಠಿತ "ವಿಜ್ಞಾತಂ" ಪ್ರಶಸ್ತಿಯನ್ನು ಖ್ಯಾತ ವಿಜ್ಞಾನಿಗಳಾದ ಡಾ॥ವಾಸುದೇವ ಕಲ್ಕುಂಟೆ ಆತ್ರೇಯರವರಿಗೆ ಪ್ರದಾನ ಮಾಡಿ ಗೌರವಿಸಿದರು.

ವಿಜ್ಞಾತಂ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಆತ್ರೇಯರವರು ವಿಜ್ಞಾನವನ್ನು ಹೊರತು ಪಡಿಸಿ ಇಂದು ಯಾವ ವಿದ್ಯಮಾನಗಳೂ ನಡೆಯುವುದು ಕಷ್ಟಸಾಧ್ಯ. ಆದರೆ ಆಧ್ಯಾತ್ಮವನ್ನು ಹೊರತು ಪಡಿಸಿದರೆ ವಿಜ್ಞಾನವೂ ಫಲಪ್ರದವಾಗುವುದಿಲ್ಲ ಎಂಬುದನ್ನು ಪ್ರತಿಯೊಬ್ಬರೂ ಅರಿಯಬೇಕಿದೆ. ದೇಶವನ್ನು ಕಟ್ಟಲು ವಿಜ್ಞಾನ ಅವಶ್ಯಕ. ಆದರೆ ಜನರ ಮನಸುಗಳನ್ನು ಕಟ್ಟಲು ಆಧ್ಯಾತ್ಮ ಅತಿ ಮುಖ್ಯ ಎಂಬುದನ್ನೂ ಅರಿಯಬೇಕು. ಅದಕ್ಕಾಗಿ ಜನರನ್ನು ಜ್ಞಾನ ಮಾರ್ಗದಲ್ಲಿ ಕರೆದೊಯ್ಯುವ ಧರ್ಮಗುರುಗಳ ಪಾತ್ರ ಈ ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಅವಶ್ಯಕವಾಗಿದೆ ಎಂದು ತಿಳಿಸಿದರು.

ನಾಗಮಂಗಲ ಕ್ಷೇತ್ರದ ಶಾಸಕರಾದ ಶ್ರೀ ಕೆ.ಸುರೇಶಗೌಡರು ಮಾತನಾಡಿ, ನಾಡಿನಾದ್ಯಂತ ವಿದ್ಯಾಸಂಸ್ಥೆಗಳನ್ನು ಕಟ್ಟಿ ಗ್ರಾಮೀಣ ಮಕ್ಕಳಿಗೆ ವಿದ್ಯಾದಾನ ಮಾಡುತ್ತಿದ್ದ ಶ್ರೀ ಆದಿಚುಂಚನಗಿರಿ ಮಠವು ಪ್ರಸ್ತುತ ದಿನಮಾನದಲ್ಲಿ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾಗಿ ಬೇಕಿರುವ ಜ್ಞಾನ ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲೂ ಒತ್ತು ನೀಡುತ್ತಿರುವುದು ಶ್ಲಾಘನೀಯ. ಶ್ರೀ ಆದಿಚುಂಚನಗಿರಿ ಮಠದ ಮೂಲಕ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಸಲ್ಲಿಸಿದ ಸೇವೆ ಅದ್ವಿತೀಯವಾದುದು. ಪರಮಪೂಜ್ಯ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳವರು ಶ್ರೀ ಮಠದ ಸೇವೆಯನ್ನು ಮತ್ತಷ್ಟು ಉನ್ನತ ಸ್ಥಿತಿಗೆ ಕೊಂಡೊಯ್ಯುತ್ತಿರುವುದನ್ನು ಕಾಣುತ್ತಿದ್ದೇವೆ. ಮುಂದೊಂದು ದಿನ ವೈಜ್ಞಾನಿಕ ಅನ್ವೇಷಣೆಯಲ್ಲಿ ತೊಡಗಿರುವ ಸಂಸ್ಥೆಗಳಲ್ಲಿ ಶ್ರೀ ಆದಿಚುಂಚನಗಿರಿ ಮಠವನ್ನು ಇಡೀ ದೇಶದಲ್ಲಿಯೇ ಮುಂಚೂಣಿ ಸ್ಥಾನದಲ್ಲಿ ನೋಡುವಂತೆ ಪೂಜ್ಯರು ಮಾಡುವಲ್ಲಿ ಸಫಲರಾಗುತ್ತಾರೆ ಎನ್ನುವ ನಂಬಿಕೆ ನಮಗೆಲ್ಲ ಇದೆ ಎಂದು ತಿಳಿಸಿದರು.

ಸಮಾರಂಭದ ದಿವ್ಯ ಸಾನ್ನಿಧ್ಯ ಪೀಠದಿಂದ ಆಶೀರ್ವಚನ ನೀಡಿದ ಡಾ. ನಿರ್ಮಲಾನಂದನಾಥ ಸ್ವಾಮಿಗಳವರು ನಮ್ಮಲ್ಲಿರುವ ಹಲವಾರು ನ್ಯೂನ್ಯತೆಗಳ ನಡುವೆಯೂ ನಮ್ಮ ದೇಶದ ಸರ್ವಾಂಗೀಣ ಅಭಿವೃದ್ಧಿಗೆ ದುಡಿಯುತ್ತಿರುವ ವಿಜ್ಞಾನಿಗಳು ನಮ್ಮ ದೇಶದ ಬಹುದೊಡ್ಡ ಆಸ್ತಿ. ಇಂತಹ ವಿಜ್ಞಾನಿಗಳನ್ನು ಅರ್ಥ ಮಾಡಿಕೊಳ್ಳುವುದು ಸರಳವೂ ಹೌದು. ಸಂಕೀರ್ಣವೂ ಹೌದು. ಯಾವ ವ್ಯಕ್ತಿ ವಿಷಯದ ಬಗ್ಗೆ ಮೇಲೆ ಮೇಲಷ್ಟೇ ತಿಳಿದುಕೊಳ್ಳುತ್ತಾರೋ ಅಂತಹವರು ನಾಸ್ತಿಕರೆನಿಸುತ್ತಾರೆ. ಸಂಸ್ಕೃತಿಯ ಆಳಕ್ಕಿಳಿದು ಆ ಬಗ್ಗೆ ಅರಿತುಕೊಳ್ಳುವವರು ಯಾರಿರುತ್ತಾರೊ ಅವರು ಆಸ್ತಿಕರಾಗುತ್ತಾರೆ. ಜೊತೆಗೆ ಮಹಾನ್ ಸಾಧಕರಾಗುತ್ತಾರೆ. ಇಂತಹ ಸಾಧಕರನ್ನು ಮಕ್ಕಳು ಹಾಗೂ ಯುವಕರು ತಮ್ಮ ಬಾಳಿನ ಆದರ್ಶವನ್ನಾಗಿಸಿಕೊಳ್ಳಬೇಕು ಎಂದು ತಿಳಿಸಿದರು.

ಸಮಾರಂಭದಲ್ಲಿ ಪೂಜ್ಯ ಶ್ರೀ ಶ್ರೀ ಸೋಮೇಶ್ವರನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಸೌಮ್ಯನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಶಂಭುನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಧರ್ಮಪಾಲನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಗುಣನಾಥಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಚಂದ್ರಶೇಖರನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಮಂಗಳನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಚೈತನ್ಯನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಶಿವಪುತ್ರ ಸ್ವಾಮಿಗಳವರು, ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳವರು,ಪೂಜ್ಯ ಶ್ರೀ ಶ್ರೀ ಶೈಲನಾಥ ಸ್ವಾಮಿಗಳವರು, ಮುಂತಾದ ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ॐ





## ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರ

# ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವ

ದಿನಾಂಕ 20.2.2020ರಂದು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರ **ಏಳನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವವು** ಅಸಂಖ್ಯಾತ ಭಕ್ತರ, ಜನಪ್ರತಿನಿಧಿಗಳ ಹಾಗೂ ಗಣ್ಯರ ಸಮ್ಮುಖದಲ್ಲಿ ಅತ್ಯಂತ ವೈಶಿಷ್ಟ್ಯಪೂರ್ಣವಾಗಿ ನೆರವೇರಿತು.

ಅಂದು ಶ್ರೀ ಕ್ಷೇತ್ರದಲ್ಲಿರುವ ಎಲ್ಲಾ ದೇವಾಲಯಗಳು ವಿಧ ವಿಧ ಹೂಗಳು ಹಾಗೂ ದೀಪಾಲಂಕಾರದಿಂದ ಅಲಂಕೃತಗೊಂಡಿದ್ದವು. ಪ್ರಾಥಃಕಾಲದಲ್ಲಿಯೇ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳವರು ಶಾಖಾಮಠಗಳ ಸ್ವಾಮಿಗಳವರೊಡಗೂಡಿ ವೇದಘೋಷ ಹಾಗೂ ಮಂಗಳವಾದ್ಯಗಳ ಸಮೇತ ಶ್ರೀ ಕ್ಷೇತ್ರದಲ್ಲಿರುವ ಶ್ರೀ ಕಾಲಭೈರವೇಶ್ವರ ಸ್ವಾಮಿ, ಶ್ರೀ ಗಂಗಾಧರೇಶ್ವರ ಸ್ವಾಮಿ, ಶ್ರೀ ಸ್ತಂಭಾಂಬಿಕಾ ದೇವಿ, ಶ್ರೀ ಮಾಳಮ್ಮ ದೇವಿ, ಶ್ರೀ ಚಂದ್ರಮೌಳೀಶ್ವರ ಸ್ವಾಮಿ, ಶ್ರೀ ಮಲ್ಲೇಶ್ವರ ಸ್ವಾಮಿ, ಶ್ರೀ ಸಿದ್ಧೇಶ್ವರ ಸ್ವಾಮಿ, ಶ್ರೀ ನಾಗಲಿಂಗೇಶ್ವರ ಸ್ವಾಮಿ ದೇಗುಲಗಳಿಗೆ ಆಗಮಿಸಿ ಅಭಿಷೇಕ ಮಾಡಿ ಷೋಡಶೋಪಚಾರ ಪೂಜೆಯನ್ನು ಸಲ್ಲಿಸಿದರು. ನಂತರ ಶ್ರೀಗುರು ಡಾ.ಬಾಲಗಂಗಾಧರನಾಥ ಮಹಾಸ್ವಾಮಿಗಳವರ ಮಹಾಸನ್ನಿಧಿಗೆ ಆಗಮಿಸಿ ಶ್ರೀ ಗುರುದೇವರನ್ನು ಪೂಜಿಸಿ ತಮ್ಮ ಭಕ್ತಿನಮನಗಳನ್ನು ಸಲ್ಲಿಸಿದರು. ಶ್ರೀ ನಾಗಲಿಂಗೇಶ್ವರಸ್ವಾಮಿ ದೇಗುಲದಲ್ಲಿ



ಎರಡು ದಿನಗಳಿಂದ ನಡೆಯುತ್ತಿದ್ದ ಹೋಮದ ಪೂರ್ಣಾಹುತಿಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಶಾಖಾಮಠದ ಸ್ವಾಮಿಗಳವರು, ಭಕ್ತರು ಪಾಲ್ಗೊಂಡಿದ್ದರು.

ನಂತರ ಪರಮಪೂಜ್ಯ ಮಹಾಸ್ವಾಮಿಗಳವರ ಏಳನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವವು ನೆರೆದಿದ್ದ ಗಣ್ಯ ಮಾನ್ಯರ ಸಮ್ಮುಖದಲ್ಲಿ ನೆರವೇರಿತು. ಮೈಸೂರಿನ ರಾಮಕೃಷ್ಣ ಆಶ್ರಮದ ಪೂಜ್ಯ ಶ್ರೀ ಶ್ರೀ ಮುಕ್ತಿದಾನಂದಜೀ ಮಹರಾಜ್‌ರವರು ಜ್ಯೋತಿ ಬೆಳಗಿಸುವ ಮೂಲಕ ಸಮಾರಂಭವನ್ನು ಉದ್ಘಾಟಿಸಿದರು. ಪರಮಪೂಜ್ಯ ಮಹಾಸ್ವಾಮಿಗಳವರು ಹಾಗೂ ವೇದಿಕೆಯಲ್ಲಿದ್ದ ಗಣ್ಯಮಾನ್ಯರೆಲ್ಲರೂ ಪರಮಪೂಜ್ಯ ಗುರೂಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಆರತಿ ಬೆಳಗುವ ಮೂಲಕ ತಮ್ಮ ಭಕ್ತಿ ನಮನ ಸಮರ್ಪಿಸಿದರು.

ಪರಮಪೂಜ್ಯರ ಆಶೀರ್ವಚನ ಮತ್ತು ಅತಿಥಿ ಅಭ್ಯಾಗತರು ಶುಭ ನುಡಿಗಳನ್ನಾಡಿದ ನಂತರ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳವರ ಏಳನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವವು ಭಕ್ತರ ಜಯಘೋಷ, ವಟುಗಳ ವೇದಘೋಷ ಹಾಗೂ ಮಂಗಳವಾದ್ಯಗಳ ನಡುವೆ ನೆರವೇರಿತು. ಸರ್ವಾಲಂಕೃತ ಪೀಠದಲ್ಲಿ ಮಹಾಸ್ವಾಮಿಗಳವರು ಆಸೀನರಾಗುತ್ತಿದ್ದಂತೆ ನೆರೆದಿದ್ದ ಭಕ್ತರ ಜಯಘೋಷದ ನಡುವೆ ಪರಮಪೂಜ್ಯರಿಗೆ ಶಾಲು ಹೊದಿಸಿ, ಹೂವಿನ ಹಾರ ಹಾಗೂ ಕಂಠೀಹಾರಗಳನ್ನು ತೊಡಿಸಿ ಸುವರ್ಣ ಕಿರೀಟ ಧಾರಣೆ ಮಾಡಲಾಯಿತು. ನಂತರ ವಿಧ ವಿಧ ಹೂಗಳಿಂದ ಪುಷ್ಪಾಭಿಷೇಕ ಮಾಡಿ ಆರತಿ ಬೆಳಗುವ ಮೂಲಕ ಪರಮಪೂಜ್ಯ ಮಹಾಸ್ವಾಮಿಗಳವರ ಏಳನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವವನ್ನು ಸಂಪನ್ನಗೊಳಿಸಲಾಯಿತು. ಓಂ



# ಆದಿಚುಂಚನಗಿರಿ ಆಸ್ಪತ್ರೆ

# ಉಚಿತ ಸೀಳುತುಟಿ ಮತ್ತು ವಸಡು ಪ್ಲಾಸ್ಟಿಕ್ ಸರ್ಜರಿ ಶಿಬಿರ

ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದ ಪರಮಪೂಜ್ಯ ಜಗದ್ಗುರು ಶ್ರೀ ಡಾ॥ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಸೀಳುದುಟಿ ಸಮಸ್ಯೆಯಿಂದ ಬಳಲುತ್ತಿದ್ದ ಮಕ್ಕಳನ್ನು ಕಂಡು ಮರುಗುತ್ತಿದ್ದರು. ಈ ಸಮಸ್ಯೆಯಿಂದ ಬಳಲುವ ಮಕ್ಕಳ ಮೊಗದಲ್ಲಿ ನಗು ತರಿಸಬೇಕು ಎಂಬ ನಿಟ್ಟಿನಲ್ಲಿ ಚಿಂತಿಸಿದ ಪರಮಪೂಜ್ಯ ಗುರೂಜಿರವರು 2006ರಿಂದ ಈ ವಿಶೇಷ ಉಚಿತ ಸೀಳುತುಟಿ ಶಸ್ತ್ರಚಿಕಿತ್ಸಾ ಶಿಬಿರವನ್ನು ಆರಂಭಿಸಿದರು. ಅಂದಿನಿಂದ ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯವು ಅಮೆರಿಕದ ರೋಟಾಪ್ಲಾಸ್ಟ್ ಇಂಟರ್‌ನ್ಯಾಷನಲ್, ಬೆಂಗಳೂರು ಉತ್ತರ ರೋಟರಿಯ ಸಂಯುಕ್ತಾಶ್ರಯದಲ್ಲಿ ಈ ಶಸ್ತ್ರಚಿಕಿತ್ಸಾ ಶಿಬಿರ ಆಯೋಜನೆ ಮಾಡುತ್ತಿದೆ. ಈ ಶಿಬಿರಕ್ಕಾಗಿಯೇ ಅಮೆರಿಕದಿಂದ ಆಗಮಿಸುವ ತಜ್ಞ ವೈದ್ಯರ ತಂಡ ಶಸ್ತ್ರ ಚಿಕಿತ್ಸೆ ನಡೆಸಿ, ಗುಣಮಟ್ಟದ ಚಿಕಿತ್ಸೆ ನೀಡುತ್ತಿದ್ದಾರೆ. ಈ ವರ್ಷವೂ ಅಮೆರಿಕದ ರೋಟಾಪ್ಲಾಸ್ಟ್ ಇಂಟರ್‌ನ್ಯಾಷನಲ್ ಸಂಸ್ಥೆಯ 25 ವೈದ್ಯರ ತಂಡ ಆಗಮಿಸಿತ್ತು. 2006ರಿಂದ ಇಲ್ಲಿಯವರೆಗೆ ನಡೆದ 7 ಶಿಬಿರಗಳಲ್ಲಿ ಮಕ್ಕಳು ಹಾಗೂ ವಯಸ್ಕರು ಸೇರಿದಂತೆ 762 ಜನರಿಗೆ ಸೀಳುತುಟಿ ಮತ್ತು ವಸಡು ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಅಷ್ಟೂ ಜನರ ಬದುಕಿನಲ್ಲಿ ಸಂತಸವನ್ನು ತರಲಾಗಿದೆ.

ದಿನಾಂಕ 21.1.2020ರಂದು ಮಂಡ್ಯ ಜಿಲ್ಲೆಯ ಬಿ ಜಿ ನಗರದಲ್ಲಿರುವ ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ಏರ್ಪಡಿಸಿದ್ದ 8ನೇ ವರ್ಷದ ಉಚಿತ ಸೀಳುತುಟಿ, ವಸಡು ಪ್ಲಾಸ್ಟಿಕ್ ಶಸ್ತ್ರಚಿಕಿತ್ಸಾ ಶಿಬಿರದ ಉದ್ಘಾಟನಾ ಸಮಾರಂಭವು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು.

ಶಿಬಿರಕ್ಕೆ ಚಾಲನೆ ನೀಡಿ ಆಶೀರ್ವಚನ ನೀಡಿದ ಪರಮಪೂಜ್ಯ ಮಹಾಸ್ವಾಮಿಗಳವರು, ಸೀಳುತುಟಿ ಸಮಸ್ಯೆ ಇರುವ ಮಗು ಹುಟ್ಟಿದಾಗ ಪೋಷಕರು ಅದನ್ನು ತಿರಸ್ಕಾರ ಮಾಡುವುದನ್ನು ನಾವು ಕಂಡಿದ್ದೇವೆ. ಸೀಳುದುಟಿ ಇರುವ ವ್ಯಕ್ತಿ ವಿವಾಹ ಆಗದ ಸ್ಥಿತಿಯನ್ನೂ ನೋಡಿದ್ದೇವೆ. ಆದರೆ ಇಂದು ವೈದ್ಯಲೋಕದಲ್ಲಿ ಸಾಕಷ್ಟು ಸುಧಾರಣೆಯಾಗಿದ್ದು ಸೀಳುದುಟಿ ಸಮಸ್ಯೆ ಸರಿಪಡಿಸುವ ಆಧುನಿಕ ಚಿಕಿತ್ಸಾ ಪದ್ಧತಿಗಳಿವೆ. ಅದರ ಸದುಪಯೋಗವನ್ನು ನಮ್ಮ ಜನತೆಗೆ ತಲುಪಿಸಬೇಕು ಎನ್ನುವ ನಿಟ್ಟಿನಲ್ಲಿ ಅಮೇರಿಕಾದಿಂದ ನುರಿತ ತಜ್ಞ ವೈದ್ಯರನ್ನು ಕರೆಸಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ವೈದ್ಯ ನಾರಾಯಣೋ ಹರಿಃ ಎನ್ನುವ ಮಾತು ಮೊದಲಿನಿಂದಲೂ ಇದೆ. ಮಾತೃದೇವೋಭವ, ಆಚಾರ್ಯ ದೇವೋಭವ, ಅತಿಥಿ ದೇವೋಭವ ಎನ್ನುವ ಹಾಗೆ ಅದರ ಜೊತೆಗೆ ವೈದ್ಯ ದೇವೋಭವ ಎನ್ನಲೂಬಹುದು. ದೇವರ ಮೇಲೆ ವಿಶ್ವಾಸವಿಟ್ಟಂತೆ ವೈದ್ಯರ ಮೇಲೂ ವಿಶ್ವಾಸ ಇಡಬೇಕು. ದೇಹದ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ವೈದ್ಯರ ಸೇವೆ ಅನುಪಮವಾದುದು. ಅಮೆರಿಕದ ರೋಟಾಪ್ಲಾಸ್ಟ್ ಇಂಟರ್‌ನ್ಯಾಷನಲ್ ಸಂಸ್ಥೆ ಮತ್ತು ಬೆಂಗಳೂರು ಉತ್ತರ ರೋಟರಿ ಸಂಸ್ಥೆಯ ಸೇವೆ ಸ್ಮರಣೀಯ. ಶಸ್ತ್ರಚಿಕಿತ್ಸೆಯ ನಂತರ ಮಕ್ಕಳ ಮೊಗದಲ್ಲಿ ನಗು ಮೂಡಿದರೆ, ಆ ನಗುವನ್ನು ಕಂಡು ತಾಯಂದಿರು ಸಂತಸ ಪಟ್ಟರೆ ಅದು ಪೂಜ್ಯ ಬಾಲಗಂಗಾಧರನಾಥ ಸ್ವಾಮಿಗಳವರಿಗೆ ತಲುಪುತ್ತದೆ. ದೂರದಿಂದ

**ಆದಿಚುಂಚನಗಿರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ಅಮೆರಿಕದ ರೋಟಾಪ್ಲಾಸ್ಟ್ ಇಂಟರ್‌ನ್ಯಾಷನಲ್ ಸಹಯೋಗದಲ್ಲಿ ಕಳೆದ 7 ವರ್ಷಗಳಲ್ಲಿ ದೇಶದಲ್ಲೇ ಅತೀಹೆಚ್ಚು ಸೀಳುತುಟಿ, ವಸಡು ಶಸ್ತ್ರಚಿಕಿತ್ಸೆ ನಡೆಸಿದ ಸಂಸ್ಥೆಯೆಂಬ ಹೆಗ್ಗಳಿಕೆ ಹೊಂದಿದೆ.**






# ಮಕ್ಕಳ ಮೊಗದಲ್ಲಿ ನಗು ತರಿಸುವ ಶಸ್ತ್ರಚಿಕಿತ್ಸೆ

**ಈ ವರ್ಷ 146 ಮಂದಿ ಶಸ್ತ್ರಚಿಕಿತ್ಸೆಗೆ ನೋಂದಣಿ ಮಾಡಿಕೊಂಡಿದ್ದು ಅವರನ್ನು ಪರೀಕ್ಷಿಸಿ, ಶಸ್ತ್ರಚಿಕಿತ್ಸೆಗೆ ಅರ್ಹರಾಗಿದ್ದ 75 ಮಂದಿಗೆ ಶಸ್ತ್ರ ಚಿಕಿತ್ಸೆ ಮಾಡಲಾಯಿತು. ಒಂದೇ ಶಿಬಿರದಲ್ಲಿ ಇಷ್ಟೊಂದು ಜನರಿಗೆ ಶಸ್ತ್ರಚಿಕಿತ್ಸೆ ಮಾಡುತ್ತಿರುವುದು ದೇಶದಲ್ಲಿ ಇದೇ ಮೊದಲು. ಈ ಸಾಧನೆ ಲಿಮ್ಕಾ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ಗೆ ನೋಂದಣಿಯಾಗಿದ್ದು ಪ್ರಮಾಣ ಪತ್ರ ದೊರೆಯುವ ಸಾಧ್ಯತೆ ಇದೆ.**

ಬಂದಿರುವ ಮಕ್ಕಳು ಈ ಶಿಬಿರವನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ॥ ಚಂದ್ರಶೇಖರಶೆಟ್ಟಿರವರು ಮಾತನಾಡಿ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.0.3ರಷ್ಟು ಜನರು ಸೀಳುತುಟಿ, ಸೀಳು ವಸಡು ಸಮಸ್ಯೆಯಿಂದ ಬಳಲುತ್ತಿದ್ದಾರೆ. ಜನ್ಮಜಾತವಾಗಿ ಈ ಸಮಸ್ಯೆ ಬಂದಿರುತ್ತದೆ. ಕೆಲವರಿಗೆ ವಂಶಪಾರಂಪರ್ಯವಾಗಿಯೂ ಈ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಚಿಕಿತ್ಸೆ ಇದ್ದು ಇದರ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು. ಇದು ಸಂಪೂರ್ಣವಾಗಿ ಗುಣಪಡಿಸಬಹುದಾದ ಸಮಸ್ಯೆಯಾಗಿದೆ ಎಂದು ಹೇಳಿದರು.

ಶಾಸಕರಾದ ಶ್ರೀ ಕೆ.ಸುರೇಶ್‌ಗೌಡರು ಮಾತನಾಡಿ ಪರಮಪೂಜ್ಯರಾದ ಡಾ॥ ಬಾಲಗಂಗಾಧರನಾಥ ಸ್ವಾಮೀಜಿರವರು ಆರಂಭಿಸಿದ ಈ ಶಿಬಿರವನ್ನು ಡಾ॥ ನಿರ್ಮಲಾನಂದನಾಥ ಸ್ವಾಮೀಜಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಸ್ವಸ್ಥ ಸಮಾಜ ನಿರ್ಮಾಣಕ್ಕೆ ಮಠದ ಕೊಡುಗೆ ಅಪಾರ ಎಂದು ಹೇಳಿದರು.

ವೈದ್ಯಕೀಯ ಸಂಸ್ಥೆಯ ಸಲಹೆಗಾರರಾದ ಡಾ॥ ಸುನಿಲ್ ಮಲ್ಲೇಶ್‌ರವರು ಮಾತನಾಡಿ ಹುಟ್ಟಿದಾಗ ಮಗು ನಗುತ್ತಿರಬೇಕು ಎಂದು ಪೋಷಕರು ಬಯಸುತ್ತಾರೆ. ಆದರೆ ಮಗು ಅಳಬೇಕು ಎಂದು ವೈದ್ಯರು ಹೇಳುತ್ತಾರೆ. ಮಗು ಬಣ್ಣದಲ್ಲೂ ಚೆನ್ನಾಗಿರಬೇಕು, ತಮ್ಮಂತೆಯೇ ಇರಬೇಕು ಎಂದು ಪೋಷಕರು ಬಯಸುತ್ತಾರೆ. ಆದರೆ ನಾನಾ ಕಾರಣಗಳಿಂದ ಸೀಳುದುಟಿಯಾದಾಗ ಪೋಷಕರು ಸಂಕಟಪಡುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ರೋಟಾಪ್ಲಾಸ್ಟ್ ಇಂಟರ್‌ನ್ಯಾಷನಲ್ ಸಂಸ್ಥೆ ನಿರ್ದೇಶಕ ಡಾ.ಟಾಡ್ ಫಾನ್‌ವರ್ತ್, ಡಾ॥ ರಾಂಡಲ್ ಪ್ಲಾಯ್ಡ್, ರೋಟರಿ ಸಂಸ್ಥೆಯ ಜಿ.ಎಸ್.ಲಕ್ಷ್ಮಣ್, ಡಾ॥ ಸಮೀರ್ ಹರಿಯಾನಿ, ಬಿ.ಎಸ್.ವಿನೋದ್ ಕುಮಾರ್‌ರವರು, ಪ್ರಾಚಾರ್ಯರಾದ ಡಾ॥ ಎಂ.ಜಿ.ಶಿವರಾಮು ಮುಂತಾದವರು ಉಪಸ್ಥಿತರಿದ್ದರು.

ಈ ಬಾರಿಯ ಶಿಬಿರದಲ್ಲಿ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಒಡಿಶಾದ ಮಕ್ಕಳು ಹಾಗೂ ವಯಸ್ಕರು ಚಿಕಿತ್ಸೆ ಪಡೆದರು. ಉತ್ತರ ಕರ್ನಾಟಕದ ಹೆಚ್ಚಿನ ಜನರು ಶಿಬಿರದ ಉಪಯೋಗ ಪಡೆದರು. ॐ

ದಿನಾಂಕ 11.2.2020ರಂದು ಕುಮಟದಲ್ಲಿ ಆಯೋಜಿಸಿದ್ದ ರಾಜ್ಯ ಒಕ್ಕಲಿಗ ಸಂಘಗಳ ಸಮಾವೇಶದ ಉದ್ಘಾಟನಾ ಸಮಾರಂಭವು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಪೂಜ್ಯ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಧರ್ಮಪಾಲನಾಥ ಸ್ವಾಮಿಗಳವರು, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ತುಳಸಿಗೌಡ ಮುಂತಾದ ಗಣ್ಯರು ಉಪಸ್ಥಿತರಿದ್ದರು.





# ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ

# ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ

ದಿನಾಂಕ 14.2.2020ರಂದು ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ಏರ್ಪಡಿಸಿದ್ದ **'ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನದ'** ಉದ್ಘಾಟನಾ ಸಮಾರಂಭವು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು.

ನವದೆಹಲಿಯ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಮತ್ತು ಮಂಡ್ಯ ಜಿಲ್ಲಾಡಳಿತದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ವಿಜ್ಞಾನ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿ, ಅದನ್ನು ವೀಕ್ಷಿಸಿದ ನಂತರ ಸಮಾರಂಭವನ್ನು ಉದ್ಘಾಟಿಸಿದ ಪರಮಪೂಜ್ಯ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ, ಪ್ರಪಂಚದ ಹಲವು ಮಂದಿ ವಿಜ್ಞಾನಿಗಳು ಸಂಶೋಧಿಸಿದ ಆವಿಷ್ಕಾರಗಳು ಮಾನವ ಜನಾಂಗದ ಏಳಿಗೆಗೇ ಹೊರತು ಅದರ ವಿನಾಶಕ್ಕಾಗಿ ಅಲ್ಲ. ಒಂದು ದೇಶದ ಪ್ರಗತಿಯನ್ನು ತಿಳಿಯಲು ಆ ದೇಶದ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ತಿಳಿದರೆ ಅರ್ಥವಾಗುತ್ತದೆ. ಇಂದಿನ ಮಕ್ಕಳಿಗೆ ವಿಜ್ಞಾನದ ಬಗ್ಗೆ ಆಸಕ್ತಿಯನ್ನು ಮೂಡಿಸುವುದು ಅಗತ್ಯವಾಗಿದೆ. ದೇಶದ ಬಾಹ್ಯಾಕಾಶ ವಿಜ್ಞಾನದಲ್ಲಿ ಇಸ್ರೋದ ಸಾಧನೆ ಮಹತ್ತರವಾದುದು. ಅಂತೆಯೇ ನಾಸಾದ ಸಾಧನೆ ಇನ್ನೂ ದೊಡ್ಡದು. ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿಯನ್ನು ಮೂಡಿಸಿದ್ದೇ ಆದರೆ ಮುಂದೊಂದು ದಿನ ಇಸ್ರೋ, ನಾಸಾವನ್ನು ಹಿಂದಿಕ್ಕುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ತಿಳಿಸಿದರು.

ಸಮಾರಂಭದಲ್ಲಿ ಪೂಜ್ಯ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಸೋಮೇಶ್ವರನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಸೌಮ್ಯನಾಥ ಸ್ವಾಮಿಗಳವರು, ಶಾಸಕರಾದ ಶ್ರೀ ಕೆ.ಸುರೇಶಗೌಡರು, ಡಿಎಸ್‌ಇಆರ್‌ಟಿ ನಿರ್ದೇಶಕರಾದ ಶ್ರೀ ಎಂ.ಆರ್ ಮಾರುತಿರವರು, ಡಿಡಿಪಿಐ ಶ್ರೀ ರಘುನಂದನ್‌ರವರು, ಯುವ ವಿಜ್ಞಾನಿ ಸನ್ನಿದ್ ನಾಯ್ಕ್, ಸೈಯದ್ ಇಖ್ರಾ ಉರೂಜ್ ಮುಂತಾದ ಗಣ್ಯರು ಉಪಸ್ಥಿತರಿದ್ದರು.

**ದಿನಾಂಕ 6.2.2020ರಂದು ರಾಜ್ಯ ಸರ್ಕಾರದ ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಸಹಕಾರ ಸಚಿವರಾದ ಸನ್ಮಾನ್ಯ ಶ್ರೀ ಎಸ್.ಟಿ.ಸೋಮಶೇಖರ್‌ರವರು, ಸಣ್ಣ ಕೈಗಾರಿಕಾ ಸಚಿವರಾದ ಸನ್ಮಾನ್ಯ ಶ್ರೀ ಗೋಪಾಲಯ್ಯರವರು, ನಗರಾಭಿವೃದ್ಧಿ ಸಚಿವರಾದ ಸನ್ಮಾನ್ಯ ಶ್ರೀ ಭೈರತಿ ಬಸವರಾಜುರವರು, ವೈದ್ಯಕೀಯ ಶಿಕ್ಷಣ ಸಚಿವರಾದ ಸನ್ಮಾನ್ಯ ಡಾ॥ ಸುಧಾಕರ್‌ರವರು, ಕೃಷಿ ಸಚಿವರಾದ ಸನ್ಮಾನ್ಯ ಶ್ರೀ ಬಿ.ಸಿ.ಪಾಟೀಲ್‌ರವರು, ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಖಾತೆ ಸಚಿವರಾದ ಸನ್ಮಾನ್ಯ ಶ್ರೀ ನಾರಾಯಣಗೌಡರವರು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.**






# ಶ್ರೀ ಆದಿಚುಂಚನಗಿರಿ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನಲ್ಲಿ
# 'ಕಲಾ ಸಂಭ್ರಮ–2020' ಸಾಂಸ್ಕೃತಿಕೋತ್ಸವ

ದಿನಾಂಕ 14.2.2020ರಂದು ಬೆಂಗಳೂರಿನ ವಿಜಯನಗರದಲ್ಲಿರುವ ಶ್ರೀ ಆದಿಚುಂಚನಗಿರಿ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನಲ್ಲಿ **'ಕಲಾ ಸಂಭ್ರಮ–2020'** ಸಾಂಸ್ಕೃತಿಕೋತ್ಸವ ಸಮಾರಂಭದ ಉದ್ಘಾಟನಾ ಸಮಾರಂಭವು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ|| ನಿರ್ಮಲಾನಂದನಾಥ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು.

ಜ್ಯೋತಿ ಬೆಳಗಿಸುವ ಮೂಲಕ ಕಲಾ ಸಂಭ್ರಮಕ್ಕೆ ಚಾಲನೆ ನೀಡಿದ ಪರಮಪೂಜ್ಯ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ, ಮೌಲ್ಯಗಳನ್ನು ಬಿತ್ತುವ ಶಿಕ್ಷಣವೇ ನಿಜವಾದ ಶಿಕ್ಷಣ. ಅದು ಸಮಾಜದ ಬದಲಾವಣೆಗೆ ನಾಂದಿಯಾಗಬೇಕು. ಅಂತಹ ಶಿಕ್ಷಣ ಎಲ್ಲರಿಗೂ ಸಿಗುವಂತಾಗಬೇಕು. ವಿದ್ಯಾರ್ಥಿಗಳು ವಿನಯ, ವಿವೇಕ, ಸಹನೆ ಮುಂತಾದ ಗುಣಗಳಿಂದ ವಿದ್ಯೆಯನ್ನು ಪಡೆದು ಸಮಾಜದ ಉದ್ಧಾರಕ್ಕಾಗಿ ವಿನಿಯೋಗಿಸಬೇಕು. ಪ್ರತಿ ಮಗುವಿನಲ್ಲೂ ಅಗಾಧವಾದ ಪ್ರತಿಭೆ ಅಡಕವಾಗಿದೆ. ಅದನ್ನು ಬೆಳಕಿಗೆ ತರುವ ಕೆಲಸವನ್ನು ಶಿಕ್ಷಕರು ಮಾಡಬೇಕು. ಕೆಲವು ಮಕ್ಕಳಲ್ಲಿ ಓದುವ ಆಸಕ್ತಿ ಇದ್ದರೆ, ಮತ್ತೆ ಕೆಲವರಲ್ಲಿ ಆಟೋಟ, ಸಂಗೀತ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪ್ರತಿಭೆ ಇರುತ್ತದೆ. ಶಿಕ್ಷಕರು ಮಕ್ಕಳನ್ನು ಸೂಕ್ಷ್ಮವಾಗಿ ಗುರುತಿಸಿ ಅವರ ಅಭಿರುಚಿಗೆ ತಕ್ಕಂತೆ ಅವರಲ್ಲಿರುವ ಪ್ರತಿಭೆಯನ್ನು ಅನಾವರಣ ಮಾಡುವ ಪ್ರಯತ್ನದಲ್ಲಿ ಸಾಗಬೇಕು.

ನಮ್ಮ ಹಿರಿಯರು ಅನಕ್ಷರಸ್ಥರಾಗಿದ್ದರೂ ಅವರಲ್ಲಿ ಮಾನವೀಯತೆ ಇತ್ತು. ಆದರೆ ಇಂದು ಜನರಲ್ಲಿ ಶಿಕ್ಷಣ ಹೆಚ್ಚಾದಂತೆ ಮಾನವೀಯತೆ ಕಡಿಮೆಯಾಗುತ್ತಿದೆ. ವಿದ್ಯಾರ್ಥಿಗಳು ತಮ್ಮ ಗುರಿ ತಲುಪಲು ಕೌಶಲ, ಶ್ರಮ ಅನುಸರಿಸಬೇಕು. ತಮ್ಮ ವರ್ತನೆಯಲ್ಲಿ ಬದಲಾವಣೆ ತಂದುಕೊಳ್ಳಬೇಕು. ಉತ್ತಮ ವರ್ತನೆಯಿಂದ ಗೌರವ ದೊರೆಯುತ್ತದೆ. ವರ್ತನೆ, ಕೌಶಲ, ಚಾರಿತ್ರ್ಯಗಳು ಮನುಷ್ಯನ ಸಾಧನೆಗೆ ದಾರಿದೀಪವಿದ್ದಂತೆ. ಉದ್ಯೋಗ ನೀಡುವವರು ವ್ಯಕ್ತಿಯ ಕೌಶಲದ ಜತೆಗೆ ವರ್ತನೆಯನ್ನೂ ಪರಿಗಣಿಸುತ್ತಾರೆ. ನಮ್ಮ ವರ್ತನೆಯಿಂದಾಗಿಯೇ ಕೆಲವೊಮ್ಮೆ ಉದ್ಯೋಗದಿಂದ ವಂಚಿತರಾಗುತ್ತೇವೆ ಎಂಬುದನ್ನು ಯುವ ಜನತೆ ಮರೆಯಬಾರದು ಎಂದು ತಿಳಿಸಿದರು.

ಪೂಜ್ಯ ಶ್ರೀ ಶ್ರೀ ಸೌಮ್ಯನಾಥಸ್ವಾಮಿಗಳವರು ಮಾತನಾಡಿ, ಮಕ್ಕಳ ಮನಸ್ಸು ಮೃದುವಾಗಿರುತ್ತದೆ. ಅವರಲ್ಲಿ ಕಲಿಕೆಯ ಹಾಗೂ ಗ್ರಹಣಶಕ್ತಿ ಅಪಾರವಾಗಿರುತ್ತದೆ. ಮಕ್ಕಳಿಗೆ ತಂದೆ–ತಾಯಿಗಳು ಆದರ್ಶ ವ್ಯಕ್ತಿಗಳು. ಅವರ ಪ್ರತಿ ಕಾರ್ಯಗಳನ್ನು ಮಕ್ಕಳು ಗಮನಿಸುತ್ತಿರುತ್ತಾರೆ. ಕಾರಣ ಮೊದಲು ಹೆತ್ತವರು ತಮ್ಮ ನಡವಳಿಕೆಗಳನ್ನು ಸುಧಾರಿಸಿಕೊಳ್ಳಬೇಕು. ಪಾಲಕರು ಸ್ವತಃ ತಪ್ಪುದಾರಿಯಲ್ಲಿ ಸಾಗದೇ ನೈತಿಕತೆಯನ್ನು ರಕ್ಷಿಸಿ ಪೋಷಿಸುತ್ತಿರಬೇಕು. ನಿಮ್ಮ ಮಗು ನಾಳಿನ ನಿಮ್ಮ ಭವಿಷ್ಯದ ನಿರ್ಮಾಣಕಾರ. ಕುಟುಂಬ, ಸಮಾಜ, ದೇಶಕ್ಕೆ ಅವನ ಅವಶ್ಯಕತೆಯಿದೆ ಎಂಬುದನ್ನು ಅರಿತು ಹೆತ್ತವರು ಮಕ್ಕಳನ್ನು ಸರಿಯಾಗಿ ಬೆಳೆಸಬೇಕು. ಮಕ್ಕಳಿಗೆ ದೈಹಿಕವಾಗಿ, ಮಾನಸಿಕವಾಗಿ ಸುಂದರ ರೂಪ ಕೊಡುವ ಚತುರ ಶಿಲ್ಪಿಗಳು ಪಾಲಕರಾಗಬೇಕು ಎಂದು ತಿಳಿಸಿದರು.

ಸಮಾರಂಭದಲ್ಲಿ ಶ್ರೀ ಕೆ.ವೆಂಕಟೇಶ್‌ರವರು, ಶ್ರೀ ಬಿ.ಹೆಚ್. ಮುತ್ತಯ್ಯರವರು, ಶ್ರೀ ಸಿ.ಟಿ.ಶಿವೇಗೌಡರು, ಪ್ರಾಂಶುಪಾಲರಾದ ಶ್ರೀ ಕೆ.ಪಾಂಡುರಂಗರಾವ್ ಮುಂತಾದ ಗಣ್ಯರು ಉಪಸ್ಥಿತರಿದ್ದರು.



**ದಿನಾಂಕ 14.2.2020ರಂದು ಬೆಂಗಳೂರು ಹೊರವಲಯದ ನಗರೂರುನಲ್ಲಿರುವ ಬಿಜಿಎಸ್ ವರ್ಲ್ಡ್ ಸ್ಕೂಲ್‌ನಲ್ಲಿ ಏರ್ಪಡಿಸಿದ್ದ ವಿಜ್ಞಾನ ವಸ್ತು ಪ್ರದರ್ಶನವನ್ನು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ|| ನಿರ್ಮಲಾನಂದನಾಥ ಮಹಾಸ್ವಾಮಿಗಳವರು ನೆರವೇರಿಸಿದರು. ಪೂಜ್ಯ ಶ್ರೀ ಶ್ರೀ ಸೌಮ್ಯನಾಥ ಸ್ವಾಮಿಗಳವರು, ಪ್ರಾಂಶುಪಾಲರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.**



# ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ

# ಘಟಿಕೋತ್ಸವ ಸಮಾರಂಭ

ದಿನಾಂಕ 21.1.2020ರಂದು ಮಂಡ್ಯ ಜಿಲ್ಲೆಯ ಬಿ ಜಿ ನಗರದಲ್ಲಿರುವ ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ್ದ **'ಘಟಿಕೋತ್ಸವ ಸಮಾರಂಭ'**ವು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು.

ಬೆಂಗಳೂರಿನ ನಾರಾಯಣ ಹೃದಯಾಲಯದ ಡಾ॥ ಕೆ.ಭುಜಂಗಶೆಟ್ಟಿರವರು ಜ್ಯೋತಿ ಬೆಳಗಿಸುವ ಮೂಲಕ ಸಮಾರಂಭವನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಇತ್ತೀಚೆಗಿನ ದಿನಗಳಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಹಣ ಗಳಿಕೆಯ ಉದ್ದೇಶದಿಂದ ವೈದ್ಯರು ಮೌಲ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ವೈದ್ಯಕೀಯ ಕ್ಷೇತ್ರ ಹಣ ಗಳಿಕೆಯ ಮಾರ್ಗವಾಗಬಾರದು. ವೈದ್ಯ ವಿದ್ಯಾರ್ಥಿಗಳು ನೈಪುಣ್ಯತೆ ಹಾಗೂ ತಾಳ್ಮೆಯಿಂದ ರೋಗಿಗಳನ್ನು ನೋಡಿಕೊಳ್ಳಬೇಕು. ರೋಗಿಗಳು ಚಿಕಿತ್ಸೆ ಪಡೆದು ಮನೆಗೆ ಹಿಂದಿರುಗುವಾಗ ಆಶೀರ್ವಾದ ಮಾಡಿ ಹೋಗುವ ರೀತಿಯಲ್ಲಿ ವೈದ್ಯರು ಕರ್ತವ್ಯ ನಿರ್ವಹಿಸಿದಾಗ ವೈದ್ಯ ವೃತ್ತಿ ಸಾರ್ಥಕತೆ ಪಡೆಯುತ್ತದೆ ಎಂದು ತಿಳಿಸಿದರು.

ಸಮಾರಂಭದ ದಿವ್ಯ ಸಾನ್ನಿಧ್ಯ ಪೀಠದಿಂದ ಆಶೀರ್ವಚನ ನೀಡಿದ ಪರಮಪೂಜ್ಯ ಮಹಾಸ್ವಾಮಿಗಳವರು, ದೇಶದ ಸುಮಾರು ಇಪ್ಪತ್ತಾರು ರಾಜ್ಯಗಳ ವಿದ್ಯಾರ್ಥಿಗಳು ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣದಲ್ಲಿ ಪದವಿ ಪಡೆದುಕೊಂಡು ಹೋದಮೇಲೆ ಕೈಗೊಳ್ಳುವ ವೈದ್ಯ ವೃತ್ತಿಯನ್ನು ಸೇವೆ ಮಾಡಲು ದೊರಕಿರುವ ಒಂದು ಸದವಕಾಶ ಎಂಬ ಭಾವನೆಯಿಂದ ರೋಗಿಗಳ ಆರೋಗ್ಯ ರಕ್ಷಣೆ ಮಾಡಬೇಕು. ಬಡ ರೋಗಿಗಳನ್ನು ತಾತ್ಸಾರದಿಂದ ಕಾಣದೆ ಮಾನವೀಯ ದೃಷ್ಟಿಯಿಂದ ಚಿಕಿತ್ಸೆಯನ್ನು ನೀಡಬೇಕು, ಮಕ್ಕಳು ವೈದ್ಯರಾಗಲೆಂಬ ಆಸೆಯಿಂದ ತಂದೆ ತಾಯಿಯರು ತಮ್ಮ ಒಡವೆ. ಆಸ್ತಿಯನ್ನು ಮಾರಿ ಮಕ್ಕಳನ್ನು ವೈದ್ಯರನ್ನಾಗಿಸಿರುತ್ತಾರೆ. ಅವರ ಆಸೆಗಳನ್ನು ಪೂರೈಸುವುದು ತಮ್ಮ ಕರ್ತವ್ಯವೆಂದು ಅರಿತುಕೊಳ್ಳಬೇಕು ಎಂದು ತಿಳಿಸಿದರು.

ಸಮಾರಂಭದಲ್ಲಿ ಡಾ॥ ಎಸ್. ಚಂದ್ರಶೇಖರಶೆಟ್ಟಿರವರು, ಡಾ॥ ಎನ್.ಎಸ್. ರಾಮೇಗೌಡರು, ಡಾ॥ ಬಿ.ಜಿ.ಮಹೇಂದ್ರರವರು, ಡಾ॥ ಎಂ.ಜಿ.ಶಿವರಾಮುರವರು ಮುಂತಾದ ಗಣ್ಯರು ಉಪಸ್ಥಿತರಿದ್ದರು.

ದಿನಾಂಕ 12.2.2020ರಂದು ಉತ್ತರ ಕನ್ನಡ ಜಿಲ್ಲೆಯ ಮಿರ್ಜಾ ಕುಮುಟಾದಲ್ಲಿರುವ ಬಿಜಿಎಸ್ ಸೆಂಟ್ರಲ್ ಸ್ಕೂಲ್‌ನ ದಶಮಾನೋತ್ಸವ ಸಮಾರಂಭವು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಸಮಾರಂಭದಲ್ಲಿ ಪೂಜ್ಯ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಧರ್ಮಪಾಲನಾಥ ಸ್ವಾಮಿಗಳವರು, ಪ್ರಾಂಶುಪಾಲರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.








# ಉತ್ತರ ಕನ್ನಡ ಜಿಲ್ಲೆ ಹೊನ್ನಾವರದ ಕೆಳಗನೂರಿನಲ್ಲಿ

# ಒಕ್ಕಲಿಗರ ಸಮುದಾಯ ಭವನ ಉದ್ಘಾಟನೆ

ದಿನಾಂಕ 12.2.2020ರಂದು ಉತ್ತರ ಕನ್ನಡ ಜಿಲ್ಲೆ ಹೊನ್ನಾವರದ ಕೆಳಗನೂರಿನಲ್ಲಿ ತಾಲ್ಲೂಕು ಒಕ್ಕಲಿಗರ ಸಂಘವು ನಾಲ್ಕು ಕೋಟಿ ರೂಪಾಯಿಗೂ ಹೆಚ್ಚು ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ **ಒಕ್ಕಲಿಗರ ಸಮುದಾಯ ಭವನದ ಉದ್ಘಾಟನಾ ಸಮಾರಂಭ**ವು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು.

ಸಮುದಾಯ ಭವನವನ್ನು ಲೋಕಾರ್ಪಣೆಗೊಳಿಸಿದ ಪರಮಪೂಜ್ಯ ಮಹಾಸ್ವಾಮಿಗಳವರು ಜ್ಯೋತಿ ಬೆಳಗುವ ಮೂಲಕ ಸಮಾರಂಭವನ್ನು ಉದ್ಘಾಟಿಸಿದರು. ರಾಜ್ಯದ ಉಪಮುಖ್ಯಮಂತ್ರಿಗಳಾದ ಸನ್ಮಾನ್ಯ ಡಾ॥ ಸಿ.ಎನ್.ಅಶ್ವತ್ಥನಾರಾಯಣರವರು, ಪೂಜ್ಯ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಧರ್ಮಪಾಲನಾಥಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಮುಂತಾದ ಗಣ್ಯರು ಈ ಶುಭ ಸಂದರ್ಭಕ್ಕೆ ಸಾಕ್ಷಿಯಾದರು.

ಸಮಾರಂಭದಲ್ಲಿ ಆಶೀರ್ವಚನ ನೀಡಿದ ಪರಮಪೂಜ್ಯ ಮಹಾಸ್ವಾಮಿಗಳವರು, ಮಾನವ ಸಂಪನ್ಮೂಲ ಜಡವಾಗಿದ್ದಾಗ ಯಾವುದೇ ತಂತ್ರಜ್ಞಾನವಿದ್ದರೂ, ಅದೆಷ್ಟೇ ಆವಿಷ್ಕಾರಗಳು ನಡೆದರೂ ಯಾವುದೇ ಪ್ರಯೋಜನವಾಗಲಾರದು. ಆರ್ಥಿಕವಾಗಿ ಬಡವರಾದರೂ ಕೊಡುವ ಗುಣದಲ್ಲಿ ದೊಡ್ಡವರಾಗಿದ್ದರೆ ಅಂತಹ ಸಮಾಜ ಬಹುದೊಡ್ಡ ಶಕ್ತಿಯನ್ನು ಹೊಂದಲು ಸಾಧ್ಯ ಎಂಬುದನ್ನು ಹೊನ್ನಾವರ ತಾಲ್ಲೂಕಿನ ಒಕ್ಕಲಿಗರು ಸಾಬೀತು ಮಾಡಿದ್ದಾರೆ. ಸಂಘಟನೆಗೆ ಹೊಸ ಅರ್ಥ ಕಲ್ಪಿಸುವಂತೆ ಹೊನ್ನಾವರದ ಒಕ್ಕಲಿಗರು ಸಂಘಟಿತರಾಗಿ ಮಹತ್ಕಾರ್ಯವನ್ನು ಸಾಧಿಸಿ ತೋರಿಸಿದ್ದಾರೆ.

ನಾವು ನಮ್ಮ ನಮ್ಮಲ್ಲಿಯೇ ಪ್ರತ್ಯೇಕವಾಗಿದ್ದಾಗ ಒಡೆದು ಆಳುವವರಿಗೆ ಅನುಕೂಲವಾಗುತ್ತದೆ. ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವುದನ್ನು ಸಮಾಜ ಅರ್ಥ ಮಾಡಿಕೊಳ್ಳಬೇಕು. ಯಾವ ವ್ಯಕ್ತಿ ತನಗಾಗಿ ಬದುಕುತ್ತಾನೋ ಅವನ ಬದುಕು ನಿಜವಾದ ಬದುಕಲ್ಲ. ಯಾವ ವ್ಯಕ್ತಿ ತನ್ನ ಬದುಕಿನುದ್ದಕ್ಕೂ ಸಮಾಜಕ್ಕಾಗಿ ಬದುಕುತ್ತಾನೋ ಅವನು ತನ್ನ ಭೌತಿಕ ಶರೀರವನ್ನು ತೊರೆದ ಮೇಲೂ ಜನ ಮಾನಸದಲ್ಲಿ ಶಾಶ್ವತವಾಗಿ ನೆಲೆಸುತ್ತಾನೆ. ಅದು ನಿಜವಾದ ಬದುಕು ಎನಿಸಿಕೊಳ್ಳುತ್ತದೆ.

ಯಾವುದೇ ಮಠದ ಸ್ವಾಮಿಗಳಾಗಿರಲಿ, ಅವರು ಒಂದು ಸಮಾಜವನ್ನು ಪ್ರತಿನಿಧಿಸುತ್ತಾರೆ. ಆ ಸಮಾಜದ ಸಂಘಟನೆಗಾಗಿ ಶ್ರಮಿಸುತ್ತಾರೆ. ಅವರ ಸುತ್ತ ಆ ಸಮುದಾಯದ ಎಲ್ಲರೂ ಇರುತ್ತಾರೆ. ಅಂತಹ ಮಠಗಳಿಗೆ ಅನುದಾನ ಕೊಟ್ಟರೆ ಆ ಸಮುದಾಯದ ಅಭಿವೃದ್ಧಿಯಾಗುತ್ತದೆ. ಅಭಿವೃದ್ಧಿಗಾಗಿ ಎಲ್ಲರೂ ಸಂಘಟಿತರಾಗುತ್ತಾರೆ. ತನ್ಮೂಲಕ ಸಮಾಜ ಹಾಗೂ ದೇಶಕ್ಕೆ ಒಳಿತಾಗುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಸಮುದಾಯ ಭವನದ ನಿರ್ಮಾಣಕ್ಕೆ ನಿವೇಶನ ನೀಡಿದ ಶ್ರೀಮತಿ ಮಾದೇವಿ ವಿಷ್ಣುಗೌಡರನ್ನು, ಪದ್ಮ ಪ್ರಶಸ್ತಿ ಪುರಸ್ಕೃತರಾಗಿರುವ ಶ್ರೀಮತಿ ತುಳಸಿಗೌಡರನ್ನು, ಸಂಘದ ಸಂಸ್ಥಾಪಕರಾದ ಶ್ರೀ ಎಂ.ಎಚ್.ಗೌಡರನ್ನು, ಶ್ರೀಮತಿ ರತ್ನಾ ಮಂಜುಗೌಡರನ್ನು, ಮಾಜಿ ಶಾಸಕರಾದ ಶ್ರೀ ಮರಿಕಾಳ ವೈದ್ಯರನ್ನು ಪರಮಪೂಜ್ಯ ಮಹಾಸ್ವಾಮಿಗಳವರು ಸನ್ಮಾನಿಸಿ ಆಶೀರ್ವದಿಸಿದರು.

ಸಮಾರಂಭಕ್ಕೂ ಮೊದಲು ಪರಮಪೂಜ್ಯ ಮಹಾಸ್ವಾಮಿಗಳವರನ್ನು ಹೊನ್ನಾವರದ ಪ್ರಮುಖ ಬೀದಿಗಳಲ್ಲಿ ಬೈಕ್ ಮತ್ತು ಕಾರುಗಳ ರ್‍ಯಾಲಿ ಮೂಲಕ ಕೆಳಗನೂರು ಸಮುದಾಯ ಭವನದವರೆಗೆ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಂಡು ತಮ್ಮ ಕಲಾ ನೈಪುಣ್ಯತೆಯನ್ನು ಪ್ರದರ್ಶಿಸಿದರು.

ಸಮಾರಂಭದಲ್ಲಿ ಇತ್ತೀಚೆಗಷ್ಟೆ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ಶ್ರೀಮತಿ ತುಳಸಿಗೌಡರವರು, ತೀರ್ಥಹಳ್ಳಿ ಶಾಸಕರಾದ ಶ್ರೀ ಅರಗ ಜ್ಞಾನೇಂದ್ರರವರು, ಭಟ್ಕಳದ ಶಾಸಕರಾದ ಶ್ರೀ ಸುನಿಲ್ ನಾಯ್ಕರವರು, ಶ್ರೀ ಟಿ.ಜೆ.ಗೌಡರು, ಕರವೇ ರಾಜ್ಯಾಧ್ಯಕ್ಷರಾದ ಶ್ರೀ ಟಿ.ಎ.ನಾರಾಯಣಗೌಡರು, ಶ್ರೀ ಕೆ.ಟಿ.ಗೌಡರು, ಉತ್ತರ ಕನ್ನಡ ಜಿಲ್ಲಾ ಒಕ್ಕಲಿಗ ಸಂಘ ಮತ್ತು ಹೊನ್ನಾವರ ತಾಲ್ಲೂಕು ಒಕ್ಕಲಿಗ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು. ॐ



# ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

## ಶ್ರೀ ಆದಿಚುಂಚನಗಿರಿ ಕ್ಷೇತ್ರ–571811

## ಶ್ರೀ ಆದಿಚುಂಚನಗಿರಿ ಜಾತ್ರಾ ಮಹೋತ್ಸವ –2020

02.03.2020: ಜಾತ್ರಾ ಮಹೋತ್ಸವ ಪ್ರಾರಂಭ, ನಾಂದಿ ಪೂಜೆ, ಧರ್ಮಧ್ವಜ ಸ್ಥಾಪನೆ ಮತ್ತು ಸಂಗೀತೋತ್ಸವ

03.03.2020: ಶ್ರೀ ಚಂದ್ರಮೌಳೀಶ್ವರಸ್ವಾಮಿ ಉತ್ಸವ ಮತ್ತು ಜೋಗಪ್ಪಗಳ ಸಮಾವೇಶ

04.03.2020: ಶ್ರೀ ಮಲ್ಲೇಶ್ವರಸ್ವಾಮಿ ಉತ್ಸವ ಮತ್ತು ಸಂಗೀತೋತ್ಸವದ ಸಮಾರೋಪ.

05.03.2020: ಶ್ರೀ ಸಿದ್ಧೇಶ್ವರಸ್ವಾಮಿ ಉತ್ಸವ ಮತ್ತು ಉಚಿತ ಸಾಮೂಹಿಕ ವಿವಾಹ

06.03.2020: ಶ್ರೀ ಕಾಲಭೈರವೇಶ್ವರಸ್ವಾಮಿ ಹೂವಿನ ಪಾಲಕಿ ಉತ್ಸವ, ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರ ಮುತ್ತಿನ ಪಾಲಕಿ ಉತ್ಸವ ಮತ್ತು ರಾಸುಗಳ ಪ್ರದರ್ಶನ ಮತ್ತು ಪಶು ಮೇಳದ ಉದ್ಘಾಟನೆ

07.03.2020: ಬೆಳಗ್ಗೆ 10.00 ಗಂಟೆಗೆ ಶ್ರೀ ಕಾಲಭೈರವೇಶ್ವರಸ್ವಾಮಿಗೆ ಸುವರ್ಣ ಕವಚ ಅಲಂಕಾರ ಪೂಜೆ ಮತ್ತು ಶ್ರೀ ಗಂಗಾಧರೇಶ್ವರಸ್ವಾಮಿಗೆ ರಜತ ನಾಗಾಭರಣ ಅಲಂಕಾರ ಪೂಜೆ, ರಾತ್ರಿ 7.00 ಗಂಟೆಗೆ ಜಗದ್ಗುರು ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರಿಂದ ಜ್ವಾಲಾಪೀಠಾರೋಹಣ ಮತ್ತು ಸಿಂಹಾಸನಪೂಜೆ,

ರಾತ್ರಿ 9.00 ಗಂಟೆಗೆ ಚಂದ್ರಮಂಡಲೋತ್ಸವ ಬಿ ಜಿ ಎಸ್ ಡರ್ಟ್‌ಟ್ರಾಕ್ ಬೈಕ್ ರೇಸ್ ಮತ್ತು ಕೃಷಿ ಕೈಗಾರಿಕಾ ವಸ್ತು ಪ್ರದರ್ಶನದ ಉದ್ಘಾಟನೆ

08.03.2020: ಪ್ರಾತಃಕಾಲ ಅಭಿಷೇಕ ಪೂಜಾವಿಧಿಗಳು, ರಾತ್ರಿ 7.00 ಗಂಟೆಗೆ ಜಗದ್ಗುರು ಶ್ರೀಶ್ರೀಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಸರ್ವಧರ್ಮ ಸಮ್ಮೇಳನ ರಾತ್ರಿ 8.00 ಗಂಟೆಗೆ ಶ್ರೀ ಕಾಲಭೈರವೇಶ್ವರಸ್ವಾಮಿ ತಿರುಗಣಿ ಉತ್ಸವ, ರಾತ್ರಿ 9.00 ಗಂಟೆಗೆ ಶ್ರೀ ಕಾಲಭೈರವೇಶ್ವರಸ್ವಾಮಿ ಪುಷ್ಕರಣಿಯಲ್ಲಿ ತೆಪ್ಪೋತ್ಸವ, ನಾಟಕ ಮತ್ತು ಯಕ್ಷಗಾನ ಪ್ರದರ್ಶನ

09.03.2020: ಬೆಳಗಿನ ಜಾವ 4.00 ಗಂಟೆಗೆ ಶ್ರೀ ಗಂಗಾಧರೇಶ್ವರಸ್ವಾಮಿ ರಥೋತ್ಸವ ಮತ್ತು ಜಗದ್ಗುರು ಶ್ರೀಶ್ರೀಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮಿಗಳವರ ಅಡ್ಡಪಾಲಕಿ ಉತ್ಸವ

09.03.2020: ಸಂಜೆ 7.00 ಗಂಟೆಗೆ ಶ್ರೀ ಸೋಮೇಶ್ವರಸ್ವಾಮಿ ಉತ್ಸವ, 108 ಗ್ರಾಮದೇವತೆಗಳ ಸಮೇತ ಗಿರಿಪ್ರದಕ್ಷಿಣೆ ಮಹೋತ್ಸವ.

10.03.2020: ಅವಭೃತ ಮಹೋತ್ಸವ. ಧರ್ಮಧ್ವಜ ಅವರೋಹಣ.

ಸದ್ಭಕ್ತ ಮಹಾಶಯರು ಈ ಎಲ್ಲಾ ಧಾರ್ಮಿಕ ಮಹೋತ್ಸವಗಳಲ್ಲಿ ಪಾಲ್ಗೊಂಡು ಶ್ರೀ ಗುರು ದೇವತಾ ದರ್ಶನಾಶೀರ್ವಾದ ಪಡೆದು ಪುಣ್ಯ ಭಾಜನರಾಗಬೇಕೆಂದು ಕೋರುತ್ತೇವೆ.

–ವ್ಯವಸ್ಥಾಪಕರು



Printed by: T.Venkatesh, Published by: Sri Nirmalanandanatha Swamiji on behalf of Adichunchanagiri Shikshana Trust
and Printed at Abhimaani Prakashana, No.2/4, Dr.Rajkumar Road, Rajajinagar, Bengaluru-10,
Published at Sri Adichunchanagiri Mahasamsthana Math, Vijayanagar, Bengaluru-40 Editor: Sri Nirmalanandanatha Swamiji









# ಶ್ರೀಕ್ಷೇತ್ರದಲ್ಲಿ ಜ್ಞಾನ ವಿಜ್ಞಾನ ತಂತ್ರಜ್ಞಾನ ಸಮ್ಮೇಳನ





Regd. with the Registrar of News Papers for India No. 36722 /1984 Adichunchanagiri March 2020
Postal Registration No. CPMG / KA-BGW-39 /2018-2020 Licenced to post without Prepayment Licence No. WPP-31
Date of Publication 28.2.2020. Posted at Bengaluru PSO - 560 026 on 1st/2nd of every month






# ವಿಜ್ಞಾತಂ ಪ್ರಶಸ್ತಿ ಪ್ರದಾನ ಸಮಾರಂಭ

